ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 8 ಸೋಮವಾರ 2025

ಸಂಪುಟ: 46 | ಸಂಚಿಕೆ: 230 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೈಸೂರು–ಕುಶಾಲನಗರ ರಾಷ್ಟ್ರೀಯ ಹೆದ್ದಾರಿ ಪ್ಯಾಕೇಜ್ 2ಕ್ಕೆ ಹಸಿರು ನಿಶಾನೆ

ಇಂದಿನಿಂದ ಕಾಮಗಾರಿ ಆರಂಭ

ಕುಶಾಲನಗರ–ಮಡಿಕೇರಿ ಮಾರ್ಗ ಅಗಲೀಕರಣಕ್ಕೂ ಪ್ರಸ್ತಾವನೆಗೆ ಸಿದ್ಧತೆ

- 4,126 ಕೋಟಿ ವೆಚ್ಚದ 22.7 ಕಿಮೀ 4 ಪಥದ ರಸ್ತೆ
- ಹೆದ್ದಾರಿ ನಿರ್ಮಾಣಕ್ಕೆ ರಾಷ್ಟ್ರೀಯ ವನ್ಯಜೀವಿ ಮಂಡಳಿ ಸಮ್ಮತಿ
- 18 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸುವ ಗುರಿ

ಮೈಸೂರು, ಡಿ.7(ಬಿಎಲ್‌ಯು)– ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಹೆಚ್‌ಎಐ) 4,126 ಕೋಟಿ ಯೋಜನೆಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿ (ಎನ್‌ಬಿಡಬ್ಲ್ಯೂಎಲ್) ಕೊನೆಗೂ ಅನುಮತಿ ನೀಡಿದೆ. ಈ ಹಿನ್ನೆಲೆ ಬಸವನ ಹಳ್ಳಿಯಿಂದ ಪಿರಿಯಾಪಟ್ಟಣದವರೆಗಿನ 22.7 ಕಿಲೋಮೀಟರ್‌ನ 2ನೇ ಪ್ಯಾಕೇಜ್ ಕಾಮಗಾರಿ ನಾಳೆ (ಡಿ.8) ಯಿಂದ ಆರಂಭವಾಗಲಿದೆ.

ಮೈಸೂರು ಹಾಗೂ ಕುಶಾಲನಗರದ ರಾಷ್ಟ್ರೀಯ ಹೆದ್ದಾರಿ ಯೋಜನೆ ಅನುಷ್ಠಾನಗೊಳ್ಳುವ ಬಸವನಹಳ್ಳಿ ಬಳಿ ವನ್ಯಜೀವಿಗಳ ವಾಸಸ್ಥಾನವಾಗಿರುವ ಕಾರಣ ರಾಷ್ಟ್ರೀಯ ವನ್ಯಜೀವಿ ಮಂಡಳಿ ಅನುಮತಿ ನೀಡಿರಲಿಲ್ಲ.

ಆದರೆ ಈ ಯೋಜನೆ ಸಾರ್ವಜನಿಕರಿಗೆ ಬಹುಪಯೋಗಿ ಆಗಿರುವ ಹಿನ್ನೆಲೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮನವೊಲಿಕೆಗೆ ಕೊನೆಗೂ ಸ್ಪಂದಿಸಿದ ರಾಷ್ಟ್ರೀಯ ವನ್ಯಜೀವಿ ಮಂಡಳಿ 22.7 ಕಿಲೋಮೀಟರ್‌ನ ನಾಲ್ಕು ಪಥದ ಯೋಜನೆಗೆ ಕೊನೆಗೂ ಹಸಿರು ನಿಶಾನೆ ತೋರಿದೆ.

ಮೈಸೂರು ಹಾಗೂ ಕುಶಾಲನಗರದ ನಡುವಿನ ರಾಷ್ಟ್ರೀಯ ಹೆದ್ದಾರಿ ಎನ್‌ಹೆಚ್–275ರಲ್ಲಿ 92.5 ಕಿಲೋ ಮೀಟರ್‌ಗಳ ನಾಲ್ಕು ಪಥದ ಹೆದ್ದಾರಿ ನಿರ್ಮಾಣ ಯೋಜನೆ ಇದಾಗಿದೆ. ಹೆಚ್ಚು ವಾಹನ ದಟ್ಟಣೆಯ ದ್ವಿಪಥ ಹೆದ್ದಾರಿಯಲ್ಲಿ ಸಲಿಸಾಗಿ ವಾಹನಗಳ ಸಂಚಾರ ಕಷ್ಟ ಸಾಧ್ಯವಾಗಿತ್ತು. ಇದರಿಂದ ಅಲ್ಲಲ್ಲಿ ■6ನೇ ಪುಟಕ್ಕೆ

ಪ್ಯಾಕೇಜ್‌ಗಳ ವಿವರ

ಪ್ಯಾಕೇಜ್ 1	ಕುಶಾಲನಗರದಿಂದ ಮಡಿಕೇರಿವರೆಗಿನ 22 ಕಿಲೋಮೀಟರ್
ಪ್ಯಾಕೇಜ್ 2	ಗುಡ್ಡೆ ಹೊಸೂರಿನಿಂದ ಹಾಸನ–ಪಿರಿಯಾಪಟ್ಟಣ ರಸ್ತೆ ಜಂಕ್ಷನ್ 22.7 ಕಿಲೋಮೀಟರ್
ಪ್ಯಾಕೇಜ್ 3	ಹೆಮ್ಮಿಗೆ ಗ್ರಾಮ (ಹಾಸನ– ಪಿರಿಯಾಪಟ್ಟಣ ರಸ್ತೆ ಜಂಕ್ಷನ್) ರಾಮನಾಥಪುರ– ತೆರಕಣಾಂಬಿಗೆ ರಸ್ತೆ ಮತ್ತು ಹುಣಸೂರಿನ ನಗರ ಜಂಕ್ಷನ್– 24.1 ಕಿಲೋಮೀಟರ್
ಪ್ಯಾಕೇಜ್ 4	ರಾಮನಾಥಪುರ–ತೆರಕಣಾಂಬಿ ರಸ್ತೆ ಮತ್ತು ಕೆ.ಆರ್.ನಗರ ಜಂಕ್ಷನ್‌ನಿಂದ ಯಲಚಹಳ್ಳಿ 26.5 ಕಿಲೋಮೀಟರ್
ಪ್ಯಾಕೇಜ್ 5	ಯಲಚಹಳ್ಳಿಯಿಂದ ಶ್ರೀರಂಗಪಟ್ಟಣ ಬೈಪಾಸ್‌ನ ಪಶ್ಚಿಮವಾಹಿನಿ ಬಳಿ– 19 ಕಿಲೋ ಮೀಟರ್



ಮೈಸೂರು–ಕುಶಾಲನಗರ ರಾಷ್ಟ್ರೀಯ ಹೆದ್ದಾರಿ ಪ್ಯಾಕೇಜ್ 2ರ ಕಾಮಗಾರಿಗೆ ಸಿದ್ಧತೆ.

ಐದು ಪ್ಯಾಕೇಜ್ ಯೋಜನೆ

ಮೈಸೂರು ಹಾಗೂ ಕುಶಾಲನಗರ ಹೆದ್ದಾರಿಯನ್ನು ಐದು ಪ್ಯಾಕೇಜ್‌ಗಳಾಗಿ ವಿಂಗಡಿಸಿ ಕಾಮಗಾರಿ ನಡೆಸಲಾಗುತ್ತಿದೆ. ಕುಶಾಲನಗರದಿಂದ ಮಡಿಕೇರಿವರೆಗೆ 22 ಕಿಲೋ ಮೀಟರ್ ಉದ್ದದ ಪ್ರಸ್ತಾವಿತ ರಸ್ತೆ ನಿರ್ಮಾಣ ಯೋಜನೆ ದಟ್ಟ ಅರಣ್ಯ ಪ್ರದೇಶಗಳ ಮೂಲಕ ಹಾದು ಹೋಗುವ ಹಿನ್ನೆಲೆ ಅರಣ್ಯ ಇಲಾಖೆಯ ಅನುಮತಿಗಾಗಿ ಕಾಯಲಾಗುತ್ತಿದೆ.

ಕುಶಾಲನಗರ ಹಾಗೂ ಮಡಿಕೇರಿ ನಡುವಿನ ರಸ್ತೆಯಲ್ಲಿ ವಾಹನ ದಟ್ಟಣೆ ಹೆಚ್ಚಾಗಿದೆ. ಈ ಹಿನ್ನೆಲೆ ಇದನ್ನು ನಿಭಾಯಿಸಲು ಅನುಕೂಲಾಗುವಂತೆ ಬಸವನಹಳ್ಳಿಯಿಂದ ಹೆದ್ದಾರಿಯನ್ನು ಅಗಲೀಕರಣ ಮಾಡುವ ಪ್ರಸ್ತಾವನೆಯನ್ನು ಸಿದ್ಧಪಡಿಸಲಾಗುತ್ತಿದೆ ಎಂದು ಕೊಡಗು ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಡಿ.ಎಂ.ಗಿರೀಶ್ ಅವರು ತಿಳಿಸಿದ್ದಾರೆ.

ಈ ಪ್ರಸ್ತಾವನೆಯನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಮತ್ತು ರಾಜ್ಯ ಸರ್ಕಾರಕ್ಕೆ ಶೀಘ್ರದಲ್ಲೇ ಸಲ್ಲಿಸಲಾಗುವುದು. ವಾಹನ ದಟ್ಟಣೆ ಹೆಚ್ಚಾಗಿ ರಸ್ತೆ ಕಿರಿದಾಗಿರುವ ಸ್ಥಳಗಳಲ್ಲಿ ಅಗಲೀಕರಣ ಮಾಡುವ ಸ್ಥಳವನ್ನು ಗುರುತಿಸಲಾಗುತ್ತಿದೆ ಎಂದು ಗಿರೀಶ್ ಹೇಳಿದ್ದಾರೆ.

ಕುಶಾಲನಗರ ಹಾಗೂ ಮಡಿಕೇರಿ ನಡುವಿನ ಅರಣ್ಯ ಪ್ರದೇಶದಲ್ಲಿ ಹೆದ್ದಾರಿ ನಿರ್ಮಾಣ ಮಾಡುವ ಸಂಬಂಧ ಡಿಪಿಆರ್ (ವಿಸ್ತೃತ ಯೋಜನಾ ವರದಿ) ಸಿದ್ಧಪಡಿಸುವ ಮೊದಲು ಲೋಕೋಪಯೋಗಿ ಇಲಾಖೆಯಾಗಲಿ ಅಥವಾ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವಾಗಲಿ ಅರಣ್ಯ ಇಲಾಖೆಯವರೊಡನೆ ಸಮಾಲೋಚನೆ ನಡೆಸಬೇಕು. ಆಗ ಈ ಯೋಜನೆಯ ಕಾರ್ಯ ಸಾಧ್ಯತೆ ಪರಿಶೀಲನೆ ನಡೆಸಿ, ಅನುಮೋದನೆ ನೀಡುವ ಸಂಬಂಧ ಪ್ರಕ್ರಿಯೆ ಆರಂಭಿಸಬಹುದು ಎಂದು ಕೊಡಗು ಡಿಸಿಎಫ್ ಅಭಿಷೇಕ್ ಸ್ಪಷ್ಟಪಡಿಸಿದರು.

ಕೆಎಸ್‌ಸಿಎ ಅಧ್ಯಕ್ಷರಾಗಿ ವೆಂಕಟೇಶ್ ಪ್ರಸಾದ್

ಮೈಸೂರು ಝೋನ್‌ಗೆ ಪಿ. ಶ್ರೀನಿವಾಸಪ್ರಸಾದ್ ಆಯ್ಕೆ



ವೆಂಕಟೇಶ್ ಪ್ರಸಾದ್

ಬೆಂಗಳೂರು, ಡಿ.7– ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಪದಾಧಿಕಾರಿಗಳ ಚುನಾವಣೆ ಭಾನುವಾರ ನಡೆದು, ಫಲಿತಾಂಶ ಹೊರ ಬಿದ್ದಿದೆ. ಮಾಜಿ ಕ್ರಿಕೆಟಿಗ ವೆಂಕಟೇಶ್ ಪ್ರಸಾದ್ ಅಧ್ಯಕ್ಷರಾಗಿ ಗೆಲುವು ಸಾಧಿಸಿದ್ದಾರೆ.

ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸೇರಿ ಒಟ್ಟು 16 ಸ್ಥಾನಗಳಿಗೆ ಇಂದು (ಡಿ.7) ಬೆಳಗ್ಗೆಯಿಂದ ಸಂಜೆವರೆಗೆ ಮತದಾನ ನಡೆದಿದ್ದು, ಇದೀಗ ಮತದಾನ ಎಣಿಕೆಯಲ್ಲಿ ವೆಂಕಟೇಶ್ ಪ್ರಸಾದ್ ಅವರು ತಮ್ಮ ಪ್ರತಿಸ್ಪರ್ಧಿ ಕೆ.ಎನ್.ಶಾಂತಕುಮಾರ್ ವಿರುದ್ಧ 191 ಮತಗಳ ಅಂತರದಲ್ಲಿ ಗೆದ್ದು ಬೀಗಿದ್ದಾರೆ.

ಚಲಾವಣೆಯಾದ 1307 ಮತಗಳ ಪೈಕಿ ಮಾಜಿ ಕ್ರಿಕೆಟಿಗರಾದ ಜಾವಗಲ್ ಶ್ರೀನಾಥ್ ಹಾಗೂ ಅನಿಲ್ ಕುಂಬ್ಳೆ ಬಣದ ವೆಂಕಟೇಶ್ ಪ್ರಸಾದ್ ಅವರು 749 ಮತ ಪಡೆದು ಗೆಲುವು ಸಾಧಿಸಿದರೆ, ಬ್ರಿಜೇಶ್ ಪಾಟೀಲ್ ಬಣದ ಶಾಂತಕುಮಾರ್ ಅವರು 558 ಮತ ಪಡೆದು ಪರಾಭವಗೊಂಡಿದ್ದಾರೆ.



ಶ್ರೀನಿವಾಸಪ್ರಸಾದ್

ವೆಂಕಟೇಶ್ ಪ್ರಸಾದ್ ಬಣದಿಂದ ಸುಜಿತ್ ಸೋಮಸುಂದರ್ (719 ಮತ) ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದರೆ, ಮಧುಕರ್(736 ಮತ) ಅವರು ಖಜಾಂಚಿಯಾಗಿ ಆಯ್ಕೆಯಾದರು. ಕಾರ್ಯದರ್ಶಿಯಾಗಿ ಸಂತೋಷ್ ಮೆನನ್ (675 ಮತ), ಸಹಕಾರ್ಯದರ್ಶಿಯಾಗಿ ಬಿ.ಕೆ.ರವಿ (669 ಮತ), ಮ್ಯಾನೇಜಿಂಗ್ ಕಮಿಟ್ ಅಜೀವ ಸದಸ್ಯರಾಗಿ ■6ನೇ ಪುಟಕ್ಕೆ

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭಾನುವಾರವೂ 61 ಇಂಡಿಗೋ ವಿಮಾನಗಳು ರದ್ದು



ಬೆಂಗಳೂರು, ಡಿ.7– ಬೆಂಗಳೂರು ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಂಡಿಗೋ ವಿಮಾನಗಳ ಹಾರಾಟದಲ್ಲಿನ ವ್ಯತ್ಯಯ ಇಂದೂ (ಭಾನುವಾರ) ಸಹ ಮುಂದುವರೆದಿದೆ. ತಾಂತ್ರಿಕ ಕಾರಣಗಳಿಂದ ಕೆಂಪೇಗೌಡ ವಿಮಾನ ನಿಲ್ದಾಣದಿಂದ ನಿರ್ಗಮಿಸಬೇಕಿದ್ದ ಬರೋಬ್ಬರಿ 61 ವಿಮಾನಗಳ ಹಾರಾಟವನ್ನು ರದ್ದುಗೊಳಿಸಲಾಗಿದೆ. ದೆಹಲಿ, ಹೈದರಾಬಾದ್, ಇಂದೋರ್, ರಾಯಪುರ್, ಕೊಲ್ಕತ್ತಾ, ಮಂಗಳೂರು, ಕೊಚ್ಚಿ, ಶ್ರೀನಗರ, ಭೂಪಾಲ್ ಸೇರಿದಂತೆ ದೇಶದ ಹಲವು ನಗರಗಳಿಗೆ ತೆರಳಬೇಕಿದ್ದ ವಿಮಾನಗಳು ಕ್ಯಾನ್ಸಲ್ ಆಗಿವೆ. ■6ನೇ ಪುಟಕ್ಕೆ

ಇಂದಿನಿಂದ ಬೆಳಗಾವಿ ಚಳಿಗಾಲದ ಅಧಿವೇಶನ ಆರಂಭ

ಬೆಳಗಾವಿ, ಡಿ. 7– ನಾಳೆ (ಡಿ.8)ಯಿಂದ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಚಳಿಗಾಲದ ವಿಧಾನಮಂಡಲ ಅಧಿವೇಶನ ಆರಂಭವಾಗಲಿದ್ದು, ಒಟ್ಟು 10 ದಿನಗಳ ಕಾಲ ಅಧಿವೇಶನ ನಡೆಯಲಿದೆ.



ಈ ಹಿನ್ನಲೆ ಕುಂದಾನಗರಿ ಸಕಲ ರೀತಿಯಲ್ಲಿ ಸಜ್ಜಾಗಿದೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಸಚಿವರು, ಶಾಸಕರು ಸೇರಿದಂತೆ ಸಚಿವಾಲಯದ ಅಧಿಕಾರಿಗಳು, ಸಿಬ್ಬಂದಿಗೆ ಊಟ, ವಸತಿ ವ್ಯವಸ್ಥೆ ಮಾಡಲಾಗಿದೆ. ಜಿಲ್ಲಾಡಳಿತದಿಂದ ಈಗಾಗಲೇ 3 ಸಾವಿರ ರೂಮ್ ಬುಕ್ ಆಗಿದ್ದು, ಸಿಎಂ ಮತ್ತು ಡಿಸಿಎಂಗೆ ಅತಿಥಿ ಗೃಹದಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲಾಗಿದೆ. ■6ನೇ ಪುಟಕ್ಕೆ

ಕಾರು ಪಲ್ಟಿಯಾಗಿ ಮೂವರು ದುರ್ಮರಣ

ನಾಗಮಂಗಲ ಬಳಿ ದುರ್ಘಟನೆ

ಮಂಡ್ಯ, ಡಿ. 7– ಕಾರು ಅಪಘಾತದಲ್ಲಿ ಮೂವರು ದುರ್ಮರಣ ಹೊಂದಿರುವಂತಹ ಘಟನೆ ಜಿಲ್ಲೆಯ ನಾಗಮಂಗಲ ತಾಲೂಕಿನ ನಾಗತಿಹಳ್ಳಿ ಬಳಿ ನಡೆದಿದೆ. ಕಾರಿನಲ್ಲಿದ್ದ ಚಿಕ್ಕಮಗಳೂರು ಮೂಲದ ಚನ್ನೇಗೌಡ(60), ಸರೋಜಮ್ಮ(55) ಮತ್ತು ಜಯಮ್ಮ(70) ಮೃತರು.

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಚಂದ್ರೇಗೌಡ, ಅವರ ಪತ್ನಿ, ಸರೋಜ ಹಾಗೂ ಚಿಕ್ಕಮಗಳೂರು ನಗರಸಭೆಯ ಮಾಜಿ ಅಧ್ಯಕ್ಷ ನಿಂಗೇಗೌಡ ಪತ್ನಿ ಜಯಮ್ಮ ಅವರು ಥೈಲ್ಯಾಂಡ್ ಟೂರ್ ಮುಗಿಸಿ ಶನಿವಾರ ಸಂಜೆ ಬೆಂಗಳೂರಿಗೆ ವಾಪಸಾಗಿ, ಅಲ್ಲಿಂದ ಕಿಯಾ ಕಾರಿನಲ್ಲಿ ಚಿಕ್ಕಮಗಳೂರಿಗೆ ತೆರಳುತ್ತಿದ್ದರು. ಈ ವೇಳೆ ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ಡಿವೈಡರ್‌ಗೆ ಡಿಕ್ಕಿ ಬಳಿಕ ಕಾರು ಪಲ್ಟಿ ಹೊಡೆದಿದೆ. ಇದರ ಪರಿಣಾಮ ಮೂವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಈ ಪ್ರಕರಣ ದಲ್ಲಿ ಸಾವನ್ನಪ್ಪಿದ ಚಂದ್ರೇಗೌಡರೇ ಕಾರು ಚಾಲನೆ ಮಾಡುತ್ತಿದ್ದರು ಎಂದು ಹೇಳಲಾಗಿದೆ. ಈ ಕುರಿತು ಬಿಂಡಿಗನವಿಲೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪಹರಣವಾದ 8 ತಾಸಿನೊಳಗೆ ರಿಯಲ್ ಎಸ್ಟೇಟ್ ಉದ್ಯಮಿ ರಕ್ಷಣೆ

■ ವಿಜಯನಗರ ಠಾಣೆ ಪೊಲೀಸರ ಮಿಂಚಿನ ಕಾರ್ಯಾಚರಣೆ ■ ಐವರು ಅಪಹರಣಕಾರರ ಬಂಧನ ■ ಉದ್ಯಮಿ ಅಪಹರಿಸಿ ಕೋಟಿ ರೂ. ಒತ್ತೆ ಹಣಕ್ಕೆ ಬೇಡಿಕೆ ಇಟ್ಟಿದ್ದ ದುಷ್ಕರ್ಮಿಗಳು

ಮೈಸೂರು, ಡಿ.7(ಆರ್‌ಕೆ)– ರಿಯಲ್ ಎಸ್ಟೇಟ್ ಉದ್ಯಮಿಯನ್ನು ಅಪಹರಿಸಿದ ಕೇವಲ ಎಂಟು ತಾಸಿನಲ್ಲೇ ಅಪಹರಣಕಾರರನ್ನು ಬಂಧಿಸಿ, ಉದ್ಯಮಿಯನ್ನು ರಕ್ಷಿಸುವಲ್ಲಿ ಮೈಸೂರಿನ ವಿಜಯನಗರ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ವಿಜಯನಗರ 4ನೇ ಹಂತದ ನಿವಾಸಿಯಾಗಿರುವ ರಿಯಲ್ ಎಸ್ಟೇಟ್ ಉದ್ಯಮಿ ಲೋಕೇಶ್ ಎಂಬುವರನ್ನು ಅಪಹರಿಸಿದ್ದ ಕೆಆರ್‌ಎಸ್ ರಸ್ತೆಯ ಪಂಪ್ ಹೌಸ್ ಹೊಸಹಳ್ಳಿ ಗ್ರಾಮದ ಹೆಚ್.ಎಂ.ಸಂತೋಷ್, ಆರ್.ಪ್ರಜ್ವಲ್, ವಿ.ಎನ್. ದರ್ಶನ್, ಪ್ರೀತಂ ಮತ್ತು ಮೇಟಗಳ್ಳಿ ನಿವಾಸಿ ಹೆಚ್.ಎಸ್.ಅಭಿಷೇಕ್ ಬಂಧನಕ್ಕೊಳಗಾಗಿರುವ ಅಪಹರಣಕಾರರು.




ಲೋಕೇಶ್ ಹಾಗೂ ಅಪಹರಣಕ್ಕೆ ಬಳಸಿದ ಟಾಟಾ ಸುಮೋ.



ಅಪಹರಣ ಆರೋಪಿಗಳು

ವಿವರ: ರಿಯಲ್ ಎಸ್ಟೇಟ್ ಉದ್ಯಮಿ ಹಾಗೂ ಫೈನಾನ್ಷಿಯರ್ ಆಗಿರುವ ಲೋಕೇಶ್ ಅವರ ಸ್ನೇಹಿತ ಆರೋಪಿ ಸಂತೋಷ್‌ಗೆ ಲೋಕೇಶ್ ಅವರ ಹಣಕಾಸು ವ್ಯವಹಾರಗಳು ಸಂಪೂರ್ಣವಾಗಿ ಗೊತ್ತಿತ್ತು. ಈ ಹಿನ್ನೆಲೆಯಲ್ಲಿ ಅವರನ್ನು ಅಪಹರಿಸಿ ಹಣ ಗಳಿಸಬೇಕೆಂಬ ಉದ್ದೇಶದಿಂದ ತಮ್ಮ ಸ್ನೇಹಿತರೇ ಆದ ಇತರ ಆರೋಪಿಗಳೊಡಗೂಡಿ ಸಂಚು ರೂಪಿಸಿದ್ದಾನೆ. ಸುಮಾರು 15 ದಿನಗಳ ಕಾಲ ಲೋಕೇಶ್ ಅವರ ಚಲನ–ವಲನಗಳನ್ನು ಈ ತಂಡ ಗಮನಿಸಿತ್ತು.

ನಿನ್ನೆ (ಶನಿವಾರ) ರಾತ್ರಿ 8.15ರ ಸಮಯದಲ್ಲಿ ತಮ್ಮ ಅಭ್ಯಾಸದಂತೆ ವಿಜಯನಗರ 3ನೇ ಹಂತದ ಹೆರಿಟೇಜ್ ಕ್ಲಬ್‌ಗೆ ಹೋಗಿದ್ದ ಲೋಕೇಶ್ ಅವರು ತಮ್ಮ ರಾಯಲ್ ಎನ್‌ಫೀಲ್ಡ್ ಬೈಕ್‌ನಲ್ಲಿ ಮನೆಗೆ ಹೋಗಲು ಹೊರ ಬರುತ್ತಿದ್ದಂತೆಯೇ ಸಂತೋಷ್ ನೇತೃತ್ವದ ತಂಡ ಟಾಟಾ ಸುಮೋ (ಕೆಎ 12 ಎಂ 638)ದಲ್ಲಿ ಬಂದು ಅವರ ಬೈಕ್ ಅನ್ನು ಅಡ್ಡಗಟ್ಟಿ, ಕಣ್ಣಿಗೆ ಖಾರದಪುಡಿ ಎರಚಿ ಹಲ್ಲೆ ನಡೆಸಿದ್ದಲ್ಲದೇ, ■6ನೇ ಪುಟಕ್ಕೆ

ದೀಪೋತ್ಸವದಿಂದ ಮನಸ್ಸಿನ ಕತ್ತಲು ತೊಲಗುತ್ತದೆ

ಶ್ರೀ ಆದಿಚುಂಚನಗಿರಿ ಮಠದ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಅಭಿಮತ



ಮೈಸೂರಿನ ಹೆಬ್ಬಾಳದಲ್ಲಿರುವ ಶ್ರೀ ಲಕ್ಷ್ಮಿಕಾಂತಸ್ವಾಮಿ ದೇವಸ್ಥಾನದ ಆವರಣದಲ್ಲಿ ನಡೆದ ದೀಪೋತ್ಸವ ಕಾರ್ಯಕ್ರಮವನ್ನು ಶ್ರೀ ಆದಿಚುಂಚನಗಿರಿ ಮಠದ ಪೀಠಾಧಿಪತಿ ಡಾ.ನಿರ್ಮಲಾನಂದನಾಥ ಮಹಾಸ್ವಾಮೀಜಿ ಉದ್ಘಾಟಿಸಿದರು.

ಮೈಸೂರು,ಡಿ.7(ಎಂಟಿವೈ)– ದೀಪೋತ್ಸವ ಆಚರಿಸುವುದರಿಂದ ಮನಸ್ಸಿನಲ್ಲಿರುವ ಕತ್ತಲನ್ನು ಹೋಗಲಾಡಿಸಿ ದೀಪ ಪರಂಜ್ಯೋತಿಯಾಗಿ ಬೆಳಗಲಿದೆ ಎಂದು ಶ್ರೀ ಆದಿಚುಂಚನಗಿರಿ ಮಠದ ಪೀಠಾಧಿಪತಿ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿ ತಿಳಿಸಿದರು.

ಮೈಸೂರಿನ ಹೆಬ್ಬಾಳದಲ್ಲಿರುವ ಶ್ರೀ ಲಕ್ಷ್ಮಿಕಾಂತಸ್ವಾಮಿ ದೇವಸ್ಥಾನದ ಆವರಣದಲ್ಲಿ ಶನಿವಾರ ರಾತ್ರಿ ನಡೆದ ದೀಪೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬೆಳಕು ಪ್ರತಿಯೊಬ್ಬ ಮನುಷ್ಯನಲ್ಲಿಯೂ ಇರುತ್ತದೆ. ಅದನ್ನು ಪಡೆಯಲು ಹಂಬಲ, ಸಾಧನೆ ಮಾಡಬೇಕು. ಕತ್ತಲಿಂದ ಬೆಳಕಿನೆಡೆಗೆ ಸಾಗಬೇಕಾದರೆ ಅಜ್ಞಾನಿಯಾಗಿರುವ ಮನುಷ್ಯನಲ್ಲಿರುವ ಮಲದೋಷ, ನಿಕ್ಷೇಪ ದೋಷ, ಆವರಣದೋಷವನ್ನು ನಿವಾರಿಸಿಕೊಳ್ಳಬೇಕು. ವಿಜ್ಞಾನ, ಧ್ಯಾನ, ಸನ್ಮಾರ್ಗದೆಡೆಗೆ ಪ್ರತಿಯೊಬ್ಬರು ಸಾಗಿದಾಗ ಜೀವನ ಸಾರ್ಥಕವಾಗುತ್ತದೆ. ಎಲ್ಲರಿಗೂ ಒಳ್ಳೆಯದು ಮಾಡಲಿ ಎಂದು ಆಶೀರ್ವಚನ ನೀಡಿದರು.

ಕಾರ್ಯಕ್ರಮದಲ್ಲಿ ಶಾಖಾ ಮಠದ ಶ್ರೀ ಸೋಮೇಶ್ವರನಾಥಸ್ವಾಮೀಜಿ, ಶಾಸಕರಾದ ಜಿ.ಟಿ.ದೇವೇಗೌಡ, ಕೆ. ಹರೀಶ್ ಗೌಡ, ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ಮಾಜಿ ಸಂಸದ ಪ್ರತಾಪ್‌ಸಿಂಹ, ಮುಖಂಡರಾದ ಗುಂಡಪ್ಪಗೌಡ, ನಾರಾಯಣ, ಪ್ರಶಾಂತ್ ಗೌಡ, ಶ್ರೀಧರ್, ಗಂಗಾಧರ್, ಮಂಜೇಗೌಡ, ಬೆಳಗೊಳ ಸುಬ್ರಹ್ಮಣ್ಯ, ಗೋಪಾಲ್ ಹಾಜರಿದ್ದರು. ತುಮಕೂರಿನ ವಿನೋದ್ ದೀಕ್ಷಿತ್‌ರವರಿಂದ ಪೂಜಾ ಕಾರ್ಯಕ್ರಮಗಳು ನೆರವೇರಿದವು. ಭಜನಾ ಕಾರ್ಯಕ್ರಮ ನೃತ್ಯರೂಪಕ, ದೇವರ ಮೆರವಣಿಗೆ ನಡೆಯಿತು. ಸಾವಿರಾರು ಭಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

'ಕನ್ನಡ ಸ್ಪರ್ಧಾ ಕೈಪಿಡಿ' ಕೃತಿ ಲೋಕಾರ್ಪಣೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾರತೀಯ ಭಾಷಾ ಸಂಸ್ಥಾನದ ಹಿರಿಯ ಸಂಪನ್ಮೂಲ ವ್ಯಕ್ತಿ ಡಾ.ಆರ್.ಉಷಾರಾಣಿ ರಚಿತ 'ಕನ್ನಡ ಸ್ಪರ್ಧಾ ಕೈಪಿಡಿ' ಕೃತಿಯನ್ನು ಹಿರಿಯ ಪತ್ರಕರ್ತ ಸಿ.ಕೆ.ಮಹೇಂದ್ರ ಲೋಕಾರ್ಪಣೆಗೊಳಿಸಿದರು.

ಮೈಸೂರು, ಡಿ.7(ಜಿಎ)– ಮೈಸೂರಿನ ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ವತಿಯಿಂದ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾರತೀಯ ಭಾಷಾ ಸಂಸ್ಥಾನದ ಹಿರಿಯ ಸಂಪನ್ಮೂಲ ವ್ಯಕ್ತಿ ಡಾ.ಆರ್.ಉಷಾರಾಣಿ ರಚಿಸಿರುವ 'ಕನ್ನಡ ಸ್ಪರ್ಧಾ ಕೈಪಿಡಿ' ಕೃತಿಯನ್ನು ಹಿರಿಯ ಪತ್ರಕರ್ತ ಸಿ.ಕೆ.ಮಹೇಂದ್ರ ಲೋಕಾರ್ಪಣೆಗೊಳಿಸಿದರು.


ನಂತರ ಮಾತನಾಡಿದ ಅವರು, ಡಾ.ಆರ್.ಉಷಾರಾಣಿ ಅವರು ಸಾಕಷ್ಟು ಶ್ರಮ ಹಾಕಿ 30ಕ್ಕೂ ಹೆಚ್ಚು ಪುಸ್ತಕಗಳನ್ನು ಅಧ್ಯಯನ ಮಾಡಿ 'ಕನ್ನಡ ಸ್ಪರ್ಧಾ ಕೈಪಿಡಿ'ಯನ್ನು ಹೊರ ತಂದಿದ್ದಾರೆ. ಕೃತಿಯೂ ವಿದ್ಯಾರ್ಥಿಗಳಿಗೆ ಅನುಕೂಲಕರವಾಗಿದೆ. ಉಷಾ ಅವರು ಮತ್ತಷ್ಟು ಕೃತಿಗಳನ್ನು ಬರೆಯಲಿ ಎಂದರು.

ಇತ್ತೀಚಿನ ದಿನಗಳಲ್ಲಿ ವಿದ್ಯುನ್ಮಾನ ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಕನ್ನಡ ಪದಗಳಿಗಿಂತಲೂ ಇಂಗ್ಲೀಷ್ ಪದಗಳನ್ನು ನೋಡುತ್ತಿದ್ದೇವೆ. ಅದರಲ್ಲಿಯೂ ಕೊರೊನಾ ಬಂದಾಗ ಇವುಗಳ ಬಳಕೆ ಹೆಚ್ಚಳಗೊಂಡಿತ್ತು. ಆದರೆ, ಮುದ್ರಣ ಮಾಧ್ಯಮದಲ್ಲಿ ಮಾತ್ರ ಕನ್ನಡ ಪದಗಳನ್ನು ಇಂದಿಗೂ ಬಳಸಲಾಗುತ್ತಿದೆ. ಅದರಿಂದಲ್ಲೇ ಓದುಗರ ವಿಶ್ವಾಸವನ್ನು ಪತ್ರಿಕೆ ಉಳಿಸಿಕೊಂಡಿದೆ ಎಂದು ತಿಳಿಸಿದರು.

ನಂತರ ಕೃತಿ ಕುರಿತು ಮಹಾರಾಜ ಕಾಲೇಜಿನ ಡಾ.ಟಿ.ತಿಮ್ಮಯ್ಯ ಕೃತಿ ಕುರಿತು ಮಾತನಾಡಿ, 'ಕನ್ನಡ ಸ್ಪರ್ಧಾ ಕೈಪಿಡಿ' ಕೃತಿಯೂ ವಿದ್ಯಾರ್ಥಿಗಳಿಗೆ ದಿಕ್ಸೂಚಿಯಾಗಿದೆ. ಎಲ್ಲಾ ಭಾಗಗಳನ್ನು ಉತ್ತಮವಾಗಿ ಮೂಡಿ ಬಂದಿದೆ. ವ್ಯಾಕರಣವನ್ನು ಸುಲಭವಾಗಿ ತಿಳಿಸಿದ್ದಾರೆ. ಕೃತಿಯಲ್ಲಿ ಕೆಲವೊಂದು ಅಕ್ಷರ ದೋಷಗಳಿವೆ. ಮತ್ತೆ ಮುದ್ರಣ ಮಾಡುವಾಗ ಅದನ್ನು ಸರಿಪಡಿಸಿ ಎಂದು ಸಲಹೆ ನೀಡಿದರು.

ಲೇಖಕಿ ಡಾ.ಆರ್.ಉಷಾ ರಾಣಿ ಮಾತನಾಡಿ, ಮನೆ ಮತ್ತು ಕಚೇರಿ ಕೆಲಸದ ನಡುವೆ ಬಿಡುವಿನ ಸಮಯದಲ್ಲಿ ಕೃತಿ ಬರೆದಿದ್ದು, ಸುದೀರ್ಘವಾಗಿ ಹತ್ತು ವರ್ಷ ತೆಗೆದುಕೊಂಡಿದ್ದೇನೆ. ವಿದ್ಯಾರ್ಥಿಗಳು ಕೃತಿಯನ್ನು ತೆಗೆದುಕೊಂಡು ಓದಿದರೆ, ಕೃತಿ ಬರೆದದ್ದಕ್ಕೂ ಸಾರ್ಥಕ ಅನಿಸುತ್ತದೆ ಎಂದರು. ಕಾರ್ಯಕ್ರಮದಲ್ಲಿ ಪ್ರಕಾಶಕರಾದ ಡಿ.ಎನ್.ಲೋಕಪ್ಪ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಉಪಸ್ಥಿತರಿದ್ದರು.

ಮೈಸೂರಲ್ಲಿ ದತ್ತಾತ್ರೇಯ ಜಯಂತಿ



ಮೈಸೂರಿನ ದೇವರಾಜ ಅರಸು ರಸ್ತೆಯಲ್ಲಿರುವ ಬಿಸಿಲು ಮಾರಮ್ಮ ದೇವಾಲಯದಲ್ಲಿ ದತ್ತಾತ್ರೇಯ ಬಳಗದ ವತಿಯಿಂದ ದತ್ತಾತ್ರೇಯ ಜಯಂತಿ ಆಚರಿಸಲಾಯಿತು.

ಮೈಸೂರು,ಡಿ.7–ಮೈಸೂರಿನ ದೇವರಾಜ ಅರಸು ರಸ್ತೆಯಲ್ಲಿರುವ ಬಿಸಿಲು ಮಾರಮ್ಮ ದೇವಾಲಯದಲ್ಲಿ ದತ್ತಾತ್ರೇಯ ಜಯಂತಿಯನ್ನು ದತ್ತಾತ್ರೇಯ ಬಳಗದ ವತಿಯಿಂದ ಆಚರಿಸಲಾಯಿತು.

ಭಜನೆ, ಪೂಜೆ, ಹೋಮ–ಹವನಗಳು, ಹಾಗೂ ವಿಶೇಷ ಆರತಿ ಕಾರ್ಯಕ್ರಮದ ಮೂಲಕ ಭಕ್ತರು ಭಕ್ತಿ–ಭಾವದಿಂದ ಭಾಗವಹಿಸಿದರು. ಕರ್ನಾಟಕ ಹಿತ ರಕ್ಷಣಾ ವೇದಿಕೆ ಅಧ್ಯಕ್ಷ ವಿನಯ್ ಕುಮಾರ್, ಪಾಲಿಕೆ ಮಾಜಿಸದಸ್ಯ ಜಗದೀಶ್, ಪ್ರಮೋದ್‌ಗೌಡ, ಸಚಿನ್ ನಾಯಕ್, ಶ್ರೀ ಕನಕ ಪತ್ತಿನ ಸಹಕಾರಿ ಸಂಘದ ನಿರ್ದೇಶಕ ರವಿಚಂದ್ರ, ಹರೀಶ್‌ಗೌಡ, ಎಸ್.ಎನ್.ರಾಜೇಶ್, ನೀತು, ರವಿ, ಯತೀಶ್ ಬಾಬು, ಶ್ರೀನಿವಾಸ್, ಮಂಜುಳಾ, ಹಾಗೂ ಅನೇಕ ಭಕ್ತರು ಮತ್ತು ಬಳಗದ ಸದಸ್ಯರು ಉಪಸ್ಥಿತರಿದ್ದರು.

ಮೈಸೂರಲ್ಲಿವೆ ಅನಧಿಕೃತ ಡ್ರೈವಿಂಗ್ ಸ್ಕೂಲ್‌ಗಳು!

● ಇವುಗಳತ್ತ ಇಲ್ಲ ಆರ್‌ಟಿಓ ಗಮನ ● ಮೈಸೂರಲ್ಲಿ 2016–17ರಲ್ಲಿ 8.5 ಲಕ್ಷ ವಾಹನಗಳಿದ್ದವು ● ಪ್ರಸ್ತುತ 20 ಲಕ್ಷಕ್ಕೂ ಹೆಚ್ಚು ವಾಹನಗಳ ನೋಂದಣಿ







ಮೈಸೂರು, ಡಿ.7(ಬಿಎಲ್‌ಯು)– ಕಾರು ಸೇರಿದಂತೆ ಇತರೆ ವಾಹನಗಳನ್ನು ಚಾಲನೆ ಮಾಡಲು ತರಬೇತಿ ನೀಡುವ ಅನಧಿಕೃತ ಡ್ರೈವಿಂಗ್ ಸ್ಕೂಲ್‌ಗಳು ಮೈಸೂರಲ್ಲಿ ನಾಯಿ ಕೊಡೆಗಳಂತೆ ತಲೆ ಎತ್ತಿವೆ. ಅನಧಿಕೃತ ಡ್ರೈವಿಂಗ್ ಸ್ಕೂಲ್‌ಗಳ ತರಬೇತಿ ವಾಹನಗಳು ಕಣ್ಣೆದುರೆ ಸಾಗುತ್ತಿದ್ದರೂ ಮೈಸೂರಿನ ಪ್ರಾದೇಶಿಕ ಸಾರಿಗೆ ಇಲಾಖೆ ಅಧಿಕಾರಿಗಳು ಜಾಣ ಮೌನ, ಕುರುಡು ಪ್ರದರ್ಶಿಸುತ್ತಿದ್ದಾರೆ.

ಮೈಸೂರಿನಲ್ಲಿ 2016–17ರ ಅವಧಿಯಲ್ಲಿ ಅಧಿಕೃತವಾಗಿ 8.5 ಲಕ್ಷ ವಾಹನಗಳು ನೋಂದಣಿಯಾಗಿದ್ದವು. ಆದರೆ ಈಗ ಮೈಸೂರಿನ ವಾಹನಗಳ ಸಂಖ್ಯೆ ಸುಮಾರು 20 ಲಕ್ಷ ಮೀರಿದೆ. ಪ್ರತಿ ದಿನ ನೂರಾರು ಜನರು ಕಾರು, ಬೈಕ್ ಸೇರಿದಂತೆ ಇತರೆ ವಾಹನಗಳನ್ನು ಖರೀದಿ ಮಾಡುತ್ತಾರೆ. ಇವರಲ್ಲಿ ಬಹುತೇಕ ಮಂದಿ ವಾಹನ ಚಾಲನೆ ಮಾಡಲು ಡ್ರೈವಿಂಗ್ ಸ್ಕೂಲ್‌ನಲ್ಲಿ ತರಬೇತಿ ಪಡೆಯುತ್ತಾರೆ.

ಒಂದು ಕಾಲದಲ್ಲಿ ಕಾರು ಇದ್ದವನೇ ಶ್ರೀಮಂತ ಎಂಬ ಪರಿಸ್ಥಿತಿ ಇತ್ತು. ಆದರೆ ಈಗ ಕಾರು ಖರೀದಿ ಮಾಮೂಲಾಗಿದೆ. ಮೈಸೂರಲ್ಲಿ ಪ್ರತಿ ದಿನ ಹತ್ತಾರು ಕಾರುಗಳು ಖರೀದಿಯಾಗುತ್ತವೆ. ಹೀಗೆ ಖರೀದಿ ಮಾಡುವ ಮುನ್ನ ಶೇ.80ರಷ್ಟು ಜನರು ಡ್ರೈವಿಂಗ್ ಸ್ಕೂಲ್‌ಗಳಲ್ಲಿ ಕಾರು ಚಾಲನೆ ತರಬೇತಿ ಪಡೆಯುತ್ತಾರೆ.

ಪ್ರತಿದಿನ ಹತ್ತಾರು ಮಂದಿಗೆ ಕಾರು ಚಾಲನಾ ತರಬೇತಿ ನೀಡಲಾಗುತ್ತದೆ. 15 ದಿನಗಳ ಕಾರು ಚಾಲನಾ ತರಬೇತಿ ಹಾಗೂ ಲೈಸೆನ್ಸ್ ಮಾಡಿಸಿ ಕೊಡಲು ಡ್ರೈವಿಂಗ್ ಸ್ಕೂಲ್‌ನವರು ತರಾವರಿ ದರ ನಿಗದಿ ಮಾಡುತ್ತಾರೆ.

ಇಂತಹ ಡ್ರೈವಿಂಗ್ ಸ್ಕೂಲ್‌ನವರು ಕಡ್ಡಾಯವಾಗಿ ಪ್ರಾದೇಶಿಕ ಸಾರಿಗೆ ಆಯುಕ್ತ (ಆರ್‌ಟಿಓ)ರಿಂದ ಲೈಸೆನ್ಸ್ ಪಡೆದಿರಬೇಕು. ಆದರೆ ಲೈಸೆನ್ಸ್ ಪಡೆಯಲು ಬಹಳಷ್ಟು ನಿಯಮ ಪಾಲನೆ ಮಾಡಬೇಕು. ಇದಕ್ಕಾಗಿ ಸಾಕಷ್ಟು ಖರ್ಚು ಮಾಡಬೇಕಿದೆ. ಅಲ್ಲದೆ ನಿರ್ವಹಣಾ ವೆಚ್ಚ ಕೂಡ ಹೆಚ್ಚಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಬಹಳಷ್ಟು ಡ್ರೈವಿಂಗ್ ಸ್ಕೂಲ್‌ನವರು ಲೈಸೆನ್ಸ್ ಪಡೆಯದೆ ಅನಧಿಕೃತವಾಗಿ ನಡೆಸುತ್ತಿದ್ದಾರೆ.

ಇಂತಹ ಡ್ರೈವಿಂಗ್ ಸ್ಕೂಲ್‌ನವರು ತರಬೇತಿ ನೀಡುವ ವಾಹನಗಳು ವ್ಯವಸ್ಥಿತವಾಗೇನು ಇಲ್ಲ. ಬಹಳಷ್ಟು ವರ್ಷಗಳ ಹಳೆಯ ಕಾರುಗಳ ಮೂಲಕ ತರಬೇತಿ ನೀಡಲಾಗುತ್ತಿದೆ. ಇತ್ತೀಚೆಗೆ ಅನಧಿಕೃತವಾಗಿ ಡ್ರೈವಿಂಗ್ ಸ್ಕೂಲ್ ನಡೆಸುವ ವ್ಯಕ್ತಿಯೊಬ್ಬ ಕಾರು ಚಾಲನೆ ತರಬೇತಿ ವೇಳೆ ಅಪಘಾತದಿಂದ ವ್ಯಕ್ತಿಯೊಬ್ಬ ಮೃತಪಟ್ಟಿದ್ದ. ಈ ಕಾರಿಗೆ ಇನ್ಶೂರೆನ್ಸ್ ಇರಲಿಲ್ಲ.

ಅಲ್ಲದೆ ಡ್ರೈವಿಂಗ್ ಸ್ಕೂಲ್‌ನವರು ಎಲ್‌ಎಲ್‌ಆರ್ ನೀಡುವ ಸಂದರ್ಭದಲ್ಲಿ ಸಂಚಾರ ನಿಯಮ ಫಲಕಗಳ ಬಗ್ಗೆ ಸ್ಪಷ್ಟ ಮಾಹಿತಿ ನೀಡಬೇಕು. ಅಲ್ಲದೆ ಕಾರೊಂದನ್ನು ಡೆಮೋ ಇಟ್ಟು ಅದರ ತಾಂತ್ರಿಕತೆ ಮಾಹಿತಿ ನೀಡಬೇಕು. ಆದರೆ ಅನಧಿಕೃತವಾಗಿರುವ ಡ್ರೈವಿಂಗ್ ಸ್ಕೂಲ್‌ಗಳಲ್ಲಿ ಇದ್ಯಾವುದೇ ವ್ಯವಸ್ಥೆ ಇಲ್ಲ. ಮೈಸೂರಿನಲ್ಲಿ ಬಡಾವಣೆಗಳಿಗೊಂದರಂತೆ ಇಂತಹ ಅನಧಿಕೃತ ಡ್ರೈವಿಂಗ್ ಸ್ಕೂಲ್‌ಗಳು ತಲೆ ಎತ್ತಿವೆ. ಆದರೆ ಇವುಗಳ ವಿರುದ್ಧ ಆರ್‌ಟಿಓನವರು ಈ ತನಕ ಕ್ರಮ ಕೈಗೊಂಡಿಲ್ಲ ಎಂಬ ದೂರಿದೆ.

ಡ್ರೈವಿಂಗ್ ಸ್ಕೂಲ್‌ನಲ್ಲಿ ಇವು ಕಡ್ಡಾಯ...

ಡ್ರೈವಿಂಗ್ ಸ್ಕೂಲ್ ನಡೆಸಲು ಲೈಸೆನ್ಸ್ ಪಡೆಯುವವರು ಸರ್ಕಾರದ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಕಡ್ಡಾಯವಾಗಿ ಕಚೇರಿ ಇರಬೇಕು, ಚಾಲನೆ ತರಬೇತಿ ಪಡೆಯಲು ಬರುವ ಮಹಿಳೆಯರು, ಪುರುಷರಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಇರಬೇಕು. ಪಾರ್ಕಿಂಗ್ ಸ್ಥಳವಿರಬೇಕು, ಪ್ರತಿ 5 ವರ್ಷಕ್ಕೊಮ್ಮೆ ಆರ್‌ಟಿಓ ಅವರಿಂದ ನವೀಕರಣ ಮಾಡಿಸಿಕೊಳ್ಳಬೇಕು, ತರಬೇತಿ ನೀಡುವ ಕಾರು ಸೇರಿದಂತೆ ಇತರೆ ವಾಹನವನ್ನು ಕಚೇರಿಯಲ್ಲಿ ಡೆಮೋಗಿಟ್ಟಿರಬೇಕು, ವಾಹನದಲ್ಲಿ ಟೂಲ್ ಕಿಟ್‌ಗಳಿರಬೇಕು. ಸಂಚಾರ ನಿಯಮ ಪಾಲಿಸುವ ಸೂಚನಾ ಫಲಕಗಳ ಬಗ್ಗೆ ಮಾಹಿತಿ ನೀಡುವ ಫಲಕ ಅಳವಡಿಸಿರಬೇಕು, ತರಬೇತಿ ನೀಡುವ ಕಾರಿನ ಚಾಲಕ ಕಡ್ಡಾಯವಾಗಿ ಲೈಸೆನ್ಸ್ ಹೊಂದಿರಬೇಕು, ತರಬೇತಿ ವಾಹನಕ್ಕೆ ಆರ್‌ಸಿ ಹಾಗೂ ವಿಮೆ ಇರಬೇಕು.

ಸರ್ವೆ ಮಾಡಿಸಿ, ನಿರ್ದಾಕ್ಷಿಣ್ಯ ಕ್ರಮ

"ಅನಧಿಕೃತ ಡ್ರೈವಿಂಗ್ ಸ್ಕೂಲ್‌ಗಳ ಬಗ್ಗೆ ಸರ್ವೆ ನಡೆಸಿ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು. ಸಾರ್ವಜನಿಕರು ಹಾಗೂ ಮಾಧ್ಯಮದವರು ಮಾಹಿತಿ ನೀಡಿದರೆ ಕ್ರಮ ಕೈಗೊಳ್ಳಬಹುದು. ಮೈಸೂರಿನಲ್ಲಿ 128 ಡ್ರೈವಿಂಗ್ ಸ್ಕೂಲ್‌ಗಳಿಗೆ ಲೈಸೆನ್ಸ್ ನೀಡಲಾಗಿದೆ. ಇವುಗಳಿಗೆ ನಮ್ಮ ಅಧಿಕಾರಿಗಳು ಆಗಾಗ ಭೇಟಿ ನೀಡಿ ಪರಿಶೀಲಿಸುತ್ತಾರೆ. ಅನಧಿಕೃತವಾಗಿರುವ ಡ್ರೈವಿಂಗ್ ಸ್ಕೂಲ್‌ಗಳ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ. ಈ ವಿಚಾರದಲ್ಲಿ ರಾಜೀ ಆಗುವ ಪ್ರಶ್ನೆಯೇ ಇಲ್ಲ.

–ರಾಮಕೃಷ್ಣ, ಪ್ರಾದೇಶಿಕ ಸಾರಿಗೆ ಆಯುಕ್ತರು, ಮೈಸೂರು ವೆಸ್ಟ್

ಡಿಎಂಜಿ ಹಳ್ಳಿ ಗ್ರಾಮ ಪಂಚಾಯಿತಿಗೆ ಗಾಂಧಿ ಗ್ರಾಮ ಪುರಸ್ಕಾರ



ಮೈಸೂರು ತಾಲೂಕಿನ ದೊಡ್ಡಮಾರಗೌಡನಹಳ್ಳಿ ಗ್ರಾಮ ಪಂಚಾಯಿತಿಗೆ ರಾಜ್ಯ ಸರ್ಕಾರ ನೀಡಿರುವ 2023–24ನೇ ಸಾಲಿನಲ್ಲಿ 2ನೇ ಬಾರಿಗೆ ಗಾಂಧಿ ಗ್ರಾಮ ಪುರಸ್ಕಾರವನ್ನು ಸಚಿವ ಪ್ರಿಯಾಂಕ್ ಖರ್ಗೆ ಅವರಿಂದ ಗ್ರಾ.ಪಂ ಅಧ್ಯಕ್ಷೆ ಚಿಕ್ಕಮ್ಮ(ಲತಾ) ಹಾಗೂ ಪಿಡಿಓ ಕಂಚಿನಕೆರೆ ರುಕ್ಮಾಂಗದ ಸ್ವೀಕರಿಸುತ್ತಿರುವುದು.

ಮೈಸೂರು, ಡಿ.7(ಎಂಟಿವೈ)– ಮೈಸೂರು ತಾಲೂಕಿನ ದೊಡ್ಡಮಾರಗೌಡನಹಳ್ಳಿ ಗ್ರಾಮ ಪಂಚಾಯಿತಿಗೆ ರಾಜ್ಯ ಸರ್ಕಾರದಿಂದ 2023–24ನೇ ಸಾಲಿನಲ್ಲಿ 2ನೇ ಬಾರಿಗೆ ಗಾಂಧಿ ಗ್ರಾಮ ಪುರಸ್ಕಾರ ಲಭಿಸಿದ್ದು, ಸ್ಮರಣಿಕೆ ಮತ್ತು ರೂ. 5 ಲಕ್ಷ ರೂ. ಬಹುಮಾನ ಬಂದಿದೆ ಎಂದು ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಹಾಗೂ ಜಿಲ್ಲಾ ಪಿಡಿಓ ಸಂಘದ ಅಧ್ಯಕ್ಷ ಕಂಚಿನಕೆರೆ ರುಕ್ಮಾಂಗದ ತಿಳಿಸಿದ್ದಾರೆ.

ಪತ್ರಕರ್ತರರೊಂದಿಗೆ ಮಾತನಾಡಿದ ಅವರು, ನಮ್ಮ ಗ್ರಾ.ಪಂ.ಗೆ ಈ ಹಿಂದೆ 2013–14ರಲ್ಲಿಯೂ ಗಾಂಧಿ ಗ್ರಾಮ ಪುರಸ್ಕಾರ ಪ್ರಶಸ್ತಿ ಲಭಿಸಿತ್ತು. ನಮ್ಮ ಪಂಚಾಯಿತಿ 6 ಕಂದಾಯ ಗ್ರಾಮಗಳು, 4 ಜನವಸತಿ ಪ್ರದೇಶಗಳನ್ನು ಒಳಗೊಂಡ ಸುಮಾರು 11 ಸಾವಿರ ಜನಸಂಖ್ಯೆಯನ್ನು ಹೊಂದಿದೆ. ಗ್ರಾ.ಪಂ. ವ್ಯಾಪ್ತಿಯಲ್ಲಿ 12 ಅಂಗನವಾಡಿ ಕೇಂದ್ರಗಳಿದ್ದು, ಅವುಗಳಿಗೆ 75 ಸಾವಿರ ರೂ. ಮಿತಿಯಲ್ಲಿ ಮಕ್ಕಳು ಕುಳಿತುಕೊಳ್ಳಲು ಕುರ್ಚಿ ಮತ್ತು ಪೀಠೋಪಕರಣಗಳನ್ನು ಒದಗಿಸಲಾಗಿದೆ. 5 ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದೆ. ಗ್ರಾ.ಪಂ.ನ ಅರಿವು ಕೇಂದ್ರದಲ್ಲಿ ಒಟ್ಟು 750 ವಿದ್ಯಾರ್ಥಿಗಳು ನೊಂದಣಿಯಾಗಿದ್ದಾರೆ. 450 ಕ್ಕೂ ಹೆಚ್ಚು ಸ್ಪರ್ಧಾತ್ಮಕ ಪುಸ್ತಕಗಳು, 4 ಕಂಪ್ಯೂಟರ್ ಹಾಗೂ ವಾಚನಾಲಯ ಹೊಂದಿದ್ದು, ಪ್ರತಿನಿತ್ಯ 35ರಿಂದ 60 ಪದವಿ ವಿದ್ಯಾರ್ಥಿಗಳು, ಗ್ರಾಮಸ್ಥರು ಅರಿವು ಕೇಂದ್ರವನ್ನು ಸದುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎಂದು ಹೇಳಿದರು.

ಗ್ರಾ.ಪಂ. ವ್ಯಾಪ್ತಿಯಲ್ಲಿ 14 ಓವರ್ ಹೆಡ್ ಟ್ಯಾಂಕ್‌ಗಳಿದ್ದು, 5 ಶುದ್ಧ ಕುಡಿಯುವ ನೀರಿನ ಘಟಕಗಳಿವೆ. 12 ಹೈಮಾಸ್ಕ್ ಬೀದಿ ದೀಪಗಳನ್ನು ಅಳವಡಿಸಲಾಗಿದೆ. ಎಲ್ಲಾ ಗ್ರಾಮಗಳ ಚರಂಡಿ ಸ್ವಚ್ಛತೆ ಹಾಗೂ ನಿರ್ವಹಣೆಯನ್ನು ಪ್ರತಿನಿತ್ಯ ನಿರ್ವಹಿಸಲಾಗುತ್ತಿದೆ. ಪ್ರತಿವರ್ಷ ವಿಶೇಷಚೇತನರಿಗೆ, ಹಿರಿಯ ನಾಗರಿಕರಿಗೆ, ಮಹಿಳೆಯರಿಗೆ, ಗ್ರಾಮಸ್ಥರಿಗೆ ಆರೋಗ್ಯ ತಪಾಸಣೆ ಮಾಡಲಾಗುತ್ತಿದೆ. ನಮ್ಮ ಆಯುಷ್ಮಾನ್ ಆರೋಗ್ಯ ಕ್ಷೇಮ ಕೇಂದ್ರದಲ್ಲಿ ಪ್ರತಿನಿತ್ಯ 40ರಿಂದ 75 ಜನರು ಪ್ರಯೋಜನಾ ಪಡೆಯುತ್ತಿದ್ದಾರೆ.

ಎರಡನೇ ಬಾರಿಗೆ ನಮ್ಮ ಪಂಚಾಯಿತಿಗೆ ಬಂದ 'ಗಾಂಧಿಗ್ರಾಮ' ಪುರಸ್ಕಾರವನ್ನು ಸಚಿವ ಪ್ರಿಯಾಂಕ್ ಖರ್ಗೆ ಅವರಿಂದ ಅಧ್ಯಕ್ಷೆ ಚಿಕ್ಕಮ್ಮ(ಲತಾ) ಹಾಗೂ ಪಿಡಿಓ ಸ್ವೀಕರಿಸಿದ್ದಾರೆ. ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡರ ಸಹಕಾರ, ಗ್ರಾ.ಪಂ. ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಹಾಗೂ ಅಧಿಕಾರಿಗಳ ಸಹಕಾರದಿಂದ ಗ್ರಾಮಗಳನ್ನು ಅಭಿವೃದ್ಧಿ ಮಾಡಲು ಸಹಾಯಕವಾಗಿದೆ ಎಂದರು.

ಭತ್ತ ಖರೀದಿಗೆ ವಿದ್ಯುನ್ಮಾನ ತೂಕದ ಯಂತ್ರ ಬಳಕೆಗೆ ಸೂಚನೆ

ಮೈಸೂರು: ಟಿ.ನರಸೀಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ ಪ್ರಸ್ತುತ ಭತ್ತದ ಸುಗ್ಗಿ ಪ್ರಾರಂಭವಾಗಿದ್ದು, ರೈತರು ಭತ್ತ ಮಾರಾಟ ಮಾಡುವಾಗ ಅಧಿಕೃತ ಚೀಟಿಗಳನ್ನು ವರ್ತಕರಿಂದ ಪಡೆದುಕೊಳ್ಳಲು ತಿಳಿಯಪಡಿಸಿದೆ ಹಾಗೂ ಖರೀದಿದಾರರು ಕೃಷಿ ಹುಟ್ಟುವಳಿಗಳನ್ನು ತೂಕ ಮಾಡುವಾಗ ವಿದ್ಯುನ್ಮಾನ ತೂಕದ ಯಂತ್ರವನ್ನು ಬಳಸುತ್ತಿರುವರೇ ಎಂದು ಪರೀಕ್ಷಿಸಿಕೊಳ್ಳಬೇಕಾಗಿದೆ. ಅಧಿಕೃತ ಲೈಸನ್ಸ್ ಪಡೆದು ವ್ಯಾಪಾರ ವಹಿವಾಟು ನಡೆಸುತ್ತಿರುವ ವರ್ತಕರು ರೈತರಿಂದ ಖರೀದಿಸುವ ಕೃಷಿ ಹುಟ್ಟುವಳಿಗಳಿಗೆ ಅಧಿಕೃತ ಚೀಟಿ ನೀಡಬೇಕಾಗಿ ಹಾಗೂ ತೂಕ ಮಾಡುವಾಗ ವಿದ್ಯುನ್ಮಾನ ತೂಕದ ಯಂತ್ರವನ್ನು ಬಳಸಬೇಕಾಗಿ ಸೂಚಿಸಿದ್ದು, ಉಲ್ಲಂಘನೆ ಮಾಡಿದ್ದಾಗಿ ರೈತರಿಂದ ಲಿಖಿತ ದೂರು ಬಂದಲ್ಲಿ ಸಂಬಂಧಪಟ್ಟವರ ವಿರುದ್ಧ ನಿಯಮಾನುಸಾರ ಕ್ರಮ ವಹಿಸಲಾಗುವುದು ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

8.12.2025 ಸೋಮವಾರ, ಮಳೆ ನಕ್ಷತ್ರ: ಜ್ಯೇಷ್ಠ 03.12.2025ರಿಂದ 15.12.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ಚೌತಿ, ನಕ್ಷತ್ರ: ಪುನರ್ವಸು, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಹುಟ್ಟಿನಿಂದ 16 ವರ್ಷ ವಯಸ್ಸಿನ ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿ ವೃದ್ಧಿಗಾಗಿ ಮಕ್ಕಳಿಗೆ ಸ್ವರ್ಣಪ್ರಾಶನ ಕಾರ್ಯಕ್ರಮ. ಕಿಟಿಬ ಕುಷ್ಟ (Psoriasis). ಋತು ಚಕ್ರದ ಸಮಸ್ಯೆ ಕುರಿತು ತಪಾಸಣೆ ಮತ್ತು ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್ ಬೆಳಗ್ಗೆ 9.30ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10ರಿಂದ.

■ **ಶ್ರೀ ಶ್ರೀ ನಾಗಾನಂದ ದತ್ತಾತ್ರೇಯ ಮಠ:** ಭಗವಾನ್ ಶ್ರೀ ದತ್ತಾತ್ರೇಯ ಸ್ವಾಮಿಯವರ 49ನೇ ವರ್ಷದ ಸಪ್ತಾಹ. ಸ್ಥಳ: ಶ್ರೀ ಶ್ರೀ ನಾಗಾನಂದ ದತ್ತಾತ್ರೇಯ ಮಠ, ಬೆಲವತ್ತ ಗ್ರಾಮ(ಮಂಟಿ), ಕೆ.ಆರ್.ಮಿಲ್ ಕಾಲೋನಿ ಹಿಂಭಾಗ. ಬೆಳಗ್ಗೆಯಿಂದ.

* **ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ:** 25ನೇ ವರ್ಷದ ಹನುಮ ಜಯಂತಿ ಮಹೋತ್ಸವ. ಬೆಳಗ್ಗೆಯಿಂದ ವಿಶೇಷ ಪೂಜೆ, ಅಲಂಕಾರ, ಅಭಿಷೇಕ, ಪ್ರಸಾದ ಸೇವೆ, ಧಾರ್ಮಿಕ ಪೂಜಾ ಕಾರ್ಯಕ್ರಮಗಳು. ಸ್ಥಳ: ದೇವಸ್ಥಾನದ ಪ್ರಾಂಗಣ. ಇರ್ವಿನ್ ರಸ್ತೆ.

■ **ರಮಾಬಾಯಿ ಅಂಬೇಡ್ಕರ್ ಸಮಾಜ ಹಾಗೂ ಜೈ ಗುರುದೇವ್ ಹಿರಿಯ ನಾಗರಿಕರ ಸತ್ಸಂಗ:** ಡಾ. ಅಂಬೇಡ್ಕರ್ ಅವರ 69ನೇ ಮಹಾ ಪರಿನಿಬ್ಬಾಣದ ಅಂಗವಾಗಿ ಉಚಿತ ಪ್ರಾಣಾಯಾಮ ಧ್ಯಾನ ಶಿಬಿರ. ನಿವೃತ್ತ ಇಂಜಿನಿಯರ್ ಬಸವರಾಜು ನೇತೃತ್ವದಲ್ಲಿ. ಮುಖ್ಯ ಅತಿಥಿಗಳು: ಮೈಸೂರು ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಸಮಾಜ ಸೇವಕ ಡಾ. ರಘುರಾಮ್ ವಾಜಪೇಯಿ, ಗ್ರಾಸಿಂ ಇಂಡಸ್ಟ್ರೀಸ್ ಇಂಜಿನಿಯರ್ ಬಸವರಾಜು, ಕೃಷಿ ಇಲಾಖೆ ಆಡಳಿತಾಧಿಕಾರಿ ಶ್ರೀಕಂಠಯ್ಯ, ಚಂದ್ರಶೇಖರ್, ಶ್ರೀಮತಿ ಸವಿತ. ಸ್ಥಳ: ಜೈ ಗುರುದೇವ್ ಹಿರಿಯ ನಾಗರಿಕರ ಸತ್ಸಂಗದ ಕಟ್ಟಡ, ಪುಟ್ಟರಾಜ ಗವಾಯಿ ಕ್ರೀಡಾಂಗಣ, ಜೆ.ಪಿ.ನಗರ. ಮಧ್ಯಾಹ್ನ 3 ಗಂಟೆಗೆ.

■ **ಅರಮನೆ ಕೋಟೆ ಉತ್ತರ ಬಾಗಿಲು ಶ್ರೀ ಆಂಜನೇಯಸ್ವಾಮಿ ದೇವಸ್ಥಾನ:** ಶ್ರೀ ಹನುಮ ಜಯಂತಿ ಮಹೋತ್ಸವ. ಸಾಂಸ್ಕೃತಿಕ ಕಾರ್ಯಕ್ರಮ. ಸಂಜೆ 5.30ರಿಂದ ಎಂ.ಆರ್.ಉದಯ್ ಕುಮಾರ್ ಮತ್ತು ತಂಡದವರಿಂದ ಭಕ್ತಿಗೀತೆ. ಸಂಜೆ 7ರಿಂದ ಎಂ.ಬಿ.ಅನಂತಸ್ವಾಮಿ ಸಾಂಸ್ಕೃತಿಕ ಮತ್ತು ಸೇವಾ ಟ್ರಸ್ಟ್‌ನಿಂದ ಭಕ್ತಿಗೀತೆ, ಭಾವಗೀತೆ ಮತ್ತು ಜಾನಪದಗೀತೆ. ಸ್ಥಳ: ಅರಮನೆ ಕೋಟೆ ಉತ್ತರ ಬಾಗಿಲು ಆಂಜನೇಯ ಸ್ವಾಮಿ ದೇವಸ್ಥಾನ.

■ **ಕಲಾ ಸೌರಭ:** ಸಂಸ್ಕೃತಿ ಸೌರಭ. ಅಧ್ಯಕ್ಷತೆ: ಗಾನಕಲಾ ಶ್ರೀ ವಿದುಷಿ ಡಾ. ಸುಕನ್ಯಾ ಪ್ರಭಾಕರ್. ವಿಶೇಷ ಆಹ್ವಾನಿತರು: ಡಾ. ರಮಾ ಬೆಣ್ಣೂರು, ಸಂಸ್ಕೃತಿ ಶ್ಲೋಕ ಕಲಿಸಿಕೊಡುವವರು: ವಿದುಷಿ ಅಕ್ಷತಾ ಭಟ್. ದೇಶಭಕ್ತಿ ಗೀತೆ, ಭಾವಗೀತೆ: ಶ್ರೀಮತಿ ದಿವ್ಯ ಸಚ್ಚಿದಾನಂದ. ಆಹಾರ ಮತ್ತು ಪೋಷಣೆ ಬಗ್ಗೆ ಮಾಹಿತಿ: ಖ್ಯಾತ ಸ್ತ್ರೀ ರೋಗ ತಜ್ಞರಾದ ಡಾ. ರಶ್ಮಿ ಎಂ.ಡಿ., ದೈನಂದಿನ ಮಕ್ಕಳ ಚಟುವಟಿಕೆಗಳ ನಿರ್ವಹಣೆ–ಶ್ರೀಮತಿ ಕೃಪಾ ನಂದಕುಮಾರ್. ಸ್ಥಳ: ಸುರಭಿ ಗಾನಕಲಾ ಮಂದಿರ, ಗೋಕುಲಂ. ಸಂಜೆ 5 ಗಂಟೆಗೆ.

■ **ಶ್ರೀ ರಾಘವೇಂದ್ರ ಸೇವಾ ಸಮಿತಿ:** ಶ್ರೀಮತ್ ಭಾಗವತ ಮುಂದುವರೆದ ಭಾಗ ಪ್ರವಚನ: ಪಂಡಿತ ಬಾದರಾಯಣಾಚಾರ್ಯ ಅವರಿಂದ. ಸ್ಥಳ: ಮಠದ ಆವರಣ, ಜಯಲಕ್ಷ್ಮೀಪುರಂ. ಸಂಜೆ 5 ಗಂಟೆಗೆ.

■ **ಸಾಧನಾ ಮಂದಿರ, ಮೈಸೂರು:** ಸರಸ್ವತಿ ಪೂಜೆ ಮಾಡುವ ಬಗ್ಗೆ ವಿಶೇಷ ತರಬೇತಿ. ಸ್ವಾಮಿ ಹಂಸಾನಂದ ಅವರಿಂದ. ಸಂಜೆ 6.30 ರಿಂದ ಶ್ರೀರಾಮಪುರ 2ನೇ ಹಂತದಲ್ಲಿರುವ ಶ್ರೀ ಸಂಕಷ್ಟಹರ ಗಣಪತಿ ದೇವಸ್ಥಾನ. ಸಂಜೆ 7 ರಿಂದ ವಿವೇಕಾನಂದ ನಗರ ಎಸ್‌ಬಿಎಂ ಲೇಔಟ್‌ನಲ್ಲಿರುವ ಮೈಸೂರು ಯೋಗಾಲಯದಲ್ಲಿ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40 ಅರಿವಿನ ಶಿಖರ ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಟಿ.ಎನ್.ಅಶ್ವಿನಿ, ವ್ಯಾಖ್ಯಾನ: ಡಾ.ಬಿ.ವಿ. ವಸಂತ ಕುಮಾರ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು– ಶಂಕರ್ ಶಾನಭೋಗ್, 7.45 ಚಿತ್ರಗೀತೆಗಳು, 8.30 ಚಿತ್ರಗೀತೆಗಳು, 9.00 ನೆನಪಿನಂಗಳ (ಧ್ವನಿ ಭಂಡಾರದಿಂದ) ಕನ್ನಡದ ಹಿರಿಯ ವಿದ್ವಾಂಸರಾದ ಪ್ರೊ.ಕೆ.ವೆಂಕಟರಾಮಪ್ಪ ಅವರೊಂದಿಗೆ ಪ್ರೊ.ಹೆಚ್.ಎಸ್.ಕೆ ಅವರು ನಡೆಸಿದ್ದ ಸಂವಾದ. 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಸಿ.ಎ.ಶ್ರೀಧರ್ ವೇಣು ವಾದನ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಗೇಮ್ ಷೋ, ಪ್ರಸ್ತುತಿ: ದಿಗ್ವಿಜಯ್.ಬಿ, 12.05 ವನಿತಾ ವಿಹಾರ 12.35 ದೇವರನಾಮ, 12.45 ನಮ್ಮ ಆರೋಗ್ಯ–ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ ವತಿಯಿಂದ ಹಮ್ಮಿಕೊಂಡಿರುವ ಮಾನಸಿಕ ಆರೋಗ್ಯ ಕಾರ್ಯಕ್ರಮಗಳು ಕುರಿತು ತಿಳಿಸಿಕೊಡಲಿದ್ದಾರೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ ಮೈಸೂರಿನ ವಿಭಾಗೀಯ ಸಹನಿರ್ದೇಶಕರಾದ ಡಾ.ಮಲ್ಲಿಕಾ.ಬಿ. ಇವರೊಂದಿಗೆ ಭಾಗವಹಿಸುತ್ತಾರೆ ಬೇದ್ರೆ ಮಂಜುನಾಥ, 1.00 ಪ್ರಗತಿಪಥ ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ–ಪ್ರಧಾನಮಂತ್ರಿ ತೋಟಗಾರಿಕಾ ಅಭಿವೃದ್ಧಿ ಅಭಿಯಾನ ಕುರಿತು ಮಾಹಿತಿ. (ಕೃಷಿ ಉನ್ನತಿ ಯೋಜನೆ), 1.20 ಭಾವಗೀತೆಗಳು–ಕೆ.ಆರ್.ಹರ್ಷದೀಪ್, 2.30 ಪ್ರದೇಶ ಸಮಾಚಾರ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಟಿ.ಎನ್.ಶೇಷಗೋಪಾಲನ್–ಹಾಡುಗಾರಿಕೆ, 4.00 ಮಹಿಳಾರಂಗ ಡಾಕ್ಟರ್ ಸಮಯ ಮಹಿಳೆಯರಲ್ಲಿ ಸಾಮಾನ್ಯವಾಗಿ ಕಂಡು ಬರುವ ಮೂಳೆ ಸಮಸ್ಯೆ ಕುರಿತು ಡಾ.ಜೆ.ಎಂ. ಶ್ರೀಶಾ ಕಡೂರು ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ ದಿಗ್ವಿಜಯ್.ಬಿ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ ಪ್ರಸ್ತುತಿ: ಶಾಂತಾ.ಡಿ.ಕಿಣಿ, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ಕೃಷಿ ದೀವಿಗೆ ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಾರ್ಯಕ್ರಮ. ಸಮಸ್ಯಾತ್ಮಕ ಮಣ್ಣಿನ ನಿರ್ವಹಣೆ ಈ ಕುರಿತು ಮಂಡ್ಯದ ವಿ.ಸಿ.ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ.ಡಿ.ಎಸ್.ಪ್ರಭುದೇವ್ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್.ಕೇಶವಮೂರ್ತಿ, 7.45 ವಿಧಾನಮಂಡದಲ್ಲಿ ಇಂದು. 8.00 ಸಂಸತ್ ಸಮೀಕ್ಷಾ, 8.15 ಯುವವಾಣಿ: ರಾಷ್ಟ್ರಮಟ್ಟದ ಬಾಲವಿಜ್ಞಾನ ಪ್ರದರ್ಶಿನಿ ಪ್ರಶಸ್ತಿ ಪಡೆದಂತಹ ಮಹಾರಾಣಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲೂಕು ಹುಂಡಿಪುರದ ವಿದ್ಯಾ.ಹೆಚ್.ಎಸ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ದಿಗ್ವಿಜಯ್.ಬಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ : ಶ್ರೀರಾಮ್ ಗಂಗಾಧರನ್–ಹಾಡುಗಾರಿಕೆ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣದ ಪ್ರಸಾರ

ಮೈಸೂರು ಮಿತ್ರ ಸೋಮವಾರ 8 ಡಿಸೆಂಬರ್ 2025

ಪ್ರಾಚೀನ ಗ್ರಹ ನಕ್ಷತ್ರ ವೇದಶಾಲಾ 'ಮಧ್ಯಪದ' ಅನಾವರಣ

ಋಷಿ ಮುನಿಗಳ ತಪಸ್ಸಿನ ಜ್ಞಾನದ ಬಗ್ಗೆ ಅಧ್ಯಯನ ಮಾಡಿ

ಶ್ರೀ ಪೇಜಾವರ ಮಠದ ಶ್ರೀ ವಿಶ್ವ ಪ್ರಸನ್ನ ಸ್ವಾಮೀಜಿ ಸಲಹೆ



ಮೈಸೂರಿನ ಉತ್ತನಹಳ್ಳಿ ಬಳಿಯ ಭಾರತೀ ಯೋಗಧಾಮದಲ್ಲಿ ನಿರ್ಮಾಣ ಮಾಡಿರುವ ಜಂತರ್ ಮಂತರ್ ಅನ್ನು ಉಡುಪಿಯ ಶ್ರೀ ಪೇಜಾವರ ಮಠದ ಶ್ರೀ ವಿಶ್ವ ಪ್ರಸನ್ನ ತೀರ್ಥ ಶ್ರೀಪಾದಂಗಳವರು ಅನಾವರಣ ಮಾಡಿದರು.

ಮೈಸೂರು, ಡಿ.7(ಬಿವಿಎಲ್‌ಯು)– ಭಾರತದ ಪ್ರಾಚೀನ ಕಾಲದ ಋಷಿ ಮುನಿಗಳ ತಪಸ್ಸಿನ ಜ್ಞಾನದ ಬಗ್ಗೆ ಆಳವಾದ ಅಧ್ಯಯನ ಮಾಡಬೇಕು ಎಂದು ಉಡುಪಿಯ ಶ್ರೀ ಪೇಜಾವರ ಮಠದ ಶ್ರೀ ವಿಶ್ವ ಪ್ರಸನ್ನ ತೀರ್ಥ ಶ್ರೀಪಾದಂಗಳವರು ಸಲಹೆ ನೀಡಿದರು.

ಮೈಸೂರಿನ ಉತ್ತನಹಳ್ಳಿ ಬಳಿಯ ಭಾರತೀ ಯೋಗಧಾಮದಲ್ಲಿ ನಿರ್ಮಾಣ ಮಾಡಿರುವ ಜ್ಯೋತಿರ್ಧಾಮದ ಜಂತರ್ ಮಂತರ್‌ನಲ್ಲಿ ಪ್ರಾಚೀನ ಗ್ರಹ ನಕ್ಷತ್ರ ವೇದಶಾಲಾ 'ಮಧ್ಯಪದ' ಅನಾವರಣ ಮಾಡಿ ಮಾತನಾಡಿದ ಅವರು, ಋಷಿ ಮುನಿಗಳ ತಪಸ್ಸು ಧಾರ್ಮಿಕ ಹಾಗೂ ಆಧ್ಯಾತ್ಮಿಕತೆಗೆ ಮಾತ್ರ ಸೀಮಿತವಾಗಿರದೇ ವಿಜ್ಞಾನದ ವಿಕಾಸವಾಗಿತ್ತು ಎಂದರು.

ವಿಜ್ಞಾನ ಕ್ಷೇತ್ರಕ್ಕೆ ಋಷಿ ಮುನಿಗಳ ಕೊಡುಗೆ ಅಪಾರವಾಗಿದೆ. ಈ ಹಿನ್ನೆಲೆ ಋಷಿ ಮುನಿಗಳು ಕಂಡು ಕೊಂಡಿದ್ದ ವಿಜ್ಞಾನದ ಬಗ್ಗೆ ನಾವು ಸಮಗ್ರ ಅಧ್ಯಯನ ಮಾಡಬೇಕು. ಈ ಮೂಲಕ ವಿಶ್ವದಲ್ಲಿ ನಮ್ಮನ್ನು ನಾವು ಗುರುತಿಸಿಕೊಳ್ಳಬೇಕು ಎಂದು ಶ್ರೀಗಳು ಕಿವಿಮಾತು ಹೇಳಿದರು.

ಲಕ್ಷಾಂತರ ಮೈಲಿ ದೂರದಲ್ಲಿರುವ ನಕ್ಷತ್ರ ಹಾಗೂ ಗ್ರಹದ ಬಗ್ಗೆ ಋಷಿ ಮುನಿಗಳು ಅಂದೇ ಅಧ್ಯಯನ ಮಾಡಿದ್ದರು. ಈಗಿನ ವಿಜ್ಞಾನಿಗಳು ಮಾಡುತ್ತಿರುವ ಅಧ್ಯಯನವನ್ನು ಸಾವಿರಾರು ವರ್ಷಗಳ ಹಿಂದೆಯೇ ನಮ್ಮ ಋಷಿ ಮುನಿಗಳು ಮಾಡಿದ್ದಾರೆ. ಇಂತಹ ಅಧ್ಯಯನಗಳು ಭಾರತದಲ್ಲಿ ತಲೆ ತಲಾಂತರದಿಂದ ಬಂದಿದೆ. ಅವರ ಜ್ಞಾನದ ಫಲವನ್ನು ನಾವು ಇಂದು ಅನುಭವಿಸುತ್ತಿದ್ದೇವೆ ಎಂದು ತಿಳಿಸಿದರು.

ಈ ಹಿನ್ನೆಲೆ ಋಷಿ ಮುನಿಗಳ ಕಂಡುಕೊಂಡಿದ್ದ ವಿಜ್ಞಾನದ ಆವಿಷ್ಕಾರದ ಬಗ್ಗೆ ನಾವು ಈಗ ಅಧ್ಯಯನ ಮಾಡಬೇಕು. ಅಲ್ಲದೆ ಋಷಿ ಮುನಿಗಳ ಆಯುರ್ವೇದ ಪದ್ಧತಿ ಕುರಿತು ಕೂಡ ಅಧ್ಯಯನ ನಡೆಸಬೇಕು ಎಂದು ಶ್ರೀಗಳು ಮತ್ತೊಮ್ಮೆ ಸಲಹೆ ನೀಡಿದರು.

ಕೂಡಲಿ ಶೃಂಗೇರಿ ಸಂಸ್ಥಾನದ ಶ್ರೀ ಅಭಿನವ ಶಂಕರ ಭಾರತೀ ಸ್ವಾಮೀಜಿ, ಹೊಳೆ ನರಸೀಪುರದ ಅಧ್ಯಾತ್ಮ ಪ್ರಕಾಶನ ಕಾರ್ಯಾಲಯದ ಶ್ರೀ ಪ್ರಕಾಶಾನಂದೇಂದ್ರ ಸ್ವಾಮೀಜಿ, ಹಿರಿಯ ವಕೀಲ ಅಶೋಕ್ ಹಾರನಹಳ್ಳಿ, ಜೈಪುರದ ಜ್ಯೋತಿರ್ಧಾಮದ ನಿರ್ದೇಶಕ ಡಾ.ಮುಖೇಶ ಶರ್ಮಾ, ನಿವೃತ್ತ ಪ್ರಾಧ್ಯಾಪಕ ಎಸ್.ಶ್ರೀನಿವಾಸ ಅಡಿಗ, ಜ್ಯೋತಿಷಿ ವಿದ್ವಾನ್ ವೆಂಕಟೇಶ ಭಟ್, ಆಯುರ್ವೇದ ವೈದ್ಯರಾದ ಡಾ.ಚಂದ್ರಶೇಖರ್, ಗಿರಿಧರ ಕಜೆ, ಶ್ರೀನಿವಾಸ ಭಟ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಖಗೋಳ ಕುರಿತು ಹೊಸ ತಲೆಮಾರಿಗೆ ಅರ್ಥೈಸುವ ವೇದ ಶಾಲಾ

ಖಗೋಳ ಕುರಿತಾದ ಋಷಿಗಳ ಅಪಾರ ಅರಿವು– ಔನ್ನತ್ಯಗಳನ್ನು ಹೊಸ ತಲೆಮಾರಿಗೆ ಅರ್ಥೈಸುವ ಹಿನ್ನೆಲೆ ಪ್ರಾಚೀನ ಗ್ರಹ ನಕ್ಷತ್ರಗಳ ವೇದಶಾಲಾ ಜಂತರ್ ಮಂತರ್ ನಿರ್ಮಾಣ ಮಾಡಲಾಗಿದೆ.

ಜ್ಯೋತಿಷ್ಯ ವಿದ್ಯೆಯ ಸಂರಕ್ಷಣೆ ಮತ್ತು ಸಂಶೋಧನೆಗಾಗಿ ಇಟ್ಟಿರುವ ಮಹತ್ವದ ಹೆಜ್ಜೆ ಇದಾಗಿದೆ. ಗ್ರಹವನ– ನವಗ್ರಹಗಳ ಹಾಗೂ ವೃಕ್ಷಗಳ ಕುರಿತ ವಿಶಿಷ್ಟ ಕಲ್ಪನೆಯ ಅನಾವರಣಗೊಳ್ಳಲಿದೆ. ನಕ್ಷತ್ರ ವನ– ನಕ್ಷತ್ರದ ಪ್ರಾತಿನಿಧಿಕ ವೃಕ್ಷಗಳ ಪ್ರಾಚೀನ ಪರಿಕಲ್ಪನೆಯ ಪರಿಚಯ, ತಾರಾಲಯ– ಆಧುನಿಕ ಮಾಧ್ಯಮದ ಮೂಲಕ ಭಾರತದ ಖಗೋಳ ವಿಜ್ಞಾನ ದರ್ಶನ. ಅನುಸಂಧಾನ ಕೇಂದ್ರ– ಜ್ಯೋತಿಷ್ಯ ವ್ಯಾಪಕತೆ ಮತ್ತು ಅನ್ವಯಿಕತೆಯನ್ನು ಪರಿಚಯಿಸುವ ವಿಶಿಷ್ಟ ದೃಶ್ಯ ಮಾಧ್ಯಮ ಕೇಂದ್ರ. ಜಂತರ್ ಮಂತರ್‌ನಲ್ಲಿ ನಿರ್ಮಾಣ ಮಾಡಿರುವ ವಿಜ್ಞಾನ ವಿವಿಧ ಪ್ರಕಾರಗಳ ಮೂಲಕ ಋಷಿ ಮುನಿಗಳ ಜ್ಞಾನವನ್ನು ಅರ್ಥೈಸಲಾಗುತ್ತದೆ.

ಜ್ಯೋತಿಷ್ಯ ಮತ್ತು ಅದರ ಮೂಲಾಧಾರವಾದ ಖಗೋಳದ ಅಧ್ಯಯನಕ್ಕೆ ಅಗತ್ಯವಾದ ಪ್ರಾಚೀನ ಪದ್ಧತಿಯ ಯಂತ್ರಗಳನ್ನೊಳಗೊಂಡ ವಿಶಿಷ್ಟ ಗ್ರಹ ವೀಕ್ಷಣಾಲಯ ಇಲ್ಲಿದೆ. ಈ ಮೂಲಕ ಪ್ರಾಚೀನ ಭಾರತದ ಖಗೋಳ ವಿದ್ಯೆಗಳ ಪ್ರತ್ಯಕ್ಷ ದರ್ಶನ, ಪ್ರಚಾರ ಹಾಗೂ ಪರಿಶೋಧನೆಗೆ ಜಂತರ್ ಮಂತರ್ ನಲ್ಲಿ ಅವಕಾಶವಿದೆ.

ಮೈಸೂರಿನ ಚಾಮುಂಡಿಬೆಟ್ಟಕ್ಕೆ ಹೊಂದಿಕೊಂಡಂತೆ ಇರುವ ಭಾರತೀ ಯೋಗ ಧಾಮ ಹಸಿರಿನಿಂದ ಕಂಗೊಳಿಸುವ ಪ್ರಕೃತಿಯ ವಿಹಂಗಮ ನೋಟವಾಗಿದೆ. ಈ ಸಂಸ್ಥೆ ಪ್ರಾಚೀನ ಮತ್ತು ನವೀನ ಜೀವನದ ನಡುವೆ ಶಿಕ್ಷಣದ ಸೇತುವಾಗಿ ಕಾರ್ಯ ನಿರ್ವಹಿಸಲಿದೆ.

ಗೋವಾ ನೈಟ್ ಕ್ಲಬ್‌ನಲ್ಲಿ ಭೀಕರ ಅಗ್ನಿ ದುರಂತ: 25 ಮಂದಿ ಸಾವು



ಗೋವಾ, ಡಿ.7– ಉತ್ತರ ಗೋವಾದ ಅರ್‌ಪೋರಾದಲ್ಲಿರುವ ನೈಟ್ ಕ್ಲಬ್‌ನಲ್ಲಿ ನಡೆದ ಭೀಕರ ಅಗ್ನಿ ದುರಂತದಲ್ಲಿ 25 ಮಂದಿ ದುರ್ಮರಣ ಹೊಂದಿದ್ದಾರೆ. ಮಧ್ಯರಾತ್ರಿ ಅಡುಗೆ ಮನೆಯಲ್ಲಿ ಗ್ಯಾಸ್ ಸಿಲಿಂಡರ್ ಸ್ಫೋಟಿಸಿದ ಪರಿಣಾಮ ನೈಟ್ ಕ್ಲಬ್ ಹೊತ್ತಿ ಉರಿದಿದೆ. ಈ ವೇಳೆ 25 ಮಂದಿ ದಹನವಾಗಿದ್ದರೆ, ಉಳಿದವರಿಗೆ ಗಂಭೀರ ಗಾಯಗಳಾಗಿವೆ. ಗಾಯಾಳುಗಳನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಘಟನೆಯಲ್ಲಿ ಮೃತಪಟ್ಟವರಲ್ಲಿ ಹೆಚ್ಚಿನವರು ಕ್ಲಬ್‌ನ ಅಡುಗೆ ಮನೆಯಲ್ಲಿ ಕೆಲಸ ಮಾಡುತ್ತಿದ್ದವರಾಗಿದ್ದು, ಆ ಪೈಕಿ ಮೂವರು ಮಹಿಳೆಯರು ಸೇರಿದ್ದಾರೆ ಎನ್ನಲಾಗಿದೆ ಮೃತರಲ್ಲಿ ಮೂರರಿಂದ ನಾಲ್ಕು ಮಂದಿ ಪ್ರವಾಸಿಗರು ಕೂಡ ಇರುವ ಮಾಹಿತಿ ಸಿಕ್ಕಿದೆ. ನೈಟ್‌ಕ್ಲಬ್‌ನಲ್ಲಿ ಅಗ್ನಿ ಸುರಕ್ಷತಾ ನಿಯಮಗಳನ್ನು ಪಾಲಿಸದಿರುವುದೇ ಹೆಚ್ಚಿನ ಅವಘಡಕ್ಕೆ ಕಾರಣವಾಗಿದೆ. ಗೋವಾ ರಾಜಧಾನಿ ಪಣಜಿಯಿಂದ ಸುಮಾರು 25 ಕಿ.ಮೀ. ದೂರದಲ್ಲಿರುವ ಅರ್‌ಪೋರಾ ಗ್ರಾಮದಲ್ಲಿ ಈ ಜನಪ್ರಿಯ ನೈಟ್‌ಕ್ಲಬ್ ಕಳೆದ ವರ್ಷ ಆರಂಭವಾಗಿತ್ತು. ಎಲ್ಲ 25 ಶವಗಳನ್ನು ಘಟನಾ ಸ್ಥಳದಿಂದ ಹೊರತೆಗೆಯಲಾಗಿದ್ದು, ಬಾಂಬೋಲಿಂನ ಸರ್ಕಾರಿ ವೈದ್ಯಕೀಯ ಕಾಲೇಜಿಗೆ ಕಳುಹಿಸಲಾಗಿದೆ. ಅಗ್ನಿಶಾಮಕ ಮತ್ತು ಪೊಲೀಸ್ ಸಿಬ್ಬಂದಿ ಘಟನಾ ಸ್ಥಳಕ್ಕೆ ತಕ್ಷಣ ಧಾವಿಸಿದ್ದು, ಇಡೀ ರಾತ್ರಿ ರಕ್ಷಣಾ ಕಾರ್ಯಾಚರಣೆ ನಡೆಸಿದ್ದಾರೆ.

ಅಗ್ನಿ ದುರಂತದ ವಿಚಾರ ತಿಳಿದು ತುಂಬಾ ನೋವಾಗಿದೆ ಎಂದು ಹೇಳಿರುವ ಗೋವಾ ಸಿಎಂ ಪ್ರಮೋದ್ ಸಾವಂತ್, ಮೃತರಿಗೆ ಸಂತಾಪ ಸೂಚಿಸಿದ್ದಾರೆ. ಗಾಯಾಳುಗಳಿಗೆ ಸೂಕ್ತ ಚಿಕಿತ್ಸೆಗೆ ವ್ಯವಸ್ಥೆ ಮಾಡುವಂತೆ ಅಧಿಕಾರಿಗಳಿಗೆ ಸೂಚನೆಯನ್ನೂ ನೀಡಿದ್ದಾರೆ. ಅಲ್ಲದೆ, ನೈಟ್‌ಕ್ಲಬ್ ಅಗ್ನಿ ದುರಂತದ ಬಗ್ಗೆ ತನಿಖೆ ನಡೆಸುವಂತೆ ಆದೇಶಿಸಿದ್ದು, ಶೀಘ್ರ ವರದಿ ನೀಡುವಂತೆ ಅಧಿಕಾರಿಗಳಿಗೆ ತಿಳಿಸಿದ್ದಾರೆ.

ಗೋವಾ ಅಗ್ನಿ ದುರಂತದ ವಿಚಾರ ತಿಳಿದು ದುಃಖ ಆಗಿದೆ ಎಂದು ದುರಂತದಲ್ಲಿ ಮೃತಪಟ್ಟವರಿಗೆ ಪ್ರಧಾನಿ ನರೇಂದ್ರ ಮೋದಿ ಸಂತಾಪ ಸೂಚಿಸಿದ್ದಾರೆ. ಗಾಯಾಳುಗಳು ಶೀಘ್ರ ಗುಣಮುಖರಾಗಲಿ ಎಂದು ಪ್ರಾರ್ಥಿಸಿದ್ದಾರೆ. ಜೊತೆಗೆ, ಅಗ್ನಿ ದುರಂತದಲ್ಲಿ ಮೃತಪಟ್ಟವರ ಕುಟುಂಬಗಳ ಸದಸ್ಯರಿಗೆ ತಲಾ 2 ಲಕ್ಷ ರೂ., ಗಾಯಾಳುಗಳಿಗೆ 50 ಸಾವಿರ ರೂ. ಪರಿಹಾರವನ್ನು ಇದೇ ವೇಳೆ ಪ್ರಧಾನಿ ಮೋದಿ ಘೋಷಿಸಿದ್ದಾರೆ.

ದಿ ಕಾಸ್ಮೋಪಾಲಿಟನ್ ಕ್ಲಬ್ ಅಧ್ಯಕ್ಷರಾಗಿ ಎಂ.ವಿ.ಶ್ರೀನಿವಾಸ ಆಯ್ಕೆ



ಮೈಸೂರಿನ ದಿ ಕಾಸ್ಮೋಪಾಲಿಟನ್ ಕ್ಲಬ್‌ನ ನೂತನ ವ್ಯವಸ್ಥಾಪನಾ ಸಮಿತಿ ಪದಾಧಿಕಾರಿಗಳು ಹಾಗೂ ಸಮಿತಿ ಸದಸ್ಯರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಡಿ.7(ಪಿಎಂ)– ಮೈಸೂರಿನ ದಿ ಕಾಸ್ಮೋಪಾಲಿಟನ್ ಕ್ಲಬ್‌ನ 2025–26ನೇ ಸಾಲಿನ ವ್ಯವಸ್ಥಾಪನಾ ಸಮಿತಿ ಚುನಾವಣೆ ಭಾನುವಾರ ನಡೆಯಿತು. ಅಧ್ಯಕ್ಷರಾಗಿ ಎಂ.ವಿ.ಶ್ರೀನಿವಾಸ ಆಯ್ಕೆಯಾಗಿದ್ದು, ಇವರ ಬಣ ಜಯಶಾಲಿಯಾಗಿದೆ.


ಉಪಾಧ್ಯಕ್ಷರಾಗಿ ಎಂ.ಅಂಬರೀಶ (ಅವಿರೋಧ ಆಯ್ಕೆ), ಗೌರವ ಕಾರ್ಯದರ್ಶಿಯಾಗಿ ಜಿ.ಸಂಜಯ್, ಗೌರವ ಖಜಾಂಚಿಯಾಗಿ ಬಿ.ಎನ್.ಶೇಷಾದ್ರಿ ಆಯ್ಕೆಯಾದರು. ಸಮಿತಿ ಸದಸ್ಯರಾಗಿ ಅರವಿಂದ್ ನಾಡಿಗ್, ಎಂ.ಎನ್. ಘನವಂತ ಮಳಲಿ, ಎಂ.ರಾಜೀವ್, ಹೆಚ್.ಎಸ್.ದೀಪಕ್, ಕೆ.ಮಹೇಶ್, ಎಲ್.ಕೃಷ್ಣ ಹಾಗೂ ಆರ್.ಯಶವಂತ್ ಕುಮಾರ್ ಆಯ್ಕೆಯಾಗಿದ್ದಾರೆ.

ಕ್ಲಬ್ ಆವರಣದಲ್ಲಿ ಮತದಾನ ನಡೆದು, ಬಳಿಕ ಮತ ಎಣಿಕೆ ಪ್ರಕ್ರಿಯೆ ನಡೆಯಿತು. ಕ್ಲಬ್‌ನ ಎಲ್ಲಾ 687 ಸದಸ್ಯರು ಮತದಾನ ಮಾಡುವ ಮೂಲಕ ಶೇ.100ರಷ್ಟು ಮತದಾನವಾಗಿದೆ. ನಾಲ್ಕು ಪದಾಧಿಕಾರಿಗಳ ಸ್ಥಾನ ಹಾಗೂ 7 ಸಮಿತಿ ಸದಸ್ಯರ ಸ್ಥಾನಕ್ಕೆ ಮತದಾನ ನಡೆಯಿತು. ಎಲ್ಲಾ 11 ಸ್ಥಾನಗಳಿಗೆ ಶೇ.100ರಷ್ಟು ಮತದಾನ ನಡೆಯಿತು.

ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಎಂ.ವಿ.ಶ್ರೀನಿವಾಸ 371 ಮತಗಳನ್ನು ಗಳಿಸುವ ಮೂಲಕ ಜಯಶಾಲಿಯಾದರೆ, ಗೌರವ ಕಾರ್ಯದರ್ಶಿ ಸ್ಥಾನಕ್ಕೆ ಸ್ಪರ್ಧಿಸಿದ್ದ ಮೂವರಲ್ಲಿ 342 ಮತ ಗಳಿಸಿದ ಜಿ.ಸಂಜಯ್, ಗೌರವ ಖಜಾಂಚಿ ಸ್ಥಾನಕ್ಕೆ ಸ್ಪರ್ಧಿಸಿದ್ದ ಇಬ್ಬರಲ್ಲಿ 426 ಮತಗಳನ್ನು ಗಳಿಸಿದ ಬಿ.ಎನ್.ಶೇಷಾದ್ರಿ ಆಯ್ಕೆಯಾದರು.

ಉಪಾಧ್ಯಕ್ಷ ಸ್ಥಾನಕ್ಕೆ ಎಂ.ಅಂಬರೀಶ ಅವರು ಅವಿರೋಧ ಆಯ್ಕೆಯಾದರು. 7 ಸಮಿತಿ ಸದಸ್ಯರ ಸ್ಥಾನಗಳಿಗೆ 16 ಮಂದಿ ಸ್ಪರ್ಧಿಸಿದ್ದರು. ಈ ಪೈಕಿ ಸಮಿತಿ ಸದಸ್ಯರಾಗಿ ಅರವಿಂದ್ ನಾಡಿಗ್ (503 ಮತಗಳು), ಎಂ.ಎನ್.ಘನವಂತ ಮಳಲಿ (419), ಎಂ.ರಾಜೀವ್ (416), ಹೆಚ್.ಎಸ್.ದೀಪಕ್ (415), ಕೆ.ಮಹೇಶ್ (407), ಎಲ್.ಕೃಷ್ಣ (356) ಹಾಗೂ ಆರ್.ಯಶವಂತ್ ಕುಮಾರ್ (333) ಆಯ್ಕೆಯಾದರು. ಕ್ಲಬ್‌ನ ಸದಸ್ಯ ಕೆ.ಎನ್.ಸುರೇಶ್ ಕುಮಾರ್ ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು.

ಪೊಲೀಸ್ ಅಧಿಕಾರಿ ಸೋಗಿನಲ್ಲಿ ವೈದ್ಯರಿಗೆ ಆನ್‌ಲೈನ್‌ನಲ್ಲಿ 82 ಲಕ್ಷ ರೂ ವಂಚನೆ



ಮೈಸೂರು, ಡಿ.7– ಭಾರತೀಯ ದೂರ ಸಂಪರ್ಕ ನಿಯಂತ್ರಣ ಪ್ರಾಧಿಕಾರ (ಟಿಆರ್‌ಎಐ) ಹಾಗೂ ಬಾಂದ್ರಾ ಪೊಲೀಸ್ ಅಧಿಕಾರಿ ಸೋಗಿನಲ್ಲಿ ಮೈಸೂರಿನ ವೈದ್ಯರೊಬ್ಬರಿಗೆ 82 ಲಕ್ಷ ರೂ. ವಂಚಿಸಿರುವ ಘಟನೆ ನಡೆದಿದೆ.

ವಿಜಯನಗರ ನಾಲ್ಕನೇ ಹಂತದಲ್ಲಿ ನೆಲೆಸಿರುವ 49 ವರ್ಷದ ವೈದ್ಯರೊಬ್ಬರಿಗೆ ಕರೆ ಮಾಡಿದ ವ್ಯಕ್ತಿಯೊಬ್ಬ, ತಾನು ಟಿಆರ್‌ಎಐ ನೋಟಿಫಿಕೇಷನ್ ವಿಭಾಗದ ಪಿಆರ್‌ಓ ಎಂ.ವಿ.ಅಮಿತ್ ಶ್ಯಾಂ ಎಂದು ಪರಿಚಯಿಸಿಕೊಂಡಿದ್ದಾನೆ. ನಿಮ್ಮ ಹೆಸರಿನಲ್ಲಿರುವ ಸಿಮ್, ಅಪರಾಧ ಕೃತ್ಯಗಳಲ್ಲಿ ಬಳಕೆಯಾಗಿದ್ದು, ಈ ಬಗ್ಗೆ ಮುಂಬೈನ ಬಾಂದ್ರಾ ಪೊಲೀಸ್ ಠಾಣೆಗೆ ಕರೆ ಮಾಡಿ, ಸ್ಪಷ್ಟನೆ ನೀಡುವಂತೆ ತಿಳಿಸಿದ್ದಾನೆ.

ಬಳಿಕ ಆತ ನೀಡಿದ ನಂಬರ್‌ಗೆ ವೈದ್ಯ ವಿಡಿಯೋ ಕರೆ ಮಾಡಿದಾಗ, ಕಚೇರಿಯಲ್ಲಿ ಕುಳಿತಿದ್ದ ಪೊಲೀಸ್ ಸಮವಸ್ತ್ರ ಧರಿಸಿದ್ದ ವ್ಯಕ್ತಿಯೊಬ್ಬ ಮಾತನಾಡಿದ್ದಾನೆ. ನಿಮ್ಮ ಹೆಸರಿನಲ್ಲಿ ಅಶ್ಲೀಲ ವಿಡಿಯೋ ಹಾಗೂ ಕಾನೂನು ಬಾಹಿರ ಜಾಹೀರಾತು ಕಳುಹಿಸಿ ಮುಂಬೈನ ಸಾರ್ವಜನಿಕರಿಗೆ ಬೆದರಿಕೆ ಕರೆ ಮಾಡುತ್ತಿರುವುದಾಗಿ ತಿಳಿಸಿ, ಬೆದರಿಸಿದ್ದಾನೆ.

ಬಳಿಕ ನಿಮ್ಮ ಹೆಸರಿನಲ್ಲಿ ಬ್ಯಾಂಕ್ ಖಾತೆ ಇದ್ದು, ಅದರಲ್ಲಿ 2 ಕೋಟಿ ರೂ. ಚಲಾವಣೆ ಮಾಡಲಾಗಿದೆ. ನಿಮ್ಮ ಮೇಲ್ ಐಡಿಯನ್ನೂ ಬಳಸಲಾಗಿದೆ. ಮನಿ ಲ್ಯಾಂಡ್ರಿಂಗ್ ಪ್ರಕರಣದಲ್ಲಿ ನಿಮಗೆ ಮತ್ತು ನಿಮ್ಮ ಪತ್ನಿಗೆ ಅರೆಸ್ಟ್ ವಾರೆಂಟ್ ಆಗಿದೆ ಎಂದು ಮತ್ತಷ್ಟು ಹೆಸರಿಸಿದ್ದಾನೆ. ನಂತರ ನಿಮ್ಮ ಹಣ ಹಾಗೂ ಆಸ್ತಿಯನ್ನು ಪರಿಶೀಲಿಸಿದ ನಂತರ ಎನ್‌ಓಸಿ ನೀಡುವುದಾಗಿ ಹೇಳಿ, ನಿಮ್ಮ ಬ್ಯಾಂಕ್ ಖಾತೆಗಳಲ್ಲಿರುವ ಹಣ ವರ್ಗಾವಣೆ ಮಾಡುವಂತೆ ಸೂಚಿಸಿದ್ದಾನೆ. ವಂಚಕನನ್ನು ನಿಜವಾದ ಪೊಲೀಸ್ ಎಂದು ನಂಬಿದ ವೈದ್ಯ, ಆತ ಕಳುಹಿಸಿದ್ದ ಮೂರು ಖಾತೆಗಳಿಗೆ ಒಟ್ಟು 82 ಲಕ್ಷ ರೂ. ವರ್ಗಾವಣೆ ಮಾಡಿ, ಮೋಸ ಹೋಗಿದ್ದಾರೆ. ಈ ಸಂಬಂಧ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿವೃತ್ತರಿಗೆ 5 ಲಕ್ಷ ವಂಚನೆ: ನಗರದ ವಿದ್ಯಾರಣ್ಯಪುರಂನ 71 ವರ್ಷದ ನಿವೃತ್ತರಿಗೆ ಡಿ.5ರಂದು ಅಪರಿಚಿತ ಕರೆ ಮಾಡಿ, ಮನಿ ಲ್ಯಾಂಡ್ರಿಂಗ್ ಪ್ರಕರಣದಲ್ಲಿ ಡಿಜಿಟಲ್ ಅರೆಸ್ಟ್ ಮಾಡುತ್ತಿದ್ದೇವೆ. ಅರೆಸ್ಟ್ ಮಾಡದಿರಲು ನೀವು ಫೀಸ್ ಕಟ್ಟಬೇಕಾಗುತ್ತದೆ ಎಂದು ಹೇಳಿ 5 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾನೆ. ಈ ಸಂಬಂಧ ಸೆನ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಹಿರಿಯ ವಿದ್ಯಾರ್ಥಿಗಳಿಂದ ಗುರುವಂದನಾ ಕಾರ್ಯಕ್ರಮ



ಮೈಸೂರಿನ ಭಗವಾನ್ ಶ್ರೀ ಸತ್ಯ ಸಾಯಿ ಬಾಬಾ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಗುರುವಂದನಾ ಕಾರ್ಯಕ್ರಮ ನಡೆಯಿತು.

ಮೈಸೂರು,ಡಿ.7(ಪಿಎಂ)– ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಭಗವಾನ್ ಶ್ರೀ ಸತ್ಯ ಸಾಯಿ ಬಾಬಾ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 1993–2000ನೇ ಸಾಲಿನ ವಿದ್ಯಾರ್ಥಿಗಳಿಂದ ಗುರುವಂದನಾ ಕಾರ್ಯಕ್ರಮ ನಡೆಯಿತು.

ಶಾಲೆಯ ಸದರಿ ಬ್ಯಾಚಿನ ಹಿರಿಯ ವಿದ್ಯಾರ್ಥಿಗಳಿಂದ ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶಾಲೆಯ ಹಿರಿಯ ಮುಖ್ಯ ಶಿಕ್ಷಕಿ ಸುಷ್ಮಾ ಪಾಲ್ಗೊಂಡಿದ್ದರು. ಉದ್ಘಾಟನೆ ನೆರವೇರಿಸಿದ ಶಾಲೆಯ ಹಿರಿಯ ದೈಹಿಕ ಶಿಕ್ಷಣ ಶಿಕ್ಷಕ ಶಿವಮೂರ್ತಿ, ವಿದ್ಯಾರ್ಥಿಗಳನ್ನು ಉದ್ದೇಶಿಸಿ ಹಿತವಚನ ನುಡಿದರು.

ಶಾಲೆಯ ಪ್ರಾಂಶುಪಾಲ ತ್ರಿಮೂರ್ತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶಾಲೆಯ ಹಿರಿಯ ಶಿಕ್ಷಕರಾದ ಮಹಾದೇವಮ್ಮ, ಕಮಲಮ್ಮ, ಪಿ.ಸರೋಜಮ್ಮ, ಪರಿಣಿತ, ಸರಸ್ವತಿ, ಆಂಡಾಳ್ ಸೇರಿದಂತೆ ಶಾಲೆಯ ಸಹಾಯಕ ಸಿಬ್ಬಂದಿಯಾದ ಅಪ್ಪಯ್ಯ ಹಾಗೂ ಹಿರಿಯ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಎಲ್‌ಎಲ್‌ಆರ್‌ಗೆ ಅರ್ಜಿ ಸಲ್ಲಿಸಿದ ಏಳು ದಿನಗಳ ಒಳಗೆ ಕಲಿಕಾ ಪರೀಕ್ಷೆ

ಜನವರಿ 1ರಿಂದ ಹೊಸ ನಿಯಮ ಜಾರಿ

ಬೆಂಗಳೂರು, ಡಿ.7– ವಾಹನ ಚಾಲನಾ ಕಲಿಕಾ ಪರವಾನಗಿ (ಎಲ್‌ಎಲ್‌ಆರ್) ಪಡೆಯಲು ಅರ್ಜಿ ಸಲ್ಲಿಸಿದವರು ಏಳು ದಿನಗಳ ಒಳಗೆ ಆನ್‌ಲೈನ್ ಮೂಲಕ ಕಲಿಕಾ ಪರೀಕ್ಷೆಯನ್ನು ಕಡ್ಡಾಯವಾಗಿ ತೆಗೆದುಕೊಳ್ಳುವ ನಿಯಮ ಜನವರಿ 1ರಿಂದ ಜಾರಿಗೆ ಬರಲಿದೆ ಎಂದು ಸಾರಿಗೆ ಇಲಾಖೆ ತಿಳಿಸಿದೆ.

ಎಲ್‌ಎಲ್‌ಆರ್‌ಗೆ ಅರ್ಜಿ ಹಾಕಿದವರು ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢರಾಗಿದ್ದಾರೆಯೇ ಎಂಬುದನ್ನು ಈ ಪರೀಕ್ಷೆ ಮೂಲಕ ಪತ್ತೆ ಹಚ್ಚಲಾಗುತ್ತದೆ. ಯಾವುದೇ ಸಮಸ್ಯೆ ಇಲ್ಲದವರಿಗೆ ವಾಹನ ಚಾಲನಾ ಕಲಿಕೆಗೆ ಪರವಾನಗಿ ಸಿಗಲಿದೆ.

ಎನ್‌ಐಸಿ ಅಭಿವೃದ್ಧಿ ಪಡಿಸಿರುವ ಕೇಂದ್ರೀಕೃತ ವೆಬ್ ಆಧಾರಿತ ಸಾರಥಿ ತಂತ್ರಾಂಶದ ಮೂಲಕ ಆಧಾರ್/ಮೊಬೈಲ್ ಒಟಿಪಿ ಬಳಸಿಕೊಂಡು ಅರ್ಜಿ ಸಲ್ಲಿಸಬೇಕು. ನಿಗದಿತ ದಾಖಲೆಗಳನ್ನು ಅಪ್‌ಲೋಡ್ ಮಾಡಿ ಶುಲ್ಕ ಪಾವತಿಸಬೇಕು. ಪರವಾನಗಿ ಪ್ರಾಧಿಕಾರದವರಿಂದ ಅರ್ಜಿ ಪರಿಶೀಲನೆ ನಡೆದಬಳಿಕ ಏಳು ದಿನಗಳ ಒಳಗೆ ಆನ್ ಲೈನ್ ಮೂಲಕ ಪರೀಕ್ಷೆ ತೆಗೆದುಕೊಳ್ಳಬೇಕು. ಏಳು ದಿನಗಳ ಒಳಗೆ ಪರೀಕ್ಷೆ ತೆಗೆದುಕೊಳ್ಳದೇ ಇದ್ದರೆ ತಂತ್ರಾಂಶದಲ್ಲಿ ಅರ್ಜಿಯು ಸ್ವಯಂ ರದ್ದಾಗುತ್ತದೆ ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತ ಎ.ಎಂ. ಯೋಗೀಶ್ ತಿಳಿಸಿದ್ದಾರೆ.

ಈಗಾಗಲೇ ಅರ್ಜಿ ಸಲ್ಲಿಸಿದವರಿಗೆ ಡಿಸೆಂಬರ್ 31ರ ಒಳಗೆ ಕಲಿಕಾ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ನೀಡಲಾಗಿದೆ. ಅರ್ಜಿ ಸಲ್ಲಿಸಿ ಏಳು ದಿನಗಳ ಒಳಗೆ ಪರೀಕ್ಷೆ ತೆಗೆದುಕೊಳ್ಳುವ ನಿಯಮ 2026ರ ಜ.1ರಿಂದ ಜಾರಿಗೆ ಬರಲಿದೆ ಎಂದು ಮಾಹಿತಿ ನೀಡಿದ್ದಾರೆ.

ದೃಶ್ಯ ರಾಗ ರಂಗ ಸಂಭ್ರಮ ಉಚಿತ ರಂಗ ತರಬೇತಿ ಶಿಬಿರಕ್ಕೆ ತೆರೆ

ರಂಗಭೂಮಿ ಉಳಿವಿಗೆ ವಿಶೇಷ ಪ್ರಯತ್ನ ಪ್ರಶಂಸೆ



ಕಾರ್ಯಕ್ರಮಕ್ಕೆ ಡೊಳ್ಳು ಬಾರಿಸುವ ಮೂಲಕ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಚಾಲನೆ ನೀಡಿದರು.

> 45 ರಿಂದ 60 ವರ್ಷ ಮೇಲ್ಪಟ್ಟ ಹಿರಿಯ ಶಿಬಿರಾರ್ಥಿಗಳು ತರಬೇತಿ ಶಿಬಿರದಲ್ಲಿ ಪಾಲ್ಗೊಂಡಿದ್ದು, ವೈಯಕ್ತಿಕವಾಗಿ ಸಂತೋಷವಾಯಿತು. ವಿಭಿನ್ನ ಪ್ರಯತ್ನಕ್ಕೆ ಮೈಸೂರು ಜನತೆ ಬೆನ್ನುತಟ್ಟಿದ್ದಾರೆ. ಮೈಸೂರಿನ ಜನರಿಗೆ ಉತ್ತರ ಕನ್ನಡ ಭಾಷೆ ಕಲಿಸಿ, ನಾಟಕ ಮಾಡಿಸಿದ್ದು, ಸವಾಲಿನ ಕೆಲಸವಾಗಿತ್ತು.
> -ಜಿ.ಜಗದೀಶ್ ಕುಮಾರ್, ಸೂತ್ರ ಫೌಂಡೇಷನ್ ಸಂಸ್ಥಾಪಕ ಕಾರ್ಯದರ್ಶಿ.

ಮೈಸೂರು, ಡಿ.7(ವಿವಿಹೆಚ್)– ಸೂತ್ರ ಫೌಂಡೇಷನ್ ವತಿಯಿಂದ ಕರ್ನಾಟಕ ನಾಟಕ ಅಕಾಡೆಮಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಸಹಯೋಗದೊಂದಿಗೆ ನಗರದ ರಂಗಾಯಣದ ಆವರಣದಲ್ಲಿರುವ ಕಿರು ರಂಗಮಂದಿರದಲ್ಲಿ ಆಯೋಜಿಸಲಾಗಿದ್ದ 25 ದಿನಗಳ ದೃಶ್ಯ ರಾಗ ರಂಗಸಂಗಮ ಉಚಿತ ರಂಗ ತರಬೇತಿ ಶಿಬಿರ ಜನಪ್ರಿಯ ನಾಟಕಗಳ ದೃಶ್ಯವೈಭವ ಮತ್ತು ರಂಗಗೀತೆಗಳ ಪ್ರಸ್ತುಪಡಿಸುವ ಮೂಲಕ ಸಮಾಪ್ತಿಯಾಯಿತು.

ಸೂತ್ರ ಫೌಂಡೇಷನ್ ಶಿಬಿರಾರ್ಥಿಗಳು ಆಯ್ದ ರಂಗಗೀತೆಗಳಿಗೆ ನೃತ್ಯ ಮಾಡುವ ಮೂಲಕ ನೆರೆದಿದ್ದವರನ್ನು ರಂಜಿಸುವಲ್ಲಿ ಯಶಸ್ವಿಯಾದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಎಲ್ಲ ವಯೋಮಾನದ ಶಿಬಿರಾರ್ಥಿಗಳ ತಂಡ ಕಟ್ಟಿಕೊಂಡು ದೃಶ್ಯ ರಾಗ ಸಂಯೋಜನೆ ವಿನೂತನ ಪ್ರಯತ್ನಕ್ಕೆ ಕೈಹಾಕಿ ಜಗದೀಶ್ ಅವರು ಯಶಸ್ವಿಯಾಗಿದ್ದಾರೆ. ಈ ರೀತಿಯ ರಂಗಭೂಮಿ ಕಟ್ಟುವ ಕೆಲಸಗಳು ನಿರಂತರವಾಗಿ ನಡೆಯಬೇಕು ಎಂದು ಆಶಿಸಿದರು.

ಪ್ರತಿಯೊಬ್ಬರ ಸಕ್ರಿಯ ಪಾಲ್ಗೊಳ್ಳುವಿಕೆಯಿಂದ ಇಂದು ಈ ಕಾರ್ಯಕ್ರಮ ಯಶಸ್ವಿಯಾಗಿದೆ. ರಂಗಭೂಮಿ, ಕಲಾ ಸೇವೆ ಮಾಡುವವರ ಪ್ರೋತ್ಸಾಹಿಸಲು, ರಂಗಭೂಮಿ ಉಳಿಸಲು ಸಾರ್ವಜನಿಕರು ಕಲಾ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂದರು.


ಕರ್ನಾಟಕ ಅಕಾಡೆಮಿ ರಿಜಿಸ್ಟ್ರಾರ್ ನೀಲಮ್ಮ ಮಾತನಾಡಿ, ರಂಗಭೂಮಿ ಕಲೆಗಳ ಅನಾವರಣ ಚಿಂತನೆಗೆ ಇತ್ತೀಚೆಗಿನ ದಿನಗಳಲ್ಲಿ ಸಾರ್ವಜನಿಕರು ಸ್ಪಂದಿಸುತ್ತಿರುವುದು ಸಂತಸದ ವಿಷಯ. ಪರಿವಾರ ಸಮೇತರಾಗಿ ನಾಟಕಗಳನ್ನು ನೋಡಿ, ಪ್ರೋತ್ಸಾಹಿಸುವುದು ಉತ್ತಮ ಬೆಳವಣಿಗೆಯಾಗಿದೆ. ಇದು ಕಲೆಯನ್ನು ಉಳಿಸಿ, ಅದರ ಜೀವಂತಿಕೆಗೆ ಸಹಕಾರಿಯಾಗುತ್ತದೆ ಎಂದರು.

ಸಾಂಸ್ಕೃತಿಕ ಅಭಿರುಚಿ ಹೊಂದಿರುವ ನಗರಗಳಲ್ಲಿ ಮೈಸೂರು ಮೊದಲ ಸ್ಥಾನದಲ್ಲಿದೆ. ಇದು ಸಾಂಸ್ಕೃತಿಕ ಆಸಕ್ತಿ, ಬಳಕೆ, ಬೆಳೆಸುವಿಕೆಯನ್ನು ರಾಜ್ಯದ ಬೇರೆಲ್ಲಾ ಜಿಲ್ಲೆಗಳಿಗಿಂತ ಇಲ್ಲಿ ವಿಶಿಷ್ಟವಾಗಿ ಕಾಣಬಹುದಾಗಿದೆ ಎಂದರು.

ಇದೇ ವೇಳೆ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಮೈಮ್ ರಮೇಶ್, 2025ನೇ ಸಾಲಿನ ರಾಷ್ಟ್ರಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದ ಕೆ.ಎಸ್.ಮಧುಸೂದನ್ ಅವರನ್ನು ಸನ್ಮಾನಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ.ಸುದರ್ಶನ್, ಕರ್ನಾಟಕ ನಾಟಕ ಅಕಾಡೆಮಿ ಸದಸ್ಯ ಎ.ಎಸ್.ಚಂದ್ರಶೇಖರ್, ಸೂತ್ರ ಫೌಂಡೇಷನ್ ಸಂಸ್ಥಾಪಕ ಕಾರ್ಯದರ್ಶಿ ಜಿ.ಜಗದೀಶ್ ಕುಮಾರ್, ಎನ್.ಆರ್. ಫೌಂಡೇಷನ್ ಮುಖ್ಯಸ್ಥ ಆರ್.ಹರೀಶ್, ರಂಗಕರ್ಮಿ ಇಂದಿರಾ ನಾಯರ್, ಶಾರದಾ ಸ್ಕೂಲ್ ಆಫ್ ಲಾದ ಕಾರ್ಯದರ್ಶಿ ಸಿ.ಟಿ.ಜಯವರ್ಧನ್ ಉಪಸ್ಥಿತರಿದ್ದರು.

1.49 ಕೋಟಿ ನೀರಿನಲ್ಲಿ ಹೋಮ

- ಸೋಲಾರ್ ವಿದ್ಯುತ್ ತಂತಿ ಬೇಲಿ ಅಳವಡಿಕೆ ಕಾಮಗಾರಿ ಕಳಪೆ
- ಕೆಆರ್‌ಎಸ್ ಬೃಂದಾವನದ ಬಳಿ ಮತ್ತೆ ಕಾಣಿಸಿಕೊಂಡ ಚಿರತೆ



ಚಿರತೆ ಸೆರೆಗೆ ಅಳವಡಿಸಿರುವ ಸೋಲಾರ್ ವಿದ್ಯುತ್ ತಂತಿಬೇಲಿ ಹಾಗೂ ಬೋನು

ಶ್ರೀರಂಗಪಟ್ಟಣ,ಡಿ.7–(ವಿನಯ್ ಕಾರೇಕುರ) 1.49 ಕೋಟಿ ರೂ. ವೆಚ್ಚದಲ್ಲಿ ಸೋಲಾರ್‌ವಿದ್ಯುತ್ ತಂತಿ ಬೇಲಿ (ಪೆನ್ಸಿಂಗ್) ಅಳವಡಿಸಿದ್ದರೂ ವಿಶ್ವ ವಿಖ್ಯಾತ ಪ್ರವಾಸಿ ತಾಣವಾದ ಕೆಆರ್‌ಎಸ್‌ನ ಬೃಂದಾವನ ಗಾರ್ಡನ್ ಬಳಿ ಮತ್ತೆ ಚಿರತೆ ಕಾಣಿಸಿಕೊಂಡಿದೆ. ನಾರ್ಥ್ ಬೃಂದಾವನದ ಬಳಿ ತೋಟಗಾರಿಕೆ ಇಲಾಖೆ ಬಳಿ ವಿಸಿ ಚಾನಲ್ ಸರ್ಕಲ್ ಹತ್ತಿರ ಕಾಣಿಸಿಕೊಂಡಿದ್ದು ಪ್ರವಾಸಿಗರು ಹಾಗೂ ತೋಟಗಾರಿಕೆ ಇಲಾಖೆಯಲ್ಲಿ ಕೆಲಸ ಮಾಡುವರು ಹಾಗೂ ನಾರ್ಥ್ ಗಾರ್ಡನ್‌ನಲ್ಲಿ ಹೊಡಾಡುವ ವ್ಯಾಪಾರಸ್ಥರಲ್ಲಿ ಆತಂಕ ಉಂಟು ಮಾಡಿದೆ.

ಡಿ.4 ರಂದು ಸಂಜೆ 7 ಗಂಟೆ ವೇಳೆಯಲ್ಲಿ ಮಾಹಿತಿ ಪಡೆದು ಸ್ಥಳಕ್ಕೆ ತೆರಳಿದ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಹಾಗೂ ಕರ್ನಾಟಕದ ರಾಜ್ಯ ಕೈಗಾರಿಕಾ ಭದ್ರತಾ ಪಡೆ ಅಧಿಕಾರಿಗಳು ಸ್ಥಳಕ್ಕೆ ಬೇಟಿ ನೀಡಿದಾಗ ಆ ಅಧಿಕಾರಿಗಳ ಕಣ್ಣಿಗೂ ಕೂಡ ಚಿರತೆ ಕಾಣಿಸಿಕೊಂಡಿರುತ್ತದೆ. ತಕ್ಷಣ ಕಾರ್ಯಪ್ರವೃತ್ತರಾದ ಅಧಿಕಾರಿಗಳು ಅರಣ್ಯ ಇಲಾಖೆ ಸಿಬ್ಬಂದಿಗೆ ಮಾಹಿತಿ ತಿಳಿಸಿ ಬೋನ್ ಇಡುವ ಕೆಲಸ ಮಾಡಿದ್ದಾರೆ. ಚಿರತೆ ಕಾಣಿಸಿಕೊಂಡು ನಾಲ್ಕು ದಿನ ಕಳೆದರೂ ಅಧಿಕಾರಿಗಳು ಅರ್ಥ್ ಬೃಂದಾವನಕ್ಕೆ ಪ್ರವಾಸಿಗರ ಪ್ರವೇಶ ನಿರ್ಬಂದಿಸದೆ ಪ್ರವೇಶಕ್ಕೆ ಅನುವು ಮಾಡಿ ಕೊಟ್ಟಿರುವುದು ಸ್ಥಳೀಯರಲ್ಲಿ ಆಕ್ರೋಶ ವುಂಟು ಮಾಡಿದೆ.

ಚಿರತೆ ಸೇರಿದಂತೆ ಕಾಡು ಪ್ರಾಣಿಗಳ ಹಾವಳಿ ತಪ್ಪಿಸಲು ಕಾವೇರಿ ನೀರಾವರಿ ನಿಗಮದಿಂದ 1.49 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿದ್ದ ಸೋಲಾರ್‌ವಿದ್ಯುತ್ ತಂತಿ ಬೇಲಿ (ಪೆನ್ಸಿಂಗ್) ಕಾಮಗಾರಿ ನೀರಿನಲ್ಲಿ ಹೋಮ ಮಾಡಿದಂತಾಗಿದೆ.

ಪ್ರವಾಸಿ ತಾಣದಲ್ಲಿ ಶಾಶ್ವತವಾಗಿ ಚಿರತೆ ಹಾವಳಿ ತಪ್ಪಿಸುವ ಉದ್ದೇಶದಿಂದ ಕಾವೇರಿ ನೀರಾವರಿ ನಿಗಮದಿಂದ 2013ರ ಮಾರ್ಚ್ ತಿಂಗಳಲ್ಲಿ ಸೋಲಾರ್ ವಿದ್ಯುತ್ ತಂತಿ ಬೇಲಿ (ಪೆನ್ಸಿಂಗ್) ಅಳವಡಿಸುವ ಸಲುವಾಗಿ ಮೈಸೂರಿನ ಪ್ರಥಮ ದರ್ಜೆ ಗುತ್ತಿಗೆದಾರ ಶಫಿಕ್ ಸಿದ್ದಿಕ್ಕಿ ಅವರಿಗೆ 1.49 ಕೋಟಿ ರೂ. ವೆಚ್ಚದ ಸುಮಾರು 2.5 ಕಿ.ಮೀ ದೂರದ ಪೆನ್ಸಿಂಗ್ ಆಳವಡಿಸುವ ಕಾಮಗಾರಿ ಸಹ ಸಂಪೂರ್ಣವಾಗಿ ಮುಗಿದಿದೆ.

ಸೋಲಾರ್ ಬೇಲಿ ಇದ್ದರೂ ಚಿರತೆ ಪ್ರತ್ಯಕ್ಷಗೊಂಡಿದೆ. ಚಿರತೆ ಸೆರೆಗೆ ಬೋನ್ ಅಳವಡಿಸುವುದಾದರೆ ಕೋಟ್ಯಂತರ ರೂ. ಏಕೆ ವೆಚ್ಚ ಮಾಡ ಬೇಕಿತ್ತು ಎಂದು ಸಾರ್ವಜನಿಕರು ಪ್ರಶ್ನೆ ಮಾಡಿದ್ದಾರೆ. ಪೆನ್ಸಿಂಗ್ ಆಳವಡಿಕೆ ಕಾಮಗಾರಿಯಲ್ಲಿ ಬಾರಿ ಅವ್ಯವಹಾರ ನಡೆಸಿರುವುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಸಾರ್ವಜನಿಕರ ಹಣವನ್ನು ಹೀಗೆ ದುರುಪಯೋಗ ಪಡಿಸಿಕೊಂಡಿರುವವರ ವಿರುದ್ಧ ಸಂಬಂಧಪಟ್ಟ ಮೇಲಾಧಿಕಾರಿಗಳು ಸೂಕ್ತ ತನಿಖೆ ನಡೆಸಿದ್ದಲ್ಲಿ ಅಕ್ರಮ ಬಯಲಿಗೆ ಬರಲಿದೆ ಎಂದು ಆಗ್ರಹಿಸಿದ್ದಾರೆ.

ಚಿರತೆ ಹಾವಳಿ ತಪ್ಪಿಸುವ ಸಲುವಾಗಿ ಅಳವಡಿಸಿದ್ದ ಸೋಲಾರ್ ವಿದ್ಯುತ್ ತಂತಿ ಬೇಲಿಗೆ ಗಿಡ, ಗಂಟೆಗಳು ಬೆಳೆದು ಸಂಪೂರ್ಣವಾಗಿ ಆವರಿಸಿಕೊಂಡಿವೆ. ಒಂದು ವೇಳೆ ಸೋಲಾರ್ ತಂತಿಯಿಂದ ವಿದ್ಯುತ್ ಅವಘಡಗಳು ಸಂಭವಿಸಿದರೆ ಯಾರು ಹೊಣೆ ಎಂಬ ಪ್ರಶ್ನೆ ಎದುರಾಗಿದೆ.

ಕಳೆದ ಹತ್ತಾರು ವರ್ಷಗಳಿಂದ ಕಾವೇರಿ ನೀರಾವರಿಗೆ ನಿಗಮದ ಕಚೇರಿಯಲ್ಲಿ ಮುಂಬಡ್ತಿ ಅಥವಾ ಕಚೇರಿ ಬದಲಾವಣೆ ಮಾಡಿಕೊಂಡು ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಇದರಿಂದ ಅಲ್ಲಿನ ಅವ್ಯವಹಾರಗಳು ಹೊರಗೆ ಬರುತ್ತಿಲ್ಲ. ಕೂಡಲೇ ಎಂಜಿನಿಯರ್‌ಗಳ ವರ್ಗಾವಣೆ ಆಗಬೇಕು ಎಂದು ಗ್ರಾ.ಪಂ ಸದಸ್ಯ ಮಂಜುನಾಥ್ ಆಗ್ರಹಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಗುಂಡ ಪರೀಕ್ಷೆಗೆ ಹೋದ ಅರ್ಧ ಗಂಟೆಯಲ್ಲೇ ಮನೆಗೆ ವಾಪಾಸ್ ಬಂದ.
ಅಪ್ಪ : ಯಾಕೋ.... ಇಷ್ಟು ಬೇಗ ಬಂದು ಬಿಟ್ಟೆ!
ಗುಂಡ : ಅಪ್ಪ ನೀನೇ ಹೇಳಿದ್ಯಲ್ಲ. ಪರೀಕ್ಷೆಯಲ್ಲಿ ನೀನೇ ಮೊದಲು ಬರಬೇಕು ಅಂತ!

ಮೈಸೂರು ಮಿತ್ರ
ಸೋಮವಾರ, 8 ಡಿಸೆಂಬರ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ನಂಬಿ ಅನುಭವಿಸುವುದಕ್ಕಿಂತ ಅನುಭವಿಸಿ ನಂಬುವುದೇ ಶಾಶ್ವತ ಮತ್ತು ಸತ್ಯ. –ಕುವೆಂಪು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅರಸು ಬರುವ ತನಕ, ಹಲಸು ತಡೆಯುವುದಿಲ್ಲ.

ನಿಮ್ಮ ಪತ್ರಗಳು

'ಒಂದು ನಗರ, ಒಂದು ವೇದಿಕೆ' ಯೋಜನೆ ಎಲ್ಲಾ ನಗರಗಳಲ್ಲಿ ಅನುಷ್ಠಾನಗೊಳ್ಳಲಿ

ಮಾನ್ಯರೆ,

'ಒಂದು ನಗರ, ಒಂದು ವೇದಿಕೆ' ಎಂಬ ಯೋಜನೆ, ನಗರಗಳಲ್ಲಿ ಘನ ತ್ಯಾಜ್ಯ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸಲು ಹೊಸ ಸಾಧನವಾಗಿದೆ. ಈ ಯೋಜನೆ, ಎಲ್ಲಾ ತ್ಯಾಜ್ಯ ನಿರ್ವಹಣಾ ಚಟುವಟಿಕೆಗಳನ್ನು ಒಂದೇ ಡಿಜಿಟಲ್ ವೇದಿಕೆಯಲ್ಲಿ ಸಂಯೋಜಿಸಬಹುದಾಗಿದೆ. ಇದರ ಮೂಲಕ, ತ್ಯಾಜ್ಯ ಸಂಗ್ರಹಣೆ, ಮಾರ್ಗ ನಿರ್ವಹಣೆ ಮತ್ತು ಇತರ ಚಟುವಟಿಕೆಗಳನ್ನು ಸುಗಮವಾಗಿ ಮತ್ತು ಪರಿಣಾಮಕಾರಿಯಾಗಿ ನಿರ್ವಹಿಸಬಹುದು.

ಈ ವ್ಯವಸ್ಥೆಯ ಮುಖ್ಯ ಪ್ರಯೋಜನಗಳು ಎಂದರೆ ಸಮನ್ವಯ ಮತ್ತು ಸಂಯೋಜನೆ ಹೆಚ್ಚುತ್ತದೆ. ನಾಗರಿಕರು, ಸೇವಾ ಪೂರೈಕೆದಾರರು ಮತ್ತು ಅಧಿಕಾರಿಗಳು ಒಂದೇ ವೇದಿಕೆಯಲ್ಲಿ ಮಾಹಿತಿಯನ್ನು ಹಂಚಿಕೊಳ್ಳುವುದರಿಂದ ಕಾರ್ಯಗಳು ಸರಳ ಮತ್ತು ವೇಗವಾಗುತ್ತವೆ. ಮಾರ್ಗಗಳನ್ನು ಮತ್ತು ಸಮಯವನ್ನು ಸರಿಯಾಗಿ ಯೋಜಿಸಿ, ಕೆಲಸಗಳನ್ನು ಕಡಿಮೆ ಸಮಯದಲ್ಲಿ ಮಾಡಬಹುದಲ್ಲದೆ, ಇದರ ಜೊತೆಗೆ ವೆಚ್ಚವು ಕಡಿಮೆ ಆಗುತ್ತದೆ. ಇನ್ನೂ ಪರಿಸರ ಸಂರಕ್ಷಣೆಯೂ ಸುಧಾರಿತವಾಗುತ್ತದೆ. ತ್ಯಾಜ್ಯ ಸಂಸ್ಕರಣೆಯಲ್ಲಿ ಹೆಚ್ಚು ಪರಿಸರ ಸ್ನೇಹಿ ವಿಧಾನಗಳನ್ನು ಅನುಸರಿಸಲು ಅವಕಾಶ ಸಿಗುತ್ತದೆ. ಡಿಜಿಟಲ್ ವೇದಿಕೆಯಲ್ಲಿ ಸಂಗ್ರಹಿಸಿದ ದತ್ತಾಂಶದಿಂದ, ಪ್ರತಿಯೊಬ್ಬ ನಾಗರಿಕ ತ್ಯಾಜ್ಯ ಸಂಗ್ರಹಣೆ ಕುರಿತು ನಿರ್ಧಾರಗಳನ್ನು ನಿಖರವಾಗಿ ಮತ್ತು ಪರಿಣಾಮಕಾರಿಯಾಗಿ ಕೈಗೊಳ್ಳಬಹುದು. ಜೊತೆಗೆ, ಪ್ರಜೆಗಳ ಜಾಗೃತಿ ಹೆಚ್ಚುತ್ತದೆ ಮತ್ತು ಅವರು ತಮ್ಮ ಹತ್ತಿರದ ಕಚೇರಿಗೆ ಸಂಬಂಧಿಸಿದ ಮಾಹಿತಿಯನ್ನು ಸರಳವಾಗಿ ಪಡೆಯಬಹುದು. ಬೆಂಗಳೂರು ಈ ಯೋಜನೆ ಅನುಷ್ಠಾನಗೊಳಿಸುತ್ತಿದೆ ಆದರೆ ಮಹಾ ನಗರಗಳಾದ ಮೈಸೂರು, ಮಂಗಳೂರು, ಹುಬ್ಬಳ್ಳಿ, ಗುಲ್ಬರ್ಗಾ ಮತ್ತು ಬೆಳಗಾವಿಗಳಲ್ಲಿ ಇನ್ನು ಈ ವ್ಯವಸ್ಥೆ ಅಳವಡಿಸಲಾಗಿಲ್ಲ. ಆದ್ದರಿಂದ ಎಲ್ಲಾ ಪ್ರಮುಖ ನಗರಗಳಲ್ಲಿ ಈ ಯೋಜನೆ ಜಾರಿಗೆ ಬಂದರೆ ಒಳಿತು.

–ಡಾ.ವಿಜಯಕುಮಾರ ಎಚ್.ಕೆ.

ಬಿಸಿ ಊಟ ಕಾರ್ಯಕರ್ತರ ಗೌರವಧನ ಹೆಚ್ಚಿಸಿ

ಮಾನ್ಯರೆ,

ರಾಜ್ಯದಲ್ಲಿ ಬಿಸಿ ಊಟ ಕಾರ್ಯಕರ್ತರ ಸಂಖ್ಯೆ ಬಹಳಿಷ್ಟಿದ್ದರೂ ಅವರ ಜೀವನ ನಿರ್ವಹಣೆ ಕಷ್ಟದಾಯಕವಾಗಿದೆ. ಇವರಿಗೆ ಸಿಗುವ ಗೌರವ ಧನ ಮಾತ್ರ ಕೇವಲ 4,600 ರೂ. ಮಾತ್ರ. ಸರ್ಕಾರ ನೀಡುತ್ತಿರುವ ಈ ಸಂಬಳ ಮನೆ ನಿರ್ವಹಣೆ ಖರ್ಚು, ಮಕ್ಕಳ ವಿದ್ಯಾಭ್ಯಾಸದ ಖರ್ಚು ಹಾಗೂ ಇತರ ಖರ್ಚುಗಳಿಗೆ ಯಾವುದಕ್ಕೂ ಸಾಕಾಗುವುದಿಲ್ಲ. ಬಿಸಿ ಊಟ ಕಾರ್ಯಕರ್ತರು ಕರ್ನಾಟಕ ರಾಜ್ಯದಲ್ಲಿ ಬಹಳ ಶ್ರಮಪಟ್ಟು ಕೆಲಸ ಮಾಡುತ್ತಿದ್ದಾರೆ. ಹಾಗೆಯೇ ಶಾಲೆಗೆ ಬರುವ ಮಕ್ಕಳನ್ನು ತಮ್ಮ ಮಕ್ಕಳಂತೆ ನೋಡಿಕೊಳ್ಳುತ್ತಾರೆ. ಹಾಗೆಯೇ ಶಾಲಾ ಮಕ್ಕಳಿಗೆ ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಮಕ್ಕಳನ್ನು ನೋಡಿಕೊಳ್ಳುತ್ತಾರೆ. ಬಿಸಿ ಊಟ ಕಾರ್ಯಕರ್ತರು ಸುಮಾರು ವರ್ಷಗಳಿಂದ ಗೌರವ ಧನ ಹೆಚ್ಚಳ ಮಾಡಿ ಎಂದು ಪ್ರತಿಭಟನೆ ಮಾಡುತ್ತಿದ್ದಾರೆ. ಆದರೆ ಸರ್ಕಾರ ಇವರ ಬೇಡಿಕೆಗೆ ಸ್ಪಂದಿಸುತ್ತಿಲ್ಲ. ಇದರಿಂದ ಕಾರ್ಯಕರ್ತರು ರೊಚ್ಚಿಗೆದ್ದಿದ್ದಾರೆ. ದಯವಿಟ್ಟು ರಾಜ್ಯ ಸರ್ಕಾರ ಕೂಡಲೇ ಬಿಸಿ ಊಟ ಕಾರ್ಯಕರ್ತರ ಗೌರವಧನ ಹೆಚ್ಚಳ ಮಾಡಬೇಕೆಂದು ಈ ಮೂಲಕ ಮನವಿ ಮಾಡುವೆ. **–ಸಿದ್ದಲಿಂಗೇಗೌಡ, ಹೈರಿಗೆ, ಹೆಚ್.ಡಿ.ಕೋಟೆ ತಾ.**

ಸೋಲಾರ್ ಪಂಪ್‌ಸೆಟ್‌ಗೆ ಶೇ.80ರಷ್ಟು ಸಬ್ಸಿಡಿ

ಮಾನ್ಯರೆ,

ಹಗಲಲ್ಲಿ ನೀರಾವರಿಗೆ ವಿದ್ಯುತ್ ಸೌಕರ್ಯ ಕಲ್ಪಿಸುವ ಪಿಎಂ ಕುಸುಮ್ ಬಿ ಯೋಜನೆಯಡಿ ಸೋಲಾರ್ ಪಂಪ್‌ಸೆಟ್‌ಗೆ ಶೇ.80.ರಷ್ಟು ಸಬ್ಸಿಡಿ ಇರುವುದರಿಂದ ರೈತರು ಈ ಯೋಜನೆಯನ್ನು ಸದುಪಯೋಗಪಡಿಸಿಕೊಳ್ಳುವುದು ಉತ್ತಮ. ಈ ಯೋಜನೆಯಲ್ಲಿ ನೀರಾವರಿಗೆ ಸಾಂಪ್ರದಾಯಿಕ ವಿದ್ಯುತ್ ಅವಲಂಬನೆ ಕಡಿಮೆ ಮಾಡುವ ದೃಷ್ಟಿಯಿಂದ, ಸೌರಶಕ್ತಿ ಬಳಕೆಯು ರೈತರು ಸ್ವಾವಲಂಬನೆ ಸಾಧಿಸಲು ಸಾಧ್ಯವಾಗುತ್ತದೆ. ಈ ಯೋಜನೆಯಡಿ ಜಾಲಮುಕ್ತ ಸೌರ ಕೃಷಿ ಪಂಪ್‌ಸೆಟ್ ಅಳವಡಿಸಲು ಒತ್ತು ನೀಡಲಾಗಿದೆ. ಈ ಯೋಜನೆಗೆ ರಾಜ್ಯ ಸರ್ಕಾರ ಶೇ.50ರಷ್ಟು, ಕೇಂದ್ರ ಸರ್ಕಾರ ಶೇ.30ರಷ್ಟು ಹಾಗೂ ಫಲಾನುಭವಿಗಳಾದ ರೈತರು ಶೇ.20ರಷ್ಟು ಮೊತ್ತ ಪಾವತಿಸಬೇಕು. ಈ ಯೋಜನೆಯು ಡಿಸೆಂಬರ್ ತಿಂಗಳಲ್ಲಿ ಕೊನೆಗೊಳ್ಳಲಿದ್ದು, ರೈತರು ಆದಷ್ಟು ಬೇಗ ಯೋಜನೆಯ ಉದ್ದೇಶವನ್ನು ಸದ್ಬಳಕೆ ಮಾಡಿಕೊಳ್ಳುವುದು ಒಳಿತು ಎಂದು ಸೆಸ್ಕ್ ಎಂಡಿ ಕೆ.ಎಂ.ಮುನಿಗೋಪಾಲ್‌ರಾಜು ಅವರು ಮನವಿ ಮಾಡಿರುವುದು ಶ್ಲಾಘನೀಯ. (ಸಂಪರ್ಕಕ್ಕೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಯಮಿತ, 9449598669). ರೈತರು ಸಬ್ಸಿಡಿ ಹಣ ಪಡೆಯುವಾಗ ಯಾವುದೇ ರೀತಿಯ ತೊಂದರೆಯಾಗಬಾರದು. ಇದು ನನ್ನ ಮನವಿ. **–ಬೆಸಗರಹಳ್ಳಿ ರವಿಪ್ರಸಾದ್, ಮೈಸೂರು.**

ಪಕ್ಷ ಎಲ್ಲಾ ಕೊಟ್ಟರೂ ಅಧಿಕಾರ ಬಿಟ್ಟು ಕೊಡಲು ಯಾಕಿಷ್ಟು ತಕರಾರು!

ಮಾನ್ಯರೆ,

ನಾನು ಜೆಡಿಎಸ್‌ನಲ್ಲೇ ಉಳಿದುಕೊಂಡಿದ್ದರೇ, ಮುಖ್ಯಮಂತ್ರಿ ಆಗಲು ಸಾಧ್ಯವಾಗುತ್ತಿರಲಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇತ್ತೀಚೆಗೆ ಬಹಿರಂಗ ಸಭೆಯಲ್ಲಿ ಹೇಳಿದ್ದಾರೆ. ಈ ಕುರಿತು ಈಗ ಅವರು ಆತ್ಮವಿಮರ್ಶೆ ಮಾಡಿಕೊಳ್ಳುತ್ತಿದ್ದಾರೆ. ಜೆಡಿಎಸ್ ನಿಂದ ಕಾಂಗ್ರೆಸ್‌ಗೆ ಬಂದ ಇವರನ್ನು ಪಕ್ಷ ಎರಡು ಬಾರಿ ಮುಖ್ಯಮಂತ್ರಿ ಮಾಡಿದೆ, ಒಂದು ಅವಧಿಯಲ್ಲಿ ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡುವ ಅವಕಾಶ ಕೊಟ್ಟಿದೆ. ಪಕ್ಷ ಇಷ್ಟೆಲ್ಲಾ ನೀಡಿದರೂ ಈಗ ಅಧಿಕಾರ ಬಿಟ್ಟು ಕೊಡಲು ಮನಸು ಮಾಡುತ್ತಿಲ್ಲ ಏಕೆ?, ಹೀಗೆ ಹೊರಗಿನಿಂದ ಬಂದವರಿಗೇ ಅಧಿಕಾರ ನೀಡಿದರೆ, ಮೂಲ ಪಕ್ಷ ಕಟ್ಟಿದವರು ಎಲ್ಲಿ ಹೋಗಬೇಕು? ಈಗ ರಾಜ್ಯದಲ್ಲಿ ಅಧಿಕಾರ ಹಸ್ತಾಂತರದ ಕೊನೆಯ ಘಟ್ಟ ತಲುಪಿರುವುದರಿಂದ ಸಿದ್ದರಾಮಯ್ಯ ಸಂತೋಷದಿಂದ, ಉದಾರ ಮನಸ್ಸಿನಿಂದ ಅಧಿಕಾರ ಹಸ್ತಾಂತರ ಮಾಡಿದರೆ ಅವರ ರಾಜಕೀಯ ಜೀವನದಲ್ಲಿ ಅವರು ಇನ್ನೂ ದೊಡ್ಡ ಮಟ್ಟಕ್ಕೆ ಬೆಳೆಯಲು ಅವಕಾಶ ಇದೆ, ಸಾರ್ವಜನಿಕ ವಲಯದಲ್ಲೂ ಉನ್ನತ ಮಟ್ಟದ ನಾಯಕನಾಗಿ ಜನಪ್ರಿಯರಾಗುತ್ತಾರೆ, ಇತರ ರಾಜಕೀಯ ಪಕ್ಷಗಳ ನಾಯಕರಿಗೂ ಆದರ್ಶವಾಗುತ್ತಾರೆ. ತಮ್ಮ ಮೊಂಡು ಹಠವನ್ನು ಬಿಟ್ಟು ಮುಖ್ಯಮಂತ್ರಿ ಸ್ಥಾನವನ್ನು ತ್ಯಾಗ ಮಾಡಲಿ. **–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.**



ಜಿ. ಎಲ್. ತ್ರಿಪುರಾಂತಕ
ಮೊ: 96866-77284

ಅರಿವು

ಪ್ರೀತಿಗೂ ಇರಲಿ ಒಂದು ರೀತಿ–ನೀತಿ...!

ಪ್ರೀತಿ ಹಾಗೂ ಯುದ್ಧದಲ್ಲಿ ಮಾಡಿದ್ದೆಲ್ಲವೂ ಸರಿ? ಎಂಬ ಆಂಗ್ಲ ನಾಣ್ನುಡಿಯೊಂದಿದೆ. ಈ ಮಾತು ಪ್ರೀತಿ ಹಾಗೂ ಯುದ್ಧದಲ್ಲಿ ಯಾವುದೇ ನೀತಿ, ನಿಯಮಾವಳಿಗಳಿಲ್ಲ, ಏನು ಮಾಡಿದರೂ ಅದು ಅಪರಾಧವಲ್ಲ ಎಂಬ ಭಾವಾರ್ಥ ಹೊಂದಿದೆ. ಅಂದರೆ ಆಸೆ ಪಟ್ಟಿದ್ದನ್ನು ದಕ್ಕಿಸಿಕೊಳ್ಳಲು ಏನು ಬೇಕಾದರೂ ಮಾಡಬಹುದು. ಪ್ರಪಂಚದಲ್ಲಿ ಅತ್ಯಂತ ಅಮೂಲ್ಯವಾದ ಸಂಗತಿ ಎಂದರೆ ಅದು ಪ್ರೀತಿ. ಆ ಪ್ರೀತಿಗಾಗಿಯೇ ಭವನಗಳಷ್ಟೇ ನಿರ್ಮಾಣವಾಗಿಲ್ಲ, ಕಂದಕಗಳು ನಿರ್ಮಾಣವಾಗಿವೆ, ಕದನಗಳು ಏರ್ಪಟ್ಟಿವೆ. ಅನೇಕ ಕದನಗಳಲ್ಲಿ ಒಬ್ಬ ಹುಚ್ಚು ಪ್ರೇಮಿಯ ಪ್ರೀತಿ ಸಂಪಾದನೆಗೆ ಸಾವಿರಾರು ಜನ ಅಮಾಯಕರು ಜೀವ ತೆತ್ತಿದ್ದಾರೆ. ಪ್ರಾಣಿಪಕ್ಷಿಗಳು ಸಹ ವಿಭಿನ್ನ ರೀತಿಯಲ್ಲಿ ಪ್ರೀತಿಯನ್ನು ಪ್ರಕಟಿಸುತ್ತವೆ, ಕೆಲವು ಗಾಯನ ಮಾಡಿದರೆ, ಮತ್ತೆ ಕೆಲವು ನೃತ್ಯ ಮಾಡಿ ಆಕರ್ಷಿಸುತ್ತವೆ. ಇನ್ನೂ ಕೆಲವು ವಿಶೇಷವಾದ ಪಕ್ಷಿಗಳು ಗೂಡುಗಳನ್ನು ನಿರ್ಮಿಸಿ, ವಿಶೇಷ ಅಲಂಕಾರ ಮಾಡಿ ಗಮನ ಸೆಳೆಯುತ್ತವೆ. ಪ್ರೀತಿಗಾಗಿ ಕೇವಲ ಮನುಷ್ಯರಷ್ಟೇ ಕದನಗಳಲ್ಲಿ ಹೋರಾಡುವುದಿಲ್ಲ, ಪ್ರಾಣಿಪಕ್ಷಿಗಳು ಸಹ ತಾನು ಮೆಚ್ಚಿದ ಪ್ರೇಯಸಿಗಾಗಿ ಜೀವವನ್ನು ಪಣಕ್ಕಿಟ್ಟು ಹೋರಾಡುತ್ತವೆ. ಆದರೆ ಮನುಷ್ಯ ಮಾತ್ರ ಪ್ರೀತಿ ವಿಷಯದಲ್ಲಿ ನಟಿಸಿ ವಂಚಿಸುತ್ತಾನೆ. ಪ್ರೀತಿಯ ನಾಟಕವಾಡಿ ಅನೇಕರು ಸೇಡನ್ನು ತೀರಿಸಿಕೊಳ್ಳಲು ಯತ್ನಿಸುತ್ತಿರುವುದು ಸಾಮಾನ್ಯವಾಗಿದೆ. ಇಂದಿನ ಮಾಹಿತಿ ತಂತ್ರಜ್ಞಾನದ ಯುಗದಲ್ಲಿ ಪ್ರೀತಿ ಪ್ರೇಮದ ನಾಟಕಗಳು ಹೆಚ್ಚಾಗುತ್ತಿವೆ.



> “ ಮನುಷ್ಯ ಭಾವಜೀವಿ ನಿಜ. ಆದರೆ ಎಷ್ಟೋ ಬಾರಿ ಪ್ರಾಕ್ಟಿಕಲ್ ಆಗಿ ಇರಬೇಕಾಗುತ್ತದೆ. ಭಾವನೆಗಳ ಜೊತೆ ಆಟವಾಡಿ ಜೀವನವನ್ನೇ ಹಾಳು ಮಾಡಿಬಿಡುವ ವಂಚಕರ ಜಾಲ ಸಕ್ರಿಯವಾಗಿರುತ್ತದೆ. ಆದರ್ಶ ಎಂಬುದು ಸಿನಿಮಾ ನಾಟಕಗಳಲ್ಲಿ ಮಾತ್ರ ಹೆಚ್ಚಾಗಿ ನೋಡಬಹುದಾಗಿರುತ್ತದೆ. ನಿಜ ಜೀವನದಲ್ಲಿ ಆದರ್ಶದ ಮುಖವಾಡ ಧರಿಸಿ ಜನರಿಗೆ ಮೋಸ ಮಾಡುವವರ ಸಂಖ್ಯೆ ಕಡಿಮೆ ಏನಿಲ್ಲ. ಅನೇಕ ಸಂಬಂಧಿಕರು ಪ್ರೀತಿ–ವಿಶ್ವಾಸ ತೋರಿಸಿ ಆರ್ಥಿಕ ಸಹಾಯ ಪಡೆದು, ಕೃತಜ್ಞತೆಯಿಲ್ಲದೆ ದೂರ ಸರಿದುಬಿಡುತ್ತಾರೆ. ಸಹೋದರ–ಸಹೋದರಿಯರೇ ಹಣ, ಆಸ್ತಿಯ ಮೇಲಿನ ಆಸೆಗಾಗಿ ಕೃತಕ ಪ್ರೀತಿ ತೋರಿ, ತಮ್ಮ ಕೆಲಸವಾದ ಮೇಲೆ ಕಾಲಕಸವಾಗಿ ಕಾಣುತ್ತಾರೆ. ಎಲ್ಲದಕ್ಕೂ ಒಂದು ಮಿತಿ ಇರಬೇಕು ಎನ್ನುವಂತೆ ಪ್ರೀತಿಯ ವಿಷಯದಲ್ಲಿಯೂ ಮಿತಿ ಹೇರಿಕೊಳ್ಳಬೇಕು. ಹೆತ್ತವರು ಅಷ್ಟೇ, ಎಲ್ಲವನ್ನು ಅಂಧಪ್ರೀತಿಯಲ್ಲಿ ಮಕ್ಕಳಿಗೆ ಧಾರೆ ಎರೆಯಬಾರದು, ಇಳಿವಯಸ್ಸಿನಲ್ಲಿ ತಮ್ಮ ಭದ್ರತೆಗಾಗಿ ಹಣಕಾಸು, ಆಸ್ತಿ ಇರಿಸಿಕೊಳ್ಳಬೇಕು. ಮಕ್ಕಳ ಮೇಲೆ ಅತಿಯಾದ ನಿರೀಕ್ಷೆ ಇರಿಸಿಕೊಳ್ಳಬಾರದು. ಮಕ್ಕಳಿಗೆ ಆರೋಗ್ಯ, ಶಿಕ್ಷಣ, ಸಂಸ್ಕಾರವನ್ನು ನೀಡಿ ಅವರ ಕಾಲ ಮೇಲೆ ಅವರು ನಿಲ್ಲುವಂತೆ ಮಾಡಿ ನಿಶ್ಚಿಂತರಾಗಬೇಕು. ಅವರಿಂದ ಪ್ರತಿಯಾಗಿ ಎಲ್ಲವನ್ನೂ ಬಯಸಬಾರದು.

ಪ್ರೀತಿ ಎಂದಾಕ್ಷಣ ಯುವಕ ಯುವತಿಯರ ನಡುವೆ ಏರ್ಪಾಡಾಗುವ ಪ್ರೀತಿ ಅಷ್ಟೇ ಅಲ್ಲ. ಮನುಷ್ಯ ಮನುಷ್ಯರ ನಡುವೆ, ಮನುಷ್ಯ ಪ್ರಾಣಿಗಳ ನಡುವೆ ಇರುವ ಒಂದು ಆಹ್ಲಾದಕರ ಸಂಬಂಧವೂ ಸಹ ಪ್ರೀತಿ ಎನಿಸುತ್ತದೆ. ಹೆತ್ತವರು ಮಕ್ಕಳ ಮೇಲಿರಿಸಿರುವ ಪ್ರೀತಿ, ಒಡಹುಟ್ಟಿದವರ ಪ್ರೀತಿ, ಮಕ್ಕಳಿಗೆ ಹೆತ್ತವರ ಮೇಲಿರುವ ಪ್ರೀತಿ, ತಮ್ಮ ನೆಚ್ಚಿನ ನಟ, ಗಾಯಕ, ಕಲಾವಿದರ ಮೇಲಿರುವ ಪ್ರೀತಿ..... ಹೀಗೆ ಬಹುವಿಧವಾದ ಪ್ರೀತಿ ಸಮಾಜದಲ್ಲಿರುವುದನ್ನು ಗುರುತಿಸಬಹುದು. ಪ್ರೀತಿ ಎಂಬುದು ಒಂದು ಉನ್ಮಾದ ಸ್ಥಿತಿ. ಅನೇಕ ರೀತಿಯ ಮನೋಭಾವಗಳನ್ನು ಪ್ರೀತಿ ಎನ್ನಲಾಗುತ್ತದೆ. ಕೆಲವರಿಗೆ ಪ್ರೀತಿ ಎಂಬುದು ಹುಚ್ಚು, ಕೆಲವರಿಗೆ ದೌರ್ಬಲ್ಯ, ಕೆಲವರಿಗೆ ಆಕರ್ಷಣೆ, ಕೆಲವರಿಗೆ ವ್ಯಾಪಾರ, ಕೆಲವರಿಗೆ ಮೋಸದಾಟ, ಕೆಲವರಿಗೆ ಲೆಕ್ಕಾಚಾರ, ಕೆಲವರಿಗೆ ವ್ಯವಹಾರ...... ಹೀಗೆ ಪ್ರೀತಿಗೆ ನಾನಾ ಆಕಾರ, ಪ್ರೀತಿಯಲ್ಲಿದೆ ನಾನಾ ವಿಚಾರ, ಪ್ರೀತಿಯು ಪಾಲಿಸುವುದು ನಾನಾ ಆಚಾರ. ಅಗೋಚರವಾದ ಈ ಪ್ರೀತಿಯು ಕೊಡುತ್ತದೆ ನಾನಾ ಸಮಾಚಾರ.

ಪ್ರೀತಿ ಇಲ್ಲದ ಮೇಲೆ ಹೂವು ಅರಳೀತು ಹೇಗೆ? ಎಂದು ಜಿ.ಎಸ್.ಶಿವರುದ್ರಪ್ಪನವರು ತಮ್ಮ ಕವಿತೆಯೊಂದರಲ್ಲಿ ಪ್ರೀತಿಯ ಮಹತ್ವವನ್ನು ಸಾರಿದ್ದಾರೆ. ಪ್ರೀತಿ ಎಂಬುದು ಮತ್ತೊಂದು ಜೀವಿಯ ಹುಟ್ಟಿಗೆ ಕಾರಣವಾಗಬಹುದು. ಹಾಗೆಯೇ ಮಿತಿ ಮೀರಿದರೆ ಒಂದು ಜೀವಿಯ ಸಾವಿಗೂ ಕಾರಣವಾಗಬಹುದು. ಸರಿಯಾಗಿ ಅರ್ಥೈಸಿಕೊಳ್ಳದಿದ್ದರೆ ಪ್ರೀತಿಸುವವರಿಬ್ಬರ ಜೀವ ತ್ಯಾಗಕ್ಕೂ ಪ್ರೀತಿಯೇ ಕಾರಣವಾಗಬಹುದು. ಹಾಗಾಗಿ ಪ್ರೀತಿ ಒಂದು ವರವೂ ಹೌದು, ಶಾಪವೂ ಹೌದು. ಪ್ರೀತಿಯಲ್ಲಿ ಸುಖ ಕಂಡವರಷ್ಟೇ ದುಃಖವನ್ನು ಕಂಡವರು ಸಹ ಇದ್ದಾರೆ. ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ನೋಡ ಎಂಬ ಶರಣರ ನುಡಿಯಂತೆ ಎಲ್ಲೋ ಒಂದು ಕ್ಷಣದಲ್ಲಿ ಮೊಳೆತ ಪ್ರೀತಿಗಾಗಿ ಇಡೀ ಜೀವನ ನಲುಗಿದ ಜನರು ನಮ್ಮ ನಿಮ್ಮ ನಡುವೆಯೇ ಇದ್ದಾರೆ.

ಜಾತಿ ಹಾಗೂ ಧರ್ಮದ ನೀತಿಯನ್ನು ಮೀರಿ ಬೆಳೆಯುವ ಶಕ್ತಿ ಪ್ರೀತಿಗೆ ಇದೆ. ಅನೇಕರು ಸಹಜ ಪ್ರೀತಿಯ ಸೆಳೆತಕ್ಕೆ ಒಳಗಾಗಿ ಅನೇಕ ತ್ಯಾಗಗಳಿಂದ ಪ್ರೇಮಿಗಳಾಗಿ ಮುಂದುವರಿದು ಮದುವೆಯಾಗಿ ಸುಖ ಸಂಸಾರಿಗಳಾಗಿ ಯಶಸ್ವಿಯಾಗಿದ್ದಾರೆ. ಆದರೆ ಕೆಲವರು ಪ್ರೀತಿಯ ಮುಖವಾಡ ಧರಿಸಿ ಅನೇಕರು ಅಮಾಯಕರನ್ನು ವಂಚಿಸುತ್ತಾರೆ. ಯೌವನಾವಸ್ಥೆಯಲ್ಲಿನ ಹುಡುಗಿಯರನ್ನು ಪುಸಲಾಯಿಸಿ, ಪ್ರೀತಿಸಿ ಆತುರಾತುರವಾಗಿ ಮದುವೆ ಮಾಡಿಕೊಂಡು ಅವರ ಬದುಕಿಗೆ ಕೊಳ್ಳಿ ಇಡುತ್ತಾರೆ. ಸಾಮಾಜಿಕ ಜಾಲತಾಣದಲ್ಲಿ ಸುಲಭವಾಗಿ ಸಂಪರ್ಕಕ್ಕೆ ಬರುವ ಹುಡುಗಿಯರನ್ನು ಸುಲಭವಾಗಿ ಮೋಸ ಮಾಡುವ ಒಂದು ಕಿಡಿಗೇಡಿ ಪಂಗಡವೇ ಇದೆ. ಪ್ರೇಮಿಯಾಗಿದ್ದಾಗ ತೋರುವ ಪ್ರೀತಿ ಗಂಡನಾದಾಗ ಬದಲಾಗಿರುತ್ತದೆ. ಈ ಕಾಲದ ಹೆಣ್ಣುಮಕ್ಕಳು ಬಣ್ಣದ ಮಾತುಗಳಿಗೆ, ಬೈಕ್, ಬಟ್ಟೆಗಳಿಗೆ ಮಾರುಹೋಗಿ, ಹೆತ್ತವರ ಬುದ್ಧಿಮಾತನ್ನು ಧಿಕ್ಕರಿಸಿ ಪ್ರಬುದ್ಧರಾಗುವ ಮುನ್ನ ಮದುವೆಯಾಗುತ್ತಾರೆ. ನಂತರ ನರಕ ಜೀವನವನ್ನು ಅನುಭವಿಸಿ, ಕೆಲವರು ತಮ್ಮ ಕರ್ಮ ಎಂದು ಭಾವಿಸಿದರೆ, ಮತ್ತೆ ಕೆಲವರು ಆತ್ಮಹತ್ಯೆಗೂ ಶರಣಾಗಿದ್ದೂ ಇದೆ. ಪ್ರೀತಿ ಪ್ರೇಮದ ನಾಟಕವಾಡುವವರಿಗೆ ಅದು ಎಷ್ಟನೇ ಮದುವೆಯಾಗಿರುತ್ತದೆಯೋ? ಶಾಲಾ ಕಾಲೇಜಿಗೆ ವಿದ್ಯಾಭ್ಯಾಸ ಮಾಡಲು ಹೋಗುವ ವಿದ್ಯಾರ್ಥಿನಿಯರು ತುಂಬಾ ಜಾಗರೂಕರಾಗಿ ಇರಬೇಕಾಗುತ್ತದೆ. ಪ್ರೀತಿಯ ವರ್ತುಲಕ್ಕೆ ಸಿಲುಕಿದರೆ, ಅದೊಂದು ಚಕ್ರವ್ಯೂಹದಂತೆ ಅವರನ್ನು ಹೊರಬರಲು ಬಿಡದೆ, ಬದುಕಲು ಬಿಡದೆ ತ್ರಿಶಂಕು ಸ್ಥಿತಿಗೆ ಒಡ್ಡುತ್ತದೆ. ಅದಕ್ಕೆ ಸಮಾಜದಲ್ಲಿ ಸಾವಿರಾರು ಉದಾಹರಣೆಗಳಿವೆ.

ಪೋಷಕರು ಮಕ್ಕಳ ಮೇಲೆ ಇರಿಸಿರುವ ಪ್ರೀತಿ ಸಹಜವಾದುದು. ಮಕ್ಕಳು ಬಾಲ್ಯಾವಸ್ಥೆಯಲ್ಲಿದ್ದಾಗ ಮಕ್ಕಳ ಪೋಷಣೆಗೆ ಅನೇಕ ರೀತಿಯ ತ್ಯಾಗಗಳನ್ನು ಮಾಡುತ್ತಾರೆ. ಅನೇಕ ಹೆತ್ತವರು ಮಕ್ಕಳಿಗೆ ಅಂಗಾಂಗ ದಾನ ಮಾಡಿದ ನಿದರ್ಶನಗಳು ಸಹ ಉಂಟು. ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ಮಕ್ಕಳ ಜೀವ ಉಳಿಸಿಕೊಂಡಿದ್ದು ಉಂಟು. ಮಕ್ಕಳು ಅಷ್ಟೆ, ಬಾಲ್ಯದಲ್ಲಿ ಎಲ್ಲದಕ್ಕೂ ಹೆತ್ತವರ ಮೇಲೆ ಅವಲಂಬಿತರಾದ ಕಾರಣಕ್ಕೆ ಅವರೇ ದೇವರಂತೆ ಕಾಣುತ್ತಾರೆ. ಭೂಮಿ ಮೇಲೆ ಬೇರೆ ಎಲ್ಲದಕ್ಕಿಂತ ಹೆತ್ತವರನ್ನು ಪ್ರೀತಿಸುತ್ತಾರೆ. ಮಕ್ಕಳು ಬೆಳೆದು ದೊಡ್ಡವರಾದ ಮೇಲೆ ಪೋಷಕರ ಅವಲಂಬನೆ ಕಡಿಮೆಯಾಗುತ್ತಿದ್ದಂತೆ ಕ್ರಮೇಣ ದೂರ ಸರಿಯುತ್ತಾರೆ. ಇದು ಪ್ರಕೃತಿ ನಿಯಮ. ದೊಡ್ಡವರಾದ ಮೇಲೆ ಪ್ರೀತಿಯು ಪಲ್ಲಟವಾಗಿ ಬಾಳ ಸಂಗಾತಿಯನ್ನು ಹೆಚ್ಚು ಪ್ರೀತಿಸಲು ಪ್ರಾರಂಭಿಸುತ್ತಾರೆ.

ಹೆತ್ತವರಿಗೆ ಮಕ್ಕಳ ಮೇಲಿನ ಇರಿಸಿರುವ ಪ್ರೀತಿ, ತೋರುವ ಕಾಳಜಿ ಹಿಂದೆ ಒಂದು ಸಣ್ಣ ಸ್ವಾರ್ಥವೂ ಇರುತ್ತದೆ. ಅದೇನೆಂದರೆ ವಯಸ್ಸಾದ ಮೇಲೆ ಮಕ್ಕಳು ನಮ್ಮನ್ನು ಚೆನ್ನಾಗಿ ನೋಡಿಕೊಳ್ಳಲಿ ಎಂಬ ಸ್ವಾರ್ಥ ಇರುತ್ತದೆ. ಇದೊಂದು ಸಹಜ ನಿರೀಕ್ಷೆ ಎನಿಸಿದರೂ, ಯಾವ ಪ್ರಾಣಿಪಕ್ಷಿಗಳಲ್ಲಿ ಕಂಡು ಬರುವುದಿಲ್ಲ. ಪ್ರಾಣಿಪಕ್ಷಿಗಳು ತಮ್ಮ ಮರಿಗಳನ್ನು ಸಾಕಿ ಸಲಹುತ್ತವೆಯೇ ಹೊರತು, ಬೆಳೆದ ಮೇಲೆ ಅವುಗಳು ನಮ್ಮನ್ನು ನೋಡಿಕೊಳ್ಳಲಿ ಎಂಬ ನಿರೀಕ್ಷೆಯಾಗಲಿ, ಭರವಸೆಯನ್ನಾಗಲಿ ಹೊಂದಿರುವುದಿಲ್ಲ. ಆದರೆ ಮಾನವೀಯತೆಯ ಮನುಷ್ಯನಿಗೆ ಈ ನಿರೀಕ್ಷೆ ಇರುತ್ತದೆ. ಇಳಿವಯಸ್ಸಿನಲ್ಲಿ ಹೆತ್ತವರನ್ನು ನೋಡಿಕೊಳ್ಳುವುದು ಮನುಷ್ಯ ಧರ್ಮ ಎಂದು ಭಾವಿಸುತ್ತಾರೆ. ಇದೊಂದು ಅಲಿಖಿತ ನಿಯಮವೇನೋ ಎಂಬಂತೆ ನಮ್ಮ ಪೂರ್ವಿಕರು ಬದುಕಿ ತೋರಿದ್ದಾರೆ.

ಇಂದು ಪತಿಪತ್ನಿಯರ ಪ್ರೀತಿಯಲ್ಲಿಯೂ ನೀತಿ–ನಿಯಮಾವಳಿಗಳು ಬದಲಾಗುತ್ತಿವೆ. ದಾಂಪತ್ಯ ಎಂಬುದು ಪರಸ್ಪರ ಪ್ರೀತಿ, ವಿಶ್ವಾಸ, ತ್ಯಾಗ, ನಂಬಿಕೆಯ ನೆಲೆಗಟ್ಟಿನಲ್ಲಿ ಉಳಿಯುವ ಒಂದು ಪವಿತ್ರ ಬಂಧ. ಆದರೆ ಅದು ಸಹ ಇಂದು ವ್ಯವಹಾರಿಕವಾಗುತ್ತಿರುವುದು ದುರದೃಷ್ಟಕರ. ಅನೇಕ ಯುವಕ–ಯುವತಿಯರು ಪರಸ್ಪರ ಮಾತನಾಡಿ, ಅಭಿರುಚಿ, ಸಂಬಳ, ಆಸ್ತಿ, ಭವಿಷ್ಯ ಹೀಗೆ ಎಲ್ಲವುಗಳ ಚರ್ಚೆಯಾದ ಮೇಲೆ ಶಾಸ್ತ್ರೋಕ್ತವಾಗಿ ವಿವಾಹವಾದರೂ ಕೆಲವರ್ಷಗಳು ಸಹ ಸಂಸಾರ ಮಾಡದೇ ಸಣ್ಣಪುಟ್ಟ ಘರ್ಷಣೆ/ಸಮಸ್ಯೆಗಳಿಗೆ ವಿಚ್ಛೇದನಕ್ಕೆ ಮುಂದಾಗುತ್ತಿರುವುದು ಸಮಾಜದಲ್ಲಿ ಒಂದು ದೊಡ್ಡ ಸಮಸ್ಯೆಯಾಗುತ್ತಿದೆ. ಹೊಂದಾಣಿಕೆ ಕೊರತೆಯಿಂದ ಸಂಬಂಧಗಳಲ್ಲಿ ಬಿರುಕು ಮೂಡುತ್ತಿವೆ. ಸಮಯಾವಕಾಶ ಕೊಡದೆ ದೀಢೀರನೆ ದೊಡ್ಡ ತೀರ್ಮಾನಕ್ಕೆ ಬಂದುಬಿಡುತ್ತಾರೆ. ನಾಗರೀಕ ಪ್ರಪಂಚದಲ್ಲಿ ಅನೇಕ ಅನಾಗರೀಕ ನಡವಳಿಕೆಗಳು ಜರುಗುತ್ತಿವೆ. ಮನುಷ್ಯ ಆರ್ಥಿಕವಾಗಿ ಸ್ವಾವಲಂಬಿಯಾದಷ್ಟು ಸಾಮಾಜಿಕವಾಗಿ ದುರ್ಬಲನಾಗುತ್ತಿರುವುದು ಒಂದು ಅನಾರೋಗ್ಯಕರ ಬೆಳವಣಿಗೆಯಾಗಿದೆ. ಪ್ರೀತಿಯ ವಿಚಾರದಲ್ಲಿ ಸೋತು ಗೆಲ್ಲುವವರ ಸಂಬಂಧ ಗಟ್ಟಿಯಾಗಿರುತ್ತದೆ, ಧೀರ್ಘಕಾಲ ಬಾಳಿಕೆ ಬರುತ್ತದೆ. ಆದರೆ ಸದಾ ನನ್ನ ಮಾತೇ ನಡೆಯಬೇಕು, ತಾನೇ ಗೆಲ್ಲಬೇಕು ಎಂಬ ಹಠ ಪ್ರೀತಿಯ ಸಂಬಂಧದಲ್ಲಿ ಸೋಲುಂಟುಮಾಡುತ್ತದೆ. ಇತ್ತೀಚಿಗೆ ಪ್ರೀತಿಗೆ ವ್ಯಾಲಿಡಿಟಿ ಕಡಿಮೆಯಾಗುತ್ತಿದೆ.

ಮನುಷ್ಯ ಭಾವಜೀವಿ ನಿಜ. ಆದರೆ ಎಷ್ಟೋ ಬಾರಿ ಪ್ರಾಕ್ಟಿಕಲ್ ಆಗಿ ಇರಬೇಕಾಗುತ್ತದೆ. ಭಾವನೆಗಳ ಜೊತೆ ಆಟವಾಡಿ ಜೀವನವನ್ನೇ ಹಾಳು ಮಾಡಿ ಬಿಡುವ ವಂಚಕರ ಜಾಲ ಸಕ್ರಿಯವಾಗಿರುತ್ತದೆ. ಆದರ್ಶ ಎಂಬುದು ಸಿನಿಮಾ ನಾಟಕಗಳಲ್ಲಿ ಮಾತ್ರ ಹೆಚ್ಚಾಗಿ ನೋಡಬಹುದಾಗಿರುತ್ತದೆ. ನಿಜ ಜೀವನದಲ್ಲಿ ಆದರ್ಶದ ಮುಖವಾಡ ಧರಿಸಿ ಜನರಿಗೆ ಮೋಸ ಮಾಡುವವರ ಸಂಖ್ಯೆ ಕಡಿಮೆ ಏನಿಲ್ಲ. ಅನೇಕ ಸಂಬಂಧಿಕರು ಪ್ರೀತಿ ವಿಶ್ವಾಸ ತೋರಿಸಿ ಆರ್ಥಿಕ ಸಹಾಯ ಪಡೆದು, ಕೃತಜ್ಞತೆಯಿಲ್ಲದೆ ದೂರ ಸರಿದುಬಿಡುತ್ತಾರೆ. ಸಹೋದರ–ಸಹೋದರಿಯರೇ ಹಣ,ಆಸ್ತಿಯ ಮೇಲಿನ ಆಸೆಗಾಗಿ ಕೃತಕ ಪ್ರೀತಿ ತೋರಿ, ತಮ್ಮ ಕೆಲಸವಾದ ಮೇಲೆ ಕಾಲಕಸವಾಗಿ ಕಾಣುತ್ತಾರೆ. ಎಲ್ಲದಕ್ಕೂ ಒಂದು ಮಿತಿ ಇರಬೇಕು ಎನ್ನುವಂತೆ ಪ್ರೀತಿಯ ವಿಷಯದಲ್ಲಿಯೂ ಮಿತಿ ಹೇರಿಕೊಳ್ಳಬೇಕು. ಹೆತ್ತವರು ಅಷ್ಟೇ, ಎಲ್ಲವನ್ನು ಅಂಧಪ್ರೀತಿಯಲ್ಲಿ ಮಕ್ಕಳಿಗೆ ಧಾರೆ ಎರೆಯಬಾರದು, ಇಳಿವಯಸ್ಸಿನಲ್ಲಿ ತಮ್ಮ ಭದ್ರತೆಗಾಗಿ ಹಣಕಾಸು, ಆಸ್ತಿಯನ್ನು ಇರಿಸಿಕೊಳ್ಳಬೇಕು. ಮಕ್ಕಳ ಮೇಲೆ ಅತಿಯಾದ ನಿರೀಕ್ಷೆ ಇರಿಸಿಕೊಳ್ಳಬಾರದು. ಆ ನಿರೀಕ್ಷೆ ನಿರಾಸೆ ತರುವುದರಲ್ಲಿ ಅನುಮಾನವೇ ಇಲ್ಲ. ಮಕ್ಕಳಿಗೆ ಆರೋಗ್ಯ, ಶಿಕ್ಷಣ, ಸಂಸ್ಕಾರವನ್ನು ನೀಡಿ ಅವರ ಕಾಲ ಮೇಲೆ ಅವರು ನಿಲ್ಲುವಂತೆ ಮಾಡಿ ನಿಶ್ಚಿಂತರಾಗಬೇಕು. ಅವರಿಂದ ಪ್ರತಿಯಾಗಿ ಎಲ್ಲವನ್ನೂ ಬಯಸಬಾರದು. ಆದರೂ ಕೆಲವು ಮಕ್ಕಳು ಹೆತ್ತವರನ್ನು ನಿರೀಕ್ಷೆಗೂ ಮೀರಿ ಕಾಳಜಿ ಮಾಡುವುದನ್ನು ಕಾಣಬಹುದು, ಅಂತಹವರ ಸಂಖ್ಯೆ ವಿರಳ.

ಯುವಕ ಯುವತಿಯರು ಅಷ್ಟೇ ಪ್ರೀತಿಯ ಬಲೆಯಲ್ಲಿ ಸಿಲುಕಿ ಹಾಕಿಕೊಂಡು ಸುಂದರ ಬದುಕನ್ನು ಹಾಳುಮಾಡಿಕೊಳ್ಳಬಾರದು. ಮೊದಲು ಶಿಕ್ಷಣ, ನಂತರ ನೌಕರಿ ಆನಂತರ ಪ್ರೀತಿ ಪ್ರೇಮ ಮದುವೆ ಎಂದು ಭಾವಿಸಬೇಕು. ಹದಿಹರೆಯದ ವಯಸ್ಸಿನಲ್ಲಿ ಪ್ರೀತಿ ಎಂಬ ಮಾಯೆಗೆ ಸಿಲುಕಬಾರದು. ದಂಪತಿಗಳು ಅಷ್ಟೆ ಪರಸ್ಪರ ಗೌರವಿಸಿಕೊಂಡು ಬದುಕಬೇಕು. ಅತಿಯಾದ ನಿರೀಕ್ಷೆಗಳನ್ನು ಪರಸ್ಪರ ಹೊಂದಿರಬಾರದು. ಸಮರಸವೇ ಜೀವನ ಎಂಬಂತೆ ಬದುಕಬೇಕು. ಇನ್ನು ಬಂಧು–ಬಳಗದ ಪ್ರೀತಿವಿಶ್ವಾಸಕ್ಕೂ ಒಂದು ಮಿತಿ ಹೇರಿಕೊಳ್ಳಬೇಕು. ಬಣ್ಣದ ಮಾತಿಗೆ ಬಲಿಯಾಗಿ ಹಣ, ಮಾನ ಹೀಗೆ ಏನನ್ನೂ ಕಳೆದುಕೊಳ್ಳಬಾರದು. ಪ್ರೀತಿಗೂ ಒಂದು ರೀತಿ–ನೀತಿ ಇರಬೇಕು. ಆಗ ಬದುಕಿನಲ್ಲಿ ಇರುವುದಿಲ್ಲ ಪಜೀತಿ.

ಹೂರಣ: **ನೈಜಪ್ರೀತಿ ಇದ್ದರೆ ಬದುಕು ಸುಂದರ, ಅಂಧಪ್ರೀತಿ ಇದ್ದರೆ ಬದುಕು ಬರ್ಬರ!**

ಇಂದಿನಿಂದ ಮೈಸೂರು ಪ್ರಸಾರಾಂಗದಲ್ಲಿ ಪುಸ್ತಕೋತ್ಸವ

ಮೈಸೂರು, ಡಿ.7(ಎಂಕೆ)–ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯಲ್ಲಿರುವ ಪ್ರಸಾರಾಂಗ ಹಾಗೂ ರಾಮಸ್ವಾಮಿ ವೃತ್ತದಲ್ಲಿರುವ ಪ್ರಸಾರಾಂಗದ ಮಾರಾಟ ಮಳಿಗೆಯಲ್ಲಿ ಡಿ.8ರಿಂದ 31ರವರೆಗೆ 'ಪ್ರಸಾರಾಂಗದ ಪುಸ್ತಕೋತ್ಸವ–2025'ದ ಅಂಗವಾಗಿ ವಿಶೇಷ ರಿಯಾಯಿತಿ ದರದಲ್ಲಿ ಪುಸ್ತಕ ಮಾರಾಟ ಮೇಳ ಹಮ್ಮಿಕೊಳ್ಳಲಾಗಿದೆ ಎಂದು ಪ್ರಸಾರಾಂಗದ ನಿರ್ದೇಶಕ ಪ್ರೊ.ನಂಜಯ್ಯ ಎಂ.ಹೊಂಗನೂರು ತಿಳಿಸಿದರು.

ಪ್ರಸಾರಾಂಗದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ರಾಷ್ಟ್ರಕವಿ ಕುವೆಂಪು ಕನಸಿನ ಸಂಸ್ಥೆಯಾದ ಪ್ರಸಾರಾಂಗ 1933ರಲ್ಲಿ ಸ್ಥಾಪನೆಯಾಗಿದ್ದು, ಇಲ್ಲಿಯವರೆಗೆ 2800ಕ್ಕೂ ಹೆಚ್ಚು ಪುಸ್ತಕಗಳನ್ನು ಮುದ್ರಿಸಿ ಮಾರಾಟ ಮಾಡಿದೆ. 92 ವರ್ಷಗಳ ಪೂರೈಸಿರುವ ಹಿನ್ನಲೆಯಲ್ಲಿ ಪುಸ್ತಕೋತ್ಸವ ಆಚರಿಸಲಾಗುತ್ತಿದೆ ಎಂದರು.

ಪ್ರಕಟಗೊಂಡು 40 ವರ್ಷ ಮೀರಿರುವ ಎಲ್ಲಾ ಪ್ರಕಟಣೆಗಳಿಗೆ ಶೇ.75 ರಷ್ಟು, ಪಠ್ಯಕ್ರಮ ಮುಗಿದು ಹೋಗಿರುವ ಹಳೆ ಪದವಿ ಪೂರ್ವ ಹಾಗೂ ಪದವಿ ಸೆಮಿಸ್ಟರ್ ಪಠ್ಯಪುಸ್ತಕಗಳಿಗೆ ಶೇ.75ರಷ್ಟು, ಪ್ರಾಚ್ಯವಿದ್ಯಾ ಸಂಶೋಧನಾಲಯದ ಹಳೆಯ ಪ್ರಕಟಣೆಗಳಿಗೆ ಶೇ.70ರಷ್ಟು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಳೆಯ ಪ್ರಕಟಣೆಗಳಿಗೆ ಶೇ.60 ರಷ್ಟು, ಕನ್ನಡ ವಿಶ್ವಕೋಶ, ವಿಷಯ ವಿಶ್ವಕೋಶ ಹಾಗೂ ಎಪಿಗ್ರಾಫಿಯ ಕರ್ನಾಟಕದ ಎಲ್ಲಾ ಸಂಪುಟಗಳಿಗೆ ಶೇ.50ರಷ್ಟು, ಪ್ರಸಾರಾಂಗದ ದಾಸ್ತಾನಿನಲ್ಲಿರುವ ಎಲ್ಲಾ ಸಾಮಾನ್ಯ ಶೀರ್ಷಿಕೆಯ ಪುಸ್ತಕಗಳಿಗೆ ಶೇ.50ರಷ್ಟು, ಇಂಗ್ಲಿಷ್ ಕನ್ನಡ ನಿಘಂಟುಗಳಿಗೆ ಶೇ.25ರಷ್ಟು ಹಾಗೂ ಪ್ರಚಾರೋಪನ್ಯಾಸ ಮಾಲೆಯ ಪುಸ್ತಕಗಳು (ನೂರು ಪ್ರತಿಗಳ ಖರೀದಿಗೆ) ಶೇ.10 ರಷ್ಟು ರಿಯಾಯಿತಿ ನೀಡಲಾಗಿದೆ ಎಂದರು.

ಮೇಳದಲ್ಲಿ 870 ಶೀರ್ಷಿಕೆಯ 9 ಲಕ್ಷಕ್ಕೂ ಅಧಿಕ ಪುಸ್ತಕಗಳನ್ನು ಭಾರೀ ರಿಯಾಯಿತಿ ದರದಲ್ಲಿ ಖರೀದಿಸಲು ಅವಕಾಶ ನೀಡಲಾಗಿದೆ. ಎಲ್ಲಾ ಪುಸ್ತಕಗಳ ಅಂದಾಜು ಮೌಲ್ಯ 12 ಕೋಟಿ ರೂ.ಗಳಾಗಿದ್ದು, ರಿಯಾಯಿತಿ ದರದಲ್ಲಿ 50 ಲಕ್ಷ ರೂ.ಗಳಿಗೆ ಎಲ್ಲಾ ಕೃತಿಗಳನ್ನು ಖರೀದಿಸಬಹುದಾಗಿದೆ. ರಿಯಾಯಿತಿ ಮಾರಾಟದಿಂದ 25 ಲಕ್ಷ ರೂ. ವ್ಯಾಪಾರದ ನಿರೀಕ್ಷೆ ಇದೆ. ಮೈಸೂರು ವಿವಿಗೆ ವರಮಾನ ತಂದುಕೊಡುವ ಏಕೈಕ ಸಂಸ್ಥೆ ಪ್ರಾಸಾರಾಂಗವಾಗಿದ್ದು, ವಾರ್ಷಿಕ 60 ರಿಂದ 70 ಲಕ್ಷ ರೂ. ವಹಿವಾಟು ನಡೆಯುತ್ತದೆ. ಈ ವರ್ಷದ ನವೆಂಬರ್ ತಿಂಗಳಲ್ಲಿ ನೀಡಿದ ವಿಶೇಷ ರಿಯಾಯಿತಿಯಿಂದ 3 ಲಕ್ಷ ರೂ.ಗಳ ಪುಸ್ತಕ ಮಾರಾಟವಾಗಿದೆ ಎಂದು ಮಾಹಿತಿ ನೀಡಿದರು.

ಎರಡು ದಿನ ಪುಸ್ತಕೋತ್ಸವ ಕಾರ್ಯಕ್ರಮ: ಡಿ.15 ಮತ್ತು 16ರಂದು ಪ್ರಸಾರಾಂಗದ ಆವರಣದಲ್ಲಿ ಪುಸ್ತಕೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಮೌಲಿಕವಾದ 8 ರಿಂದ 10 ಕೃತಿಗಳ ಕುರಿತು ವಿದ್ವಾಂಸರು ವಿಮರ್ಶೆ ಭಾಷಣ ಮಾಡಲಿದ್ದಾರೆ. ಇದೇ ವೇಳೆ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದವರನ್ನು ಗೌರವಿಸಲಾಗುವುದು ಎಂದರು.

ನಷ್ಟವಾಗುವುದಿಲ್ಲ: ಪ್ರಸಾರಾಂಗದ ಸಹಾಯಕ ನಿರ್ದೇಶಕ ಡಾ.ಬಿ.ಎಸ್. ಅನಿಲ್‌ಕುಮಾರ್ ಮಾತನಾಡಿ, ವಿಶೇಷ ರಿಯಾಯಿತಿ ಮೇಳ ಆರಂಭಕ್ಕೂ ಮುನ್ನವೇ ನಾಡಿನಾದ್ಯಂತ ವಿವಿಧ ಸಂಸ್ಥೆಗಳು ಖರೀದಿಗೆ ಆಸಕ್ತಿ ತೋರಿವೆ. ರಿಯಾಯಿತಿ ಮಾರಾಟದಿಂದ ಪ್ರಸಾರಾಂಗಕ್ಕೆ ಯಾವುದೇ ನಷ್ಟವಾಗುವುದಿಲ್ಲ. ದಾಸ್ತಾನಿನಲ್ಲಿ ಉಳಿದಿರುವ ಪುಸ್ತಕಗಳ ಲಾಭಾಂಶ ಈಗಾಗಲೇ ದೊರೆತಿದೆ. ಎಲ್ಲರಿಗೂ ವೈವಿಧ್ಯಮಯವಾದ ಅಪರೂಪದ ಕೃತಿಗಳು ಲಭ್ಯವಾಗಲೆಂದು ಮೇಳವನ್ನು ಸಂಘಟಿಸಲಾಗಿದೆ ಎಂದು ಹೇಳಿದರು. ಈ ವೇಳೆ ಪ್ರಸಾರಾಂಗದ ಅಧೀಕ್ಷಕ ಎಂ.ಡಿ.ಚನ್ನಬಸಪ್ಪ ಉಪಸ್ಥಿತರಿದ್ದರು.

ವಿಶೇಷ ರಿಯಾಯ್ತಿ ದರದಲ್ಲಿ ಪುಸ್ತಕಗಳ ಮಾರಾಟ ಮೇಳ



ಮೈಸೂರು ವಿವಿ ಪ್ರಸಾರಾಂಗದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಪ್ರಸಾರಾಂಗ ನಿರ್ದೇಶಕ ಪ್ರೊ.ನಂಜುಯ್ಯ ಹೊಂಗನೂರು ಮಾತನಾಡಿದರು. ಸಹಾಯಕ ನಿರ್ದೇಶಕ ಡಾ.ಅನಿಲ್‌ಕುಮಾರ, ಅಧೀಕ್ಷಕ ಚನ್ನಬಸಪ್ಪ ಉಪಸ್ಥಿತರಿದ್ದರು.

ವೆಬ್‌ಸೈಟ್ ಶೀಘ್ರ ಕಾರ್ಯಾರಂಭ...

ಮೈಸೂರು ವಿವಿ ಪ್ರಸಾರಾಂಗದ ವೆಬ್‌ಸೈಟ್ ಶೀಘ್ರ ಕಾರ್ಯಾರಂಭ ಮಾಡಲಿದೆ. ಪ್ರಸಾರಾಂಗದ ವ್ಯಾಪಾರ ಮಳಿಗೆಗಳಲ್ಲಿ ಆನ್‌ಲೈನ್ ಬಿಲ್ಲಿಂಗ್ ವ್ಯವಸ್ಥೆ ಇದ್ದು, ಆನ್‌ಲೈನ್ ಮೂಲಕವೂ ಪುಸ್ತಕಗಳನ್ನು ಖರೀದಿಸಬಹುದಾಗಿದೆ. ಪ್ರಚಾರೋಪನ್ಯಾಸ ಮಾಲೆಯ 25 ಪುಸ್ತಕಗಳು ಲೋಕಾರ್ಪಣೆಗೆ ಸಿದ್ಧಗೊಂಡಿವೆ. ರಾಷ್ಟ್ರಕವಿ ಕುವೆಂಪು ಸೇರಿದಂತೆ ಅನೇಕ ಪ್ರಾಜ್ಞರ ಬೌದ್ಧಿಕ ಪರಂಪರೆಯನ್ನು ಜನಸಾಮಾನ್ಯರಿಗೆ ತಲುಪಿಸಲು ಕಾರ್ಯೋನ್ಮುಖರಾಗಿದ್ದೇವೆ.

–ಪ್ರೊ.ನಂಜಯ್ಯ ಎಂ.ಹೊಂಗನೂರು,
ನಿರ್ದೇಶಕ, ಮೈಸೂರು ವಿವಿ ಪ್ರಸಾರಾಂಗ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ರಕ್ತದಾನ, ಆರೋಗ್ಯ ತಪಾಸಣೆ ಶಿಬಿರ



ಕಾವೇರಿ ಶಿಕ್ಷಣ ಸಂಸ್ಥೆ ಆವರಣದಲ್ಲಿ ಆಯೋಜಿಸಿದ್ದ 'ರಕ್ತದಾನ ಶಿಬಿರ, ಉಚಿತ ಆರೋಗ್ಯ ಮತ್ತು ಕಣ್ಣಿನ ತಪಾಸಣಾ ಶಿಬಿರ'ವನ್ನು ನಿವೃತ್ತ ಅಡ್ಮಿರಲ್ ಜನರಲ್ ರವಿ ಗಾಯಕ್ವಾಡ್, ನಿವೃತ್ತ ಲೆಫ್ಟಿನೆಂಟ್ ಕಮಾಂಡರ್ ಪುಷ್ಪ ಗಾಯಕ್ವಾಡ್ ಉದ್ಘಾಟಿಸಿದರು.

ಮೈಸೂರು, ಡಿ.7(ಎಂಕೆ)– ಮೈಸೂರಿನ ಕುವೆಂಪುನಗರದಲ್ಲಿರುವ ಕಾವೇರಿ ಶಿಕ್ಷಣ ಸಂಸ್ಥೆ ಆವರಣದಲ್ಲಿ ನೌಕಾಪಡೆ ನಿವೃತ್ತ ಅಧಿಕಾರಿಗಳ ಸಂಘ, ಯುವ ಬ್ರಿಗೇಡ್, ಜೀವಧಾರ ರಕ್ತದಾನ ಕೇಂದ್ರ, ಎಎಸ್‌ಜಿ ಕಣ್ಣಿನ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಭಾನುವಾರ 'ರಕ್ತದಾನ ಶಿಬಿರ, ಉಚಿತ ಆರೋಗ್ಯ ಮತ್ತು ಕಣ್ಣಿನ ತಪಾಸಣಾ ಶಿಬಿರ' ನಡೆಸಲಾಯಿತು.

ಭನುವಾರ ಬೆಳಗ್ಗೆ 9 ಗಂಟೆಯಿಂದ ಆರಂಭವಾಗಿ ಮಧ್ಯಾಹ್ನದವರೆಗೆ ನಡೆದ ಶಿಬಿರದಲ್ಲಿ ಮಕ್ಕಳು, ಮಹಿಳೆಯರು ಸೇರಿದಂತೆ ನೂರಾರು ಮಂದಿ ಭಾಗವಹಿಸಿ ಕಣ್ಣು, ಡಯಾಬಿಟಿಸ್, ರಕ್ತದೊತ್ತಡ ಸೇರಿದಂತೆ ಇನ್ನಿತರೆ ಕಾಯಿಲೆಗಳ ತಪಾಸಣೆ ಮಾಡಿಸಿಕೊಂಡರು. ಅಲ್ಲದೆ ಹಲವು ಮಂದಿ ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡುವ ಮೂಲಕ ಸಾಮಾಜಿಕ ಜವಾಬ್ದಾರಿ ಮೆರೆದರು.

ಶಿಬಿರ ಉದ್ಘಾಟಿಸಿದ ನಿವೃತ್ತ ಅಡ್ಮಿರಲ್ ಜನರಲ್ ರವಿ ಗಾಯಕ್ವಾಡ್ ಮಾತನಾಡಿ, ಮೈಸೂರಿನಲ್ಲಿ ನಿವೃತ್ತ ನೌಕಾಪಡೆ ಅಧಿಕಾರಿಗಳು ಕೈಗೊಳ್ಳುತ್ತಿರುವ ಸಮಾಜಮುಖಿ ಕಾರ್ಯಕ್ರಮಗಳು ಅತ್ಯಂತ ಶ್ಲಾಘನೀಯವಾಗಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರಲ್ಲದೆ, ಭಾರತೀಯ ನೌಕಾಪಡೆ ಸಶಕ್ತ ನೌಕಾಪಡೆಯಾಗಿದ್ದು, ಬಹುತೇಕ ಸ್ವದೇಶಿ ನಿರ್ಮಿತ ಯುದ್ಧ ನೌಕೆಗಳನ್ನು ಒಳಗೊಂಡಿದೆ ಎಂದು ತಿಳಿಸಿದರು.

ನಿವೃತ್ತ ಲೆಫ್ಟಿನೆಂಟ್ ಕಮಾಂಡರ್ ಪುಷ್ಪ ಗಾಯಕ್ವಾಡ್, ನಿವೃತ್ತ ಕಮಾಂಡರ್ ಎಸಿಎಸ್ ರಾವ್, ನಿವೃತ್ತ ಸರ್ಜನ್ ಕ್ಯಾಪ್ಟನ್ ನಿಯಮತ್ ಉಲ್ಲಾ, ನೌಕಾಪಡೆ ನಿವೃತ್ತ ಅಧಿಕಾರಿಗಳ ಸಂಘದ ಅಧ್ಯಕ್ಷ ಗಜಾನನ ಸಿ.ಭಟ್, ಕಾರ್ಯದರ್ಶಿ ಚಂದ್ರಕುಮಾರ್, ಖಜಾಂಚಿ ನವೀನ್, ಪ್ರಭು, ಹೊನ್ನಪ್ಪ, ಬಾಲಸುಬ್ರಹ್ಮಣ್ಯ, ದಿನೇಶ್, ಸೈಯದ್ ಹೈದರಿ, ಜಯಪ್ರಕಾಶ್ ಮತ್ತಿತರರಿದ್ದರು.

ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ ಅಧ್ಯಕ್ಷರಾಗಿ ಪಿ. ವಿಶ್ವನಾಥ್ ಆಯ್ಕೆ

ಮೈಸೂರು,ಡಿ.7–ಮೈಸೂರಿನ ಹೆಚ್.ಸಿ. ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆಯ 51ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯು ಅಧ್ಯಕ್ಷ ಡಾ.ಕೆ.ಮಹದೇವ್ ಮತ್ತು ಕಾರ್ಯದರ್ಶಿ ಶ್ರೀಮತಿ ಸರೋಜ ತುಳಸೀದಾಸ್ ನೇತೃತ್ವದಲ್ಲಿ ನಡೆಯಿತು.

ನೂತನ ಉಪಾಧ್ಯಕ್ಷರನ್ನಾಗಿ ಮಾಜಿ ಮೇಯರ್ ಪಿ.ವಿಶ್ವನಾಥ್ ಮತ್ತು ಖಜಾಂಚಿಯಾಗಿ ವಿಜಯ ಬ್ಯಾಂಕ್ ನಿವೃತ್ತ ಉದ್ಯೋಗಿ ಸೋಮನಾಥ್ ಅವರನ್ನು ಆಯ್ಕೆ ಮಾಡಲಾಯಿತು.

ಮೈಸೂರಿನ ತೊಣಚಿಕೊಪ್ಪಲಿನ ಮಾರುತಿ ಮಂದಿರ ರಸ್ತೆಯಲ್ಲಿದ್ದ ಸಂಸ್ಥೆಗೆ ಸೇರಿದ ನಿವೇಶನದಲ್ಲಿ ನಿರ್ಮಾಣ ಮಾಡುತ್ತಿರುವ ಹಾಸ್ಟೆಲ್ ಕಟ್ಟಡದಲ್ಲಿ ಮೊದಲ ಅಂತಸ್ತಿನ ಕಾರ್ಯ ಪೂರ್ಣಗೊಂಡಿದ್ದು, ಉಳಿದ ಕಾರ್ಯದ ರೂಪುರೇಷೆ ಬಗ್ಗೆ ಸಮಾಲೋಚನೆ ನಡೆಸಲಾಯಿತು. ಸರ್ವಸದಸ್ಯರ ಅನುಮೋದನೆಯೊಂದಿಗೆ 6 ವಿದ್ಯಾರ್ಥಿಗಳಿರುವ 1 ಕೊಠಡಿ ನಿರ್ಮಾಣಕ್ಕೆ 10 ಲಕ್ಷ ನೀಡುವ ದಾನಿಗಳ ಹೆಸರಿಡಲು ನಿರ್ಧರಿಸಲಾಯಿತು. ಕಟ್ಟಡ ನಿರ್ಮಾಣಕ್ಕೆ 1.25 ಕೋಟಿ ರೂ. ನೀಡಿದ ಮಾಜಿ ಲೋಕಸಭಾ ಸದಸ್ಯ ಹೆಚ್.ಡಿ. ತುಳಸೀದಾಸ್ ಪುತ್ರಿ ಚರಿತಾ ಪ್ರವೀಣ್, ಹಿರಿಯ ಸದಸ್ಯರಾದ ರೈಲ್ವೆ ಶ್ರೀನಿವಾಸ್ ಅವರ ಮಗ ಚೇತನ್ ಶ್ರೀನಿವಾಸ್ ಮತ್ತು ಸೊಸೆ ದೀಪ್ತಿಚೇತನ್ ನೀಡಿದ ತಲಾ 1 ಲಕ್ಷ ರೂ. ಕೊಡುಗೆ ಪ್ರಸ್ತಾಪಿಸಲಾಯಿತು.

12 ಮಂದಿ ಇದ್ದ ಕಾರ್ಯಕಾರಿ ಸಮಿತಿ ಸದಸ್ಯರ ಸಂಖ್ಯೆಯನ್ನು 15 ಮಂದಿಗೆ ಏರಿಸಲಾಯಿತು. ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯಲ್ಲಿ ವಿದ್ಯಾವರ್ಧಕ ವಿದ್ಯಾ ಸಂಸ್ಥೆ ಅಧ್ಯಕ್ಷ ಗುಂಡಪ್ಪಗೌಡ, ಕೆ.ಹೆಚ್.ರಾಮಯ್ಯ ಹಾಸ್ಟೆಲ್ ಧರ್ಮದರ್ಶಿ ಕೆ.ಟಿ.ಕೃಷ್ಣಪ್ಪ, ಶ್ರೀಮತಿ ಯಶೋಧರ ದಾಸಪ್ಪ ಕನ್ಯಾವಿದ್ಯಾಲಯದ ಅಮರೇಶ್ ದಾಸ್, ಮರೀಗೌಡ, ಶಿವಲಿಂಗಯ್ಯ, ಶ್ರೀಮತಿ ಉಮಾ ರಮೇಶ್, ಡಾ.ಪಿ.ಸುದರ್ಶನ್, ಶ್ರೀಮತಿ ಮಹಿಮಾ ಚಂಪಾ, ಮೋಹನ್‌ದಾಸ್, ಎಸ್.ಪ್ರಕಾಶ್ ಬಾಬು ಇನ್ನಿತರರು ಉಪಸ್ಥಿತರಿದ್ದರು.

ಸಂಗೀತವು ಅದ್ಭುತ ಮನೋಚಿಕಿತ್ಸೆ

ಕವಿ ಡಾ.ಜಯಪ್ಪ ಹೊನ್ನಾಳಿ ಅಭಿಮತ



ಜಯಪ್ಪ ಹೊನ್ನಾಳಿ

ಮೈಸೂರು, ಡಿ. 7– ಸಂಗೀತ ಕೇವಲ ಮನೋರಂಜನೆಯ ಸಾಧನವಲ್ಲ, ಅದೊಂದು ಸಾಮಾಜಿಕ, ಧಾರ್ಮಿಕ, ಅಧ್ಯಾತ್ಮಿಕ ಮತ್ತು ಭಾವನಾತ್ಮಕ ಅಭಿವ್ಯಕ್ತಿಯ ಪ್ರಮುಖ ಮಾಧ್ಯಮವಾಗಿದ್ದು, ನರಳುವ ಮನಸ್ಸುಗಳ ಅರಳಿಸುವ ಅದ್ಭುತವಾದ ಮನೋಚಿಕಿತ್ಸೆಯಾಗಿದೆ ಎಂದು ಮೈಸೂರು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ, ಕವಿ ಡಾ.ಜಯಪ್ಪ ಹೊನ್ನಾಳಿ ಹೇಳಿದರು.

ರೋಟರಿ ಮೈಸೂರು ಉತ್ತರ ಹಾಗೂ ಇನ್ನರ್ ವ್ಹೀಲ್ ಮೈಸೂರು ಉತ್ತರ ಸಂಸ್ಥೆಗಳ ಸಹಯೋಗದೊಂದಿಗೆ ನಡೆದ ಗೊ.ರು.ಚ. ಅಂತರ ಕಾಲೇಜು ಸುಗಮ ಸಂಗೀತ ಸ್ಪರ್ಧೆಯ ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗಿ ಮಾತನಾಡುತ್ತಿದ್ದ ಅವರು, ಕನ್ನಡ ನಾಡು ನುಡಿಗೆ ಗೊ.ರು.ಪ. ಹಾಗೂ ಗೊ.ರು.ಚ. ಕುಟುಂಬದ ಕೊಡುಗೆ ದೊಡ್ಡದು, ರಾಗಗಳಿಂದ ರೋಗ ನಿವಾರಣೆ ಸಾಧ್ಯವೆಂದರಿತೆ, ಸದಾ ಸಮಾಜದ ಹಿತ ಬಯಸುವ ಈ ಕುಟುಂಬ, ವಿದ್ಯಾರ್ಥಿಗಳಿಗೆ ಈ ಸುಗಮ ಸಂಗೀತ ಸ್ಪರ್ಧೆ ಏರ್ಪಡಿಸಿ, ಆ ಮೂಲಕ ಸಮಷ್ಟಿಗೆ ಆರೋಗ್ಯದೊಂದಿಗೆ ಆನಂದವನ್ನೂ ಪ್ರಸಾದಿಸುವ ಜೊತೆಗೆ, ಸಮುದಾಯಕ್ಕೆ ಸಂಸ್ಕಾರವನ್ನೂ ದೊರಕಿಸಿ ಕೊಡುವ ಶ್ಲಾಘನೀಯ ಕಾರ್ಯ ಮಾಡುತ್ತಿದೆ ಎಂದರು.

ಪ್ರಾಯೋಜಕರಾದ ಡಾ.ಜಿ.ಪಿ. ಚಂದ್ರಧರ ಹಾಗೂ ಜಿ.ಪಿ. ಸತೀಶ್ ಕುಟುಂಬದವರು ಉಪಸ್ಥಿತರಿದ್ದರು. ರೋಟರಿ ಮೈಸೂರು ಉತ್ತರ ಅಧ್ಯಕ್ಷ ರೊ.ಎಂ.ಚಂದ್ರ ಶೇಖರ್ ಅಧ್ಯಕ್ಷತೆ ವಹಿಸಿದ್ದರು. ಇನ್ನರ್ ವ್ಹೀಲ್ ಮೈಸೂರು ಉತ್ತರ ಅಧ್ಯಕ್ಷರಾದ ಶಾಂತಾ ಕೃಷ್ಣ, ಕಾರ್ಯದರ್ಶಿ ಪದ್ಮಾ ನಿರಂಜನ್, ಕಾರ್ಯದರ್ಶಿ ರೊ. ಎ.ಪಿ.ವಿರೂಪಾಕ್ಷ, ರೊ.ಶಾರದಾ ಶಿವಲಿಂಗಸ್ವಾಮಿ, ರೊ.ವಿಜಯ ಚಿನ್ನಸ್ವಾಮಿ, ರೊ.ಆಶಾ ರಾಮಾರಾಧ್ಯ, ಪದ್ಮಾಂಭ, ರೊ.ಎಲ್. ಚನ್ನಬಸವರಾಜು, ರಂಗಕರ್ಮಿ ರೊ.ರಾಜಶೇಖರ ಕದಂಬ ಮುಂತಾದವರು ಉಪಸ್ಥಿತರಿದ್ದರು. ವಿಜೇತ ಕಾಲೇಜುಗಳ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಹಿರಿಯ ಗಾಯಕರಾದ ಕೃಷ್ಣಮೂರ್ತಿ ಹಾಗೂ ಹಿರಿಯ ಗಾಯಕಿ ಶೈಲಜಾ ಅವರನ್ನು ಸನ್ಮಾನಿಸಲಾಯಿತು.


ರಸ್ತೆ ಅಗಲೀಕರಣ ಕಾಮಗಾರಿಗೆ ಮರ ತೆರವು: ಸಾರ್ವಜನಿಕ ಆಕ್ಷೇಪಣೆ ಆಹ್ವಾನ

ಮೈಸೂರು,ಡಿ.7–ನಂಜನಗೂಡು ವಲಯ ವ್ಯಾಪ್ತಿಗೆ ಬರುವ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ: 766ರ ಕಿ.ಮೀ 180.680ರಿಂದ 181.520 ರವರೆಗಿನ ನಂಜನಗೂಡು ತಾಲೂಕು ಕಸಬಾ ಹೋಬಳಿ ಮುದ್ದನಹಳ್ಳಿ ಹತ್ತಿರ ರಸ್ತೆ ಅಗಲೀಕರಣ ಕಾಮಗಾರಿಗೆ ಅಡಚಣೆಯಾಗಿರುವ ಮರಗಳನ್ನು ತೆರವುಗೊಳಿಸಲು ಅರಣ್ಯ ಇಲಾಖೆ ಅಧಿಕಾರಿ, ಸಿಬ್ಬಂದಿ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಜಂಟಿ ಮಹಜರ್ ಕ್ರಮ ಜರುಗಿಸಿದ್ದು. ಅದರಂತೆ ಮುದ್ದನಹಳ್ಳಿ ಗ್ರಾಮದ ಹತ್ತಿರ ಬರುವ ರಸ್ತೆಯ ಎಡಬದಿ 44 ಹಾಗೂ ರಸ್ತೆಯ ಬಲಬದಿಯ 54 ಒಟ್ಟು 98 ವಿವಿಧ ಜಾತಿಯ ಮರಗಳ ಅಳತೆ ಪಟ್ಟಿಯನ್ನು ತಯಾರಿಸಲಾಗಿದೆ.

ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ ಪ್ರಕರಣ 8(3)(7)ರಡಿ 50 ಕ್ಕಿಂತ ಹೆಚ್ಚು ಮರಗಳನ್ನು ಕಡಿಯಬೇಕಾದಲ್ಲಿ ಸಾರ್ವಜನಿಕ ಅಹವಾಲನ್ನು ಸ್ವೀಕರಿಸಿ ಕ್ರಮ ಕೈಗೊಳ್ಳಬೇಕಾಗಿರುವುದರಿಂದ ಡಿ.10ರಂದು ಮಧ್ಯಾಹ್ನ 11.30 ಗಂಟೆಗೆ ಸಿಂಧುವಳ್ಳಿಪುರ ಗ್ರಾಮದ ನಂಜನಗೂಡು–ಊಟಿ ರಸ್ತೆಯ ಸಂತಾನ ಗಣಪತಿ ದೇವಸ್ಥಾನದ ಪಕ್ಕದಲ್ಲಿ ಸಾರ್ವಜನಿಕ ಅಹವಾಲು ಸಭೆ ಕರೆಯಲಾಗಿದೆ. ಈ ಬಗ್ಗೆ ಸಾರ್ವಜನಿಕರಿಂದ ಆಕ್ಷೇಪಣೆಗಳಿದ್ದಲ್ಲಿ ಖುದ್ದಾಗಿ ಸಭೆಯಲ್ಲಿ ಹಾಜರಾಗಿ ಸಲ್ಲಿಸಬಹುದು ಅಥವಾ ಸದರಿ ದಿನಾಂಕದ ಒಳಗಾಗಿ ವೃಕ್ಷಾಧಿಕಾರಿ ಹಾಗೂ ವಲಯ ಅರಣ್ಯಾಧಿಕಾರಿ ನಂಜನಗೂಡು ಪ್ರಾದೇಶಿಕ ವಲಯ, ಹುಲ್ಲಹಳ್ಳಿ ಸರ್ಕಲ್ ಹತ್ತಿರ, ನಂಜನಗೂಡು ಇವರಿಗೆ ಲಿಖಿತ ರೂಪದಲ್ಲಿ ಆಕ್ಷೇಪಣೆಯನ್ನು ಸಲ್ಲಿಸಬಹುದು ಹಾಗೂ ಇ–ಮೇಲ್/ಅಂಚೆ: nanjangudrange@gmail.com ಮೂಲಕ ನಿಗದಿತ ಸಮಯ ಹಾಗೂ ದಿನಾಂಕದೊಳಗೆ ಆಕ್ಷೇಪಣೆ ಸಲ್ಲಿಸಬಹುದಾಗಿದೆ ಎಂದು ವಲಯ ಅರಣ್ಯಾಧಿಕಾರಿ ನಿತಿನ್‌ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೋಲ್ಕತ್ತಾದ ಮೈಸೂರು ಉದ್ಯಾನವನದ ಬಳಿ 10ನೇ ಚಾಮರಾಜ ಒಡೆಯರ್ ಕುರಿತ ಮಾಹಿತಿ ಫಲಕ ಅಳವಡಿಸಿ

● ಬಿಜೆಪಿ ಓಬಿಸಿ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಆಗ್ರಹ ● ಕೋಲ್ಕತ್ತಾ ಮುನ್ಸಿಪಲ್ ಕಾರ್ಪೋರೇಷನ್ ಆಯುಕ್ತರಿಗೆ ಪತ್ರ



ರಘು ಕೌಟಿಲ್ಯ

ಮೈಸೂರು, ಡಿ.7(ಬಿಎಲ್‌ಯು)– ಪಶ್ಚಿಮ ಬಂಗಾಳ ರಾಜಧಾನಿ ಕೋಲ್ಕತ್ತಾದ ಮೈಸೂರು ಉದ್ಯಾನವನದ ಬಳಿ 10ನೇ ಚಾಮರಾಜೇಂದ್ರ ಒಡೆಯರ್ ಅವರ ಕುರಿತಂತೆ ಮಾಹಿತಿ ಫಲಕ ಅಳವಡಿಸುವಂತೆ ಬಿಜೆಪಿ ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ಆರ್. ರಘು ಕೌಟಿಲ್ಯ ಅವರು ಆಗ್ರಹಿಸಿದ್ದಾರೆ.

ಈ ಸಂಬಂಧ ಅವರು ತಮ್ಮ 'ಕಾಯಕ ಪ್ರತಿಷ್ಠಾನ'ದ ವತಿಯಿಂದ ಕೋಲ್ಕತ್ತಾದ ಮುನ್ಸಿಪಲ್ ಕಾರ್ಪೋರೇಷನ್ ಆಯುಕ್ತರಿಗೆ ಪತ್ರ ಬರೆದಿದ್ದಾರೆ.

ಅಂದು ಕೋಲ್ಕತ್ತಾ ಬ್ರಿಟಿಷರ ರಾಜಧಾನಿಯಾಗಿತ್ತು. ಬ್ರಿಟಿಷ್ ಗೌವರ್ನರ್ ಜನರಲ್ ಅವರನ್ನು ಭೇಟಿ ಮಾಡಲು 10ನೇ ಚಾಮರಾಜೇಂದ್ರ ಒಡೆಯರ್ ಅವರ ಕೋಲ್ಕತ್ತಾಗೆ ತೆರಳಿದ್ದರು. ಆದರೆ ಕೋಲ್ಕತ್ತಾದಲ್ಲಿ ಅವರು ಅನಾರೋಗ್ಯಕ್ಕೆ ಒಳಗಾಗಿ 1894, ಡಿಸೆಂಬರ್ 28 ರಂದು ನಿಧನರಾದರು. ಕೋಲ್ಕತ್ತಾದ ಸಹನಗರದ ಟೋಲಿಗುಂಜ್ ಕಿರೋತಲ ಘಾಟ್‌ನಲ್ಲಿ ಚಾಮರಾಜೇಂದ್ರ ಒಡೆಯರ್ ಅವರ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು. ಈ ಜಾಗವನ್ನು ಇಂದಿಗೂ ಮೈಸೂರು ಉದ್ಯಾನವನ ಎಂದು ಕರೆಯಲಾಗುತ್ತದೆ.





ಪಶ್ಚಿಮ ಬಂಗಾಳದ ರಾಜಧಾನಿ ಕೋಲ್ಕತ್ತಾದಲ್ಲಿರುವ ಮೈಸೂರು ಉದ್ಯಾನವನ (ಎಡಚಿತ್ರ). ಮೈಸೂರು ಮಹಾರಾಜ 10 ಚಾಮರಾಜೇಂದ್ರ ಒಡೆಯರ್ ಅವರನ್ನು ಬಲಚಿತ್ರದಲ್ಲಿ ಕಾಣಬಹುದು.

ಮೈಸೂರಿನವರು ಕೋಲ್ಕತ್ತಾಗೆ ಭೇಟಿ ನೀಡಿದ ಸಂದರ್ಭದಲ್ಲಿ ಚಾಮ ರಾಜೇಂದ್ರ ಒಡೆಯರ್ ಅವರ ಸಮಾಧಿ ಸ್ಥಳ ಮೈಸೂರು ಉದ್ಯಾನವನಕ್ಕೆ ಭೇಟಿ ನೀಡುತ್ತಾರೆ. ಆದರೆ ಸಮಾಧಿ ಸ್ಥಳದ ಮಹತ್ವ ಸೇರಿದಂತೆ ಇತರೆ ಮಾಹಿತಿಗಳು ಅಲ್ಲಿ ಅಲಭ್ಯ. ಕನಿಷ್ಟ ಪಕ್ಷ ಅಲ್ಲಿ ಸೂಚನಾ ಫಲಕ ಕೂಡ ಅಳವಡಿಸಿಲ್ಲ.

ಈ ಹಿನ್ನೆಲೆಯಲ್ಲಿ ಮೈಸೂರು ಉದ್ಯಾನದಲ್ಲಿ ಚಾಮರಾಜೇಂದ್ರ ಒಡೆಯರ್ ಕುರಿತಂತೆ ಸಮಗ್ರ ಮಾಹಿತಿ ನೀಡುವ ಫಲಕದ ಅವಶ್ಯವಿದೆ. ಕನ್ನಡ, ಇಂಗ್ಲಿಷ್, ಹಿಂದಿ ಹಾಗೂ ಬಂಗಾಳಿ ಭಾಷೆಯಲ್ಲಿ ಮಾಹಿತಿ ನೀಡುವ ತುರ್ತು ಇದೆ. ಮಾಹಿತಿ ಫಲಕ ಅಳವಡಿಸಲು ನಮ್ಮ ಟ್ರಸ್ಟ್ ಉತ್ಸುಕವಾಗಿದೆ.

ಈ ಕಾರ್ಯವನ್ನು ಸ್ಥಳೀಯ ಆಡಳಿತ ಮಾಡಿದರೂ ಸಂತೋಷ. ಇಲ್ಲವೆಂದರೆ ನಾವೇ ಆ ಕಾರ್ಯ ಕೈಗೆತ್ತಿಕೊಳ್ಳುತ್ತೇವೆ. ಇದಕ್ಕಾಗಿ ಮುನ್ಸಿಪಲ್ ಕಾರ್ಪೋರೇಷನ್ ಅನುಮತಿ ನೀಡಬೇಕೆಂದು ರಘು ಕೌಟಿಲ್ಯ ಅವರು ಕೋಲ್ಕತ್ತಾ ಮುನ್ಸಿಪಲ್ ಆಯುಕ್ತರಲ್ಲಿ ಮನವಿ ಮಾಡಿದ್ದಾರೆ.

ಮೈಸೂರು ರಾಜಮನೆತನದ 10 ನೇ ಚಾಮರಾಜೇಂದ್ರ ಒಡೆಯರ್ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಳ್ವಿಕೆ ಭಾರತೀಯ ಇತಿಹಾಸದಲ್ಲಿ ಸುವರ್ಣಾಕ್ಷರದಲ್ಲಿ ಬರೆದ ಯುಗವಾಗಿತ್ತು. ಆ ವೇಳೆ ಆಧುನಿಕ ಮೈಸೂರು ಸಂಸ್ಥಾನ ಭಾರತದ ಅತ್ಯಂತ ಪ್ರಗತಿಪರ ರಾಜ್ಯಗಳಲ್ಲಿ ಒಂದಾಗಿತ್ತು. 10ನೇ ಚಾಮರಾಜೇಂದ್ರ ಒಡೆಯರ್ ಅವರು ದಾರ್ಶನಿಕ ಆಡಳಿತಗಾರರಾಗಿದ್ದರು. ಆಧುನಿಕ ಮೈಸೂರು ನಿರ್ಮಾಣದಲ್ಲಿ ಬಹಳಷ್ಟು ಕೊಡುಗೆ ನೀಡಿರುವ ಒಡೆಯರ್ ಅವರ 1881ರಲ್ಲಿ ಮೈಸೂರು ಪ್ರತಿನಿಧಿ ಸಭೆ ನಡೆಸಿ, ಪ್ರಜಾ ಪ್ರಭುತ್ವಕ್ಕೆ ಅಡಿಗಲ್ಲು ಹಾಕಿ ದರು. 1893ರಲ್ಲಿ ಸ್ವಾಮಿ ಅಮೇರಿಕಾದ ಚಿಕಾಗೋದಲ್ಲಿ ನಡೆಯುತ್ತಿದ್ದ ಧರ್ಮ ಸಮ್ಮೇಳನದಲ್ಲಿ ಪಾಲ್ಗೊಳ್ಳಲು ವಿವೇಕಾ ನಂದರಿಗೆ ಆರ್ಥಿಕ ನೆರವು ನೀಡಿದ್ದರು ಎಂಬುದನ್ನು ರಘು ಕೌಟಿಲ್ಯ ತಮ್ಮ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ದೇಶದಲ್ಲಿ ಕೋಟಿಗೂ ಅಧಿಕ ಮಂದಿ ರೇಷ್ಮೆ ಕೃಷಿ ಅವಲಂಬನೆ

ಮೆಟ್ಟುಪಾಳ್ಯಂನ ಕೃಷಿ ಸಂಶೋಧನಾ ಮಂಡಳಿ ಡೀನ್ ನಿಹಾರ್ ರಂಜನ್ ಮಾಹಿತಿ



ಮೈಸೂರು ಕೇಂದ್ರ ರೇಷ್ಮೆ ಸಂಶೋಧನೆ–ತರಬೇತಿ ಸಂಸ್ಥೆಯಲ್ಲಿ 'ರೇಷ್ಮೆ ವಿಸ್ತರಣೆ: ತತ್ವಗಳು–ಅಭ್ಯಾಸಗಳು' ಕಾರ್ಯಾಗಾರ ನಡೆಯಿತು.

ಮೈಸೂರು, ಡಿ.7(ಎಂಕೆ)– ರೇಷ್ಮೆ ಕೃಷಿ ದೇಶದೆಲ್ಲೆಡೆ ವಿಸ್ತರಣೆಯಾಗುತ್ತಿದ್ದು, ಒಂದು ಕೋಟಿಗೂ ಅಧಿಕ ಜನರು ಪ್ರತ್ಯೇಕ ಹಾಗೂ ಪರೋಕ್ಷವಾಗಿ ರೇಷ್ಮೆ ಕೃಷಿಯನ್ನು ಅವಲಂಬಿಸಿದ್ದಾರೆ ಎಂದು ತಮಿಳುನಾಡಿನ ಕೊಯಮತ್ತೂರು ಜಿಲ್ಲೆಯ ಮೆಟ್ಟುಪಾಳ್ಯಂನಲ್ಲಿರುವ ಭಾರತೀಯ ಕೃಷಿ ಸಂಶೋಧನಾ ಮಂಡಳಿ ಡೀನ್ ನಿಹಾರ್ ರಂಜನ್ ತಿಳಿಸಿದರು.

ಮೈಸೂರಿನಲ್ಲಿರುವ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯಲ್ಲಿ 'ರೇಷ್ಮೆ ವಿಸ್ತರಣೆ : ತತ್ವಗಳು ಮತ್ತು ಅಭ್ಯಾಸಗಳು' ಕುರಿತ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ರೇಷ್ಮೆ ಕೃಷಿಯಿಂದಾಗಿ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚೆಚ್ಚು ಉದ್ಯೋಗಗಳು ಸೃಷ್ಟಿಯಾಗುತ್ತಿವೆ ಎಂದು ಹೇಳಿದರು.

ರೇಷ್ಮೆ ಕೃಷಿಕರಿಗೆ ಆಧುನಿಕ ತಂತ್ರಜ್ಞಾನ ಅಳವಡಿಕೆ ಹಾಗೂ ಕೃತಕ ಬುದ್ದಿ ಮತ್ತೆಯನ್ನು ಬಳಕೆ ಮಾಡಿಕೊಳ್ಳುವ ಕುರಿತು ಮಾಹಿತಿ ನೀಡುವುದು ಅನಿವಾರ್ಯವಾಗಿದೆ. ಆದ್ದರಿಂದ ಈ ನಿಟ್ಟಿನಲ್ಲಿ ರೇಷ್ಮೆ ಕೃಷಿಕರಿಗಾಗಿಯೇ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಬೇಕು. ಸಂಸ್ಥೆಯು ಕೃಷಿಕರನ್ನು ನೇರವಾಗಿ ಸಂಪರ್ಕಿಸುವ ಪ್ರಯತ್ನ ಮಾಡಬೇಕು ಎಂದರು.

ಮೈಸೂರಿನಲ್ಲಿರುವ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ ನಿರ್ದೇಶಕಿ ಡಾ.ಪಿ.ದೀಪ ಮಾತನಾಡಿ, ರೇಷ್ಮೆ ಕೃಷಿ ವಿಸ್ತರಣೆಗೆ ನಿರಂತರವಾಗಿ ಸಮೂಹ ಹಾಗೂ ಕ್ಲಸ್ಟರ್ ಕಾರ್ಯಕ್ರಮ ಸೇರಿದಂತೆ ವಿವಿಧ ರೀತಿಯ ಪ್ರೋತ್ಸಾಹದಾಯಕ ಹಾಗೂ ವಿಸ್ತರಣಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಆಧುನಿಕ ತಂತ್ರಜ್ಞಾನದ ಬಗೆಗಿನ ಮಾಹಿತಿಯನ್ನು ರೈತರಿಗೆ ತಲುಪಿಸುತ್ತಿದ್ದೇವೆ ಎಂದರು.

ಬಳಿಕ ಸಂಪನ್ಮೂಲ ವ್ಯಕ್ತಿಗಳಾದ ಹೈದರಾಬಾದ್‌ನ ಡಾ.ಮಹಾಂತೇಶ್, ಬೆಂಗಳೂರು ಜಿಕೆವಿಕೆಯ ಡಾ.ಗೋವಿಂದ ಗೌಡ, ತಮಿಳುನಾಡು ಕೃಷಿ ವಿಶ್ವವಿದ್ಯಾಲಯ ಡಾ.ಆನಂದ ರಾಜ್, ಶಿವಮೊಗ್ಗದ ಡಾ.ಹೆಚ್.ಎಂ. ವಿನಯ್‌ಕುಮಾರ್ ಹಾಗೂ ಮೈಸೂರಿನ ಡಾ.ರಾಮಾನುಜಾ ರೇಷ್ಮೆ ವಿಸ್ತರಣೆ: ತತ್ವಗಳು ಮತ್ತು ಅಭ್ಯಾಸ ಗಳು' ಕುರಿತು ಉಪನ್ಯಾಸ ನೀಡಿದರು. ಸಂಸ್ಥೆಯ ಡಾ.ಡಿ. ಜಾಯಿರಾಣಿ, ಜೆ.ಜೆಸ್ಟಿನ್ ಕುಮಾರ್ ಸೇರಿದಂತೆ ವಿವಿಧ ರೇಷ್ಮೆ ಸಂಶೋಧನಾ ಸಂಸ್ಥೆಗಳ 150ಕ್ಕೂ ಹೆಚ್ಚು ವಿಜ್ಞಾನಿಗಳು ಭಾಗವಹಿಸಿದ್ದರು.

ರಾಗಭಾವದಲ್ಲಿ ಗಮಕಗಳು ಮುಖ್ಯವಾದವು



ಮೈಸೂರು, ಡಿ. 7– ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್‌ನಿಂದ ಜರುಗುತ್ತಿರುವ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಸಂಸ್ಮರಣ 30ನೆಯ ಸಂಗೀತ ಸಮ್ಮೇಳನದ ಅಂಗವಾಗಿ ರಾಗಭಾವದಲ್ಲಿ ಗಮಕಗಳ ವ್ಯಾಖ್ಯಾನ, ಅವುಗಳ ಉಲ್ಲೇಖ, ಇತಿಹಾಸ, ವಿವಿಧ ಪ್ರಕಾರಗಳು ಹಾಗೂ ಗಮಕಗಳ ಪಾತ್ರ, ಮಹತ್ವ ಮತ್ತು ಅವಶ್ಯಕತೆಯನ್ನು ತುಂಬ ಸ್ಪಷ್ಟವಾಗಿ ಮತ್ತು ಸಮಗ್ರವಾಗಿ ವಿವರಿಸಿದರು. ಗಮಕದ ಹಾಗೂ ಉಪಗಮಕದ ಪ್ರಕಾರವನ್ನು ವಿವಿಧ ರಾಗಗಳಲ್ಲಿ ಮನೋಹರ ಉದಾಹರಣೆಗಳೊಂದಿಗೆ ವಿದುಷಿ ಹಿರಣ್ಮಯಿ ಹಾಡಿ ತೋರಿಸಿದರು.

ಭರತ ಮುನಿಯ ನಾಟ್ಯಶಾಸ್ತ್ರದಲ್ಲಿನ ಅಲಂಕಾರಗಳು, ಮಾತಂಗ ಮುನಿಯ ಬೃಹದ್ದೇಶಿ, ನಾರದ ಮುನಿಯ ಸಂಗೀತ ಮಕರಂದ, ಪಾರ್ಶ್ವದೇವರ ಸಂಗೀತ ಸಮಯಸಾರ, ಶಾರಂಗದೇವರ ಸಂಗೀತ ರತ್ನಾಕರ, ಹಾಗೂ ವೇಂಕಟಮಖಿನ್ ಮತ್ತು ಸುಬ್ಬರಾಮ ದೀಕ್ಷಿತರ ಗ್ರಂಥಗಳಲ್ಲಿ ವಿವರಿಸಲಾದ ಗಮಕಗಳ, ಪಂಚದಶ ಗಮಕಗಳ ಮತ್ತು ದಶವಿಧ ಗಮಕಗಳ ಕುರಿತು ಸ್ಪಷ್ಟವಾದ ಉಲ್ಲೇಖಗಳನ್ನು ನೀಡಿದರು.

ಗಮಕಗಳ ವ್ಯಾಖ್ಯಾನ, ಅವುಗಳ ಉಲ್ಲೇಖ, ಇತಿಹಾಸ, ವಿವಿಧ ಪ್ರಕಾರಗಳು ಹಾಗೂ ಗಮಕಗಳ ಪಾತ್ರ, ಮಹತ್ವ ಮತ್ತು ಅವಶ್ಯಕತೆಯನ್ನು ತುಂಬಾ ಸ್ಪಷ್ಟವಾಗಿ ಮತ್ತು ಸಮಗ್ರವಾಗಿ ವಿವರಿಸಿದರು. ಹಿರಣ್ಮಯೀ ಅವರು ಪ್ರತಿಯೊಂದು ಗಮಕದ ಹಾಗೂ ಉಪಗಮಕದ ಪ್ರಕಾರವನ್ನು ವಿವಿಧ ರಾಗಗಳಲ್ಲಿ ಮನೋಹರ ಉದಾಹರಣೆಗಳೊಂದಿಗೆ ಹಾಡಿ ಪ್ರದರ್ಶಿಸಿದರು. ವಿಸ್ತಾರವಾಗಿ ಚರ್ಚಿಸದ ವಿಷಯವನ್ನೂ ಹೇಗೆ ಸುಂದರವಾದ ಮತ್ತು ಸೂಕ್ತವಾದ ಉದಾಹರಣೆಗಳ ಮೂಲಕ ಸಮಗ್ರವಾಗಿ ವಿವರಿಸಬಹುದು ಎಂಬುದನ್ನು ಅವರು ಸ್ಪಷ್ಟವಾಗಿ ತೋರಿಸಿದರು. ಹಾಗೆಯೇ ಗಮಕಗಳ ವಿಶಾಲತೆಯನ್ನೂ, ಅವುಗಳ ವ್ಯಾಪ್ತಿ ಮತ್ತು ನಮ್ಮ ಕರ್ನಾಟಕ ಶಾಸ್ತ್ರೀಯ ಸಂಗೀತದ ಮೇಲೆ ಅವುಗಳ ಪ್ರಭಾವವನ್ನೂ ಪ್ರೇಕ್ಷಕರಿಗೆ ತಿಳಿಸಿದರು.

ದೇಶದ ಸಂವಿಧಾನದ ಮೂಲ ಆಶಯಕ್ಕೆ ಕುತ್ತು ಬಂದಿದೆ

● ಸಾಮಾಜಿಕ ಹೋರಾಟಗಾರರಾದ ಸವಿತಾ ಪ.ಮಲ್ಲೇಶ್ ಆತಂಕ ● ಸಂವಿಧಾನ ರಕ್ಷಣೆ ಮರೆತು ಮೈಮರೆತ್ತಿದ್ದೇವೆ

ಮೈಸೂರು, ಡಿ.7(ವಿವಿಹೆಚ್)– ದೇಶದಲ್ಲಿ ಸಮಸಮಾಜ ನಿರ್ಮಾಣ ಮಾಡಲು ಶ್ರಮಿಸಿದ, ಎಲ್ಲರಿಗೂ ಸಮಾನ ನ್ಯಾಯ ಒದಗಿಸಲು ದುಡಿದ ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಅವರು ಕೊಟ್ಟ ಭಾರತ ಸಂವಿಧಾನ ಮೂಲ ಆಶಯಗಳಿಗೆ ಇಂದು ಕುತ್ತು ಬಂದಿದೆ ಎಂದು ಚಿಂತಕರು, ಹೋರಾಟಗಾರರಾದ ಸವಿತಾ ಪ.ಮಲ್ಲೇಶ್ ಆತಂಕ ವ್ಯಕ್ತಪಡಿಸಿದರು.

ನಗರದ ಮಾನಸ ಗಂಗೋತ್ರಿಯ ಓಪನ್ ಸ್ಟೇಜ್ ಆವರಣದಲ್ಲಿ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾ ಬಳಗದ ವತಿಯಿಂದ ಆಯೋಜಿಸಿದ್ದ ಮಾನಸಾಗಮನ–2025 ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಣ, ಉದ್ಯೋಗ, ರಾಜಕೀಯ, ಲಿಂಗ ಸಮಾನತೆ ಸೇರಿದಂತೆ ಎಲ್ಲಾ ಸಮಾನ ಹಕ್ಕುಗಳನ್ನು ಈ ದೇಶದ ಮೂಲ ನಿವಾಸಿಗಳು ಪಡೆಯಲು ಅಂಬೇಡ್ಕರ್ ಅವರ ಸಂವಿಧಾನ ಬರಬೇಕಾಯಿತು. ಮಹಿಳೆಯರನ್ನು ತುಚ್ಛವಾಗಿ ಕಾಣುತ್ತಿದ್ದ ಸಮಾಜದಲ್ಲಿ ಎಲ್ಲಾ ರಂಗದಲ್ಲೂ ಅವರಿಗೆ ಸಮಾನ ಅವಕಾಶ ಕೊಡುವ ಕೆಲಸ ಮಾಡಿದ್ದು ಅಂಬೇಡ್ಕರ್ ಮಾತ್ರ ಎಂಬುದನ್ನು ಶಿಕ್ಷಣ ಕಲಿಯಲು ಬಂದಿರುವ ಹೆಣ್ಣುಮಕ್ಕಳು ಮರೆಯಬಾರದು ಎಂದರು.

ಸಂವಿಧಾನದಿಂದ ಎಲ್ಲಾ ಹಕ್ಕುಗಳನ್ನು ಪಡೆದ ನಾವುಗಳು ಸಂವಿಧಾನವನ್ನು ಸಂರಕ್ಷಿಸುವುದನ್ನು ಮರೆತು, ಮೈಮರೆತು ಕುಳಿತಿದ್ದೇವೆ. ಕಾರಣ ಇಷ್ಟೇ, ಭಾರತದ ಎಲ್ಲಾ ನಾಗರಿಕರಿಗೂ ಮತದಾನದ ಹಕ್ಕನ್ನು ಕೊಟ್ಟವರು ಬಾಬಾ ಸಾಹೇಬರು.



ಸಂವಿಧಾನ ಪೀಠಿಕೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಪ್ರಪಂಚದ ಭಾಗಶಃ ದೇಶಗಳಲ್ಲಿ ಮಹಿಳೆಯರಿಗೆ ಮತದಾನ ಹಕ್ಕಿರಲಿಲ್ಲ. ಈ ಹಕ್ಕನ್ನು ನಮ್ಮ ದೇಶದ ಹೆಣ್ಣು ಮಕ್ಕಳಿಗೆ ಕೊಟ್ಟವರು ಅಂಬೇಡ್ಕರ್. ಇಂತಹ ಮತದಾನದ ಹಕ್ಕನ್ನು ಎಸ್‌ಐಆರ್ ಹೆಸರಿನಲ್ಲಿ ಹತ್ತಿಕ್ಕುವ ಕೆಲಸ ಮಾಡಲಾಗುತ್ತಿದೆ ಎಂದು ಬೇಸರಿಸಿದರು.

ಅಂಬೇಡ್ಕರ್ ಅವರು ಹೇಳಿರುವಂತೆ ನಮ್ಮೆಲ್ಲಾ ಬಂಧನಗಳಿಗೆ ಶಿಕ್ಷಣದಿಂದಲೇ ಬಿಡುಗಡೆ ಸಾಧ್ಯ. ಎಲ್ಲರಿಗೂ ಬಿಡುಗಡೆ ಸಿಗಬೇಕು ಎಂದಾದರೆ ಶಿಕ್ಷಣ ಪಡೆಯಲೇಬೇಕು. ಸೈದ್ಧಾಂತಿಕ ಹೋರಾಟಗಳ ಮೂಲಕ ಸದೃಢ ದೇಶ ಕಟ್ಟಬೇಕು.

> “ಹೋರಾಟಗಳು ಹುಟ್ಟಬೇಕಾದ ಮೈಸೂರು ವಿವಿಯಲ್ಲಿ ಬೇಡವಾಗಿರುವ ಕೆಟ್ಟ ರಾಜಕೀಯ ನುಸುಳಿದೆ. ಇದರಿಂದ ತೊಂದರೆಗೆ ಒಳಗಾಗುತ್ತಿರುವುದು ವಿದ್ಯಾರ್ಥಿಗಳ ಬದುಕು. ಇದು ಎಚ್ಚೆತ್ತುಕೊಳ್ಳುವ ಸಮಯವಾಗಿದ್ದು, ಶಿಕ್ಷಣದ ಕ್ರಾಂತಿಯ ಮೂಲಕ ಎಲ್ಲವನ್ನು ಹತ್ತಿಕ್ಕಬೇಕಿದೆ.
> –ಸವಿತಾ ಪ.ಮಲ್ಲೇಶ್, ಚಿಂತಕರು.

ದೇಶದ ಭವಿಷ್ಯ, ನಮ್ಮೆಲ್ಲರ ಭವಿಷ್ಯದ ಮೇಲೆ ನಿಂತಿದೆ. ವೈಯಕ್ತಿಕ ದ್ವೇಷ, ರಾಜಕೀಯ ನಮ್ಮಲ್ಲಿನ ಒಗ್ಗಟ್ಟನ್ನು ಒಡೆದು, ಕುತಂತ್ರಗಳ ಕಾರ್ಯಸಾಧನೆಗೆ ದಾರಿ ಮಾಡಿಕೊಡುತ್ತದೆ ಈ ಎಲ್ಲದರ ಬಗ್ಗೆ ಅರಿವು ಹೊಂದಿರಬೇಕು ಎಂದು ಸಲಹೆ ನೀಡಿದರು.

ರಾಜ್ಯದಲ್ಲಿ ಅರಾಜಕತೆ, ಭ್ರಷ್ಟಾಚಾರ ತಾಂಡವವಾಡುತ್ತಿದ್ದು, ರಾಜ್ಯದ ಸ್ಥಿತಿ ಹದಗೆಟ್ಟಿದೆ. ಧರ್ಮಸ್ಥಳದಂತಹ ಜಾಗದಲ್ಲಿ ಅನಾಚಾರವಾಗುತ್ತಿದೆ. 300ಕ್ಕೂ ಅಧಿಕ ಜನರ ಕೊಲೆಯಾಗಿದೆ. ನೂರಾರು ಹೆಣ್ಣುಮಕ್ಕಳ ಆತ್ಮಹತ್ಯೆಯಾಗಿದೆ. ಪೋಕ್ಸೋ ಪ್ರಕರಣದಲ್ಲಿ ಸಿಲುಕಿರುವವರು ರಾಜಾರೋಷವಾಗಿ ತಿರು ಗಾಡುತ್ತಾ ಇದ್ದಾರೆ. ಈ ಎಲ್ಲದರ ವಿರುದ್ಧ ಹೋರಾಡಲೇಬೇಕಾದ ಅನಿವಾರ್ಯತೆ ಬಂದೊದಗಿದೆ ಎಂದರು.

ನಟ, ಸಾಮಾಜಿಕ ಹೋರಾಟಗಾರ ಚೇತನ್ ಅಹಿಂಸಾ ಮಾತನಾಡಿ, ಅಂಬೇಡ್ಕರ್ ಅವರು ನಮಗೆ ಡಿಗ್ರಿಗಳಲ್ಲಿ ಕಾಣುವುದಿಲ್ಲ, ಅವರು ಓದಿದ ಪುಸ್ತಕಗಳಲ್ಲಿ ಕಾಣುವುದಿಲ್ಲ, ಲಕ್ಷಾಂತರ ಪ್ರತಿಮೆಗಳಲ್ಲಿ ಕಾಣುವುದಿಲ್ಲ ಬದಲಾಗಿ, ಅವರು ಪಡೆದ ಉತ್ತಮ ಶಿಕ್ಷಣ ಸಮ ಸಮಾಜ ನಿರ್ಮಾಣಕ್ಕೆ ಮಾಡಿದ ಕೆಲಸಗಳಲ್ಲಿ ಕಾಣಬೇಕಿದೆ ಎಂದರು.

ಸಂವಿಧಾನವನ್ನು ರಕ್ಷಿಸುವ ಮೂಲಕ ಶೋಷಿತರ, ದಮನಿತರ ದನಿಯಾಗಿ ನಿಲ್ಲುವುದನ್ನು ಯುವಕರು ಕಲಿಯಬೇಕು. ಅನ್ಯಾಯದ ವ್ಯವಸ್ಥೆ ವಿರುದ್ಧ ಅಹಿಂಸಾವಾದದ ಪರಿವರ್ತನೆಯ ಪ್ರತಿರೋಧದ ಮೂಲಕ ಹೋರಾಟ ಮಾಡಿ ಜನರಿಗೆ ನ್ಯಾಯ ಕೊಡಿಸಬೇಕಿದೆ ಎಂದರು.

ಮಾಜಿ ಮಹಾಪೌರ ಪುರುಷೋತ್ತಮ್ ಮಾತನಾಡಿದರು. ಗಾಯಕ ನವೀನ್ ಸಜ್ಜು, ಮೈಸೂರು ವಿವಿ ಆಡಳಿತಾಧಿಕಾರಿ ಎಸ್.ಟಿ.ರಾಮಚಂದ್ರಪ್ಪ, ಕರ್ನಾಟಕ ರಾಜ್ಯ ಎಸ್ಸಿ–ಎಸ್ಟಿ ಸಹಕಾರ ಸಂಘದ ರಾಜ್ಯಾಧ್ಯಕ್ಷ ಮಂಜುನಾಥ, ಮೈಸೂರು ವಿವಿ ಸಂಶೋಧಕರ ಸಂಘದ ಮಾಜಿ ಅಧ್ಯಕ್ಷ ಮರಿದೇವಯ್ಯ, ಯುವ ವಿಜ್ಞಾನಿ ನವೀನ್ ಮೌರ್ಯ, ಅತಿಥಿ ಉಪನ್ಯಾಸಕರ ಸಂಘದ ಅಧ್ಯಕ್ಷ ರಮೇಶ್ ಕೊಳ್ಳೂರು, ಬಾರ್ಕೋಲು ಪತ್ರಿಕೆ ಸಂಪಾದಕ ಬಿ.ಆರ್.ರಂಗಸ್ವಾಮಿ, ನಾಲ್ವಡಿ ಕಲಾ ಬಳಗದ ಅಧ್ಯಕ್ಷ ಕೃಷ್ಣಮೂರ್ತಿ ಗಣಿಗನೂರು, ಗೌತಮ್ ಗುಂಡ್ಲುಪೇಟೆ, ಚೇತನ್ ಚಕ್ರವರ್ತಿ, ಪ್ರಗತಿ ಎಂ.ಎಸ್. ಚೋರನಹಳ್ಳಿ ಇತರರು ಉಪಸ್ಥಿತರಿದ್ದರು.

ಕೃಷಿಕರು ಮಿಶ್ರ ಬೆಳೆಗೆ ಆದ್ಯತೆ ನೀಡಬೇಕು

ಧಾರವಾಡ ಕೃಷಿ ವಿವಿ ಕುಲಪತಿ ಡಾ.ಪಿ.ಎಲ್.ಪಾಟೀಲ್



ಕಾರ್ಯಕ್ರಮದಲ್ಲಿ ಗಣ್ಯರು ಕೃಷಿ ಕುರಿತ ಮಾಹಿತಿಯುಳ್ಳ ಹಸ್ತಪ್ರತಿ ಬಿಡುಗಡೆಗೊಳಿಸಿದರು.

ಮಂಡ್ಯ, ಡಿ.7– ಒಂದೇ ತರ ಬೆಳೆ ಬೆಳೆಯುವ ಬದಲು ಏಕದಳ, ದ್ವಿದಳ ಬೆಳೆ ಬೆಳೆಯುವುದು ಸೂಕ್ತ. ಇದರಿಂದ ಮಣ್ಣಿನ ಆರೋಗ್ಯ ಕಾಪಾಡಿಕೊಂಡು ಮುಂದಿನ ಪೀಳಿಗೆಗೆ ವಿಷ ಮುಕ್ತ ಆಹಾರ ಪೂರೈಕೆ ಮಾಡಬಹುದು ಎಂದು ಧಾರವಾಡ ಕೃಷಿ ವಿಶ್ವವಿದ್ಯಾಲಯ ಕುಲ ಪತಿ ಡಾ.ಪಿ.ಎಲ್.ಪಾಟೀಲ್ ತಿಳಿಸಿದರು.

ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಪಶು ಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವೆಗಳು, ಜಲಾನಯನ ಅಭಿವೃದ್ಧಿ ಇಲಾಖೆ, ರೇಷ್ಮೆ, ಅರಣ್ಯ, ಮೀನುಗಾರಿಕೆ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ನಬಾರ್ಡ್ ಇವರುಗಳ ಸಂಯುಕ್ತಾಶ್ರಯದಲ್ಲಿ ಸಮಗ್ರ ಕೃಷಿಯಿಂದ ಸುಸ್ಥಿರತೆ ಎಂಬ ಶೀರ್ಷಿಕೆ ಅಡಿ 3 ದಿನ ವಿ.ಸಿ.ಫಾರಂನಲ್ಲಿ ನಡೆದ ಕೃಷಿ ಮೇಳದ ಸಮಾರೋಪ ಉದ್ಘಾಟಿಸಿ ಮಾತನಾಡಿದರು.

ಮಂಡ್ಯ ವಿಶ್ವವಿದ್ಯಾಲಯದ ಮೊದಲ ಕೃಷಿಮೇಳ ಶೀರ್ಷಿಕೆ ಸಮಗ್ರ ಕೃಷಿಯಿಂದ ಸುಸ್ಥಿರತೆಯಾಗಿದೆ. ರೈತ ಬಾಂಧವರು ಸುಸ್ಥಿರ ಕೃಷಿಗೆ ಮುಂದಾಗಬೇಕು. ನಿಸರ್ಗದತ್ತವಾಗಿ ದೊರೆಯುವ ಮಣ್ಣು ಮತ್ತು ನೀರಿನ ಸಂಸ್ಕರಣೆ ಮಾಡುವುದು ಮುಖ್ಯ. ಮಂಡ್ಯ ಜಿಲ್ಲೆ ಶೇ.70ಕ್ಕೂ ಹೆಚ್ಚು ಭೂಮಿ ಹಸಿರುಮಯವಾಗಿದೆ. ಇದಕ್ಕೆ ಕಾವೇರಿ ಮಾತೆಗೆ ನೀವು ಚಿರಋಣಿಯಾಗಿರಬೇಕು ಎಂದರು.

> ಕೃಷಿ ಮೇಳದಲ್ಲಿ ಭಾಗಿಯಾಗಿ ರೈತರು ಕೃಷಿ ಕುರಿತಾಗಿ ಮಾಹಿತಿ ಪಡೆಯಬೇಕು. ದೇಶದಲ್ಲಿ ಕೃಷಿ ಭೂಮಿ ಸವಿಸ್ತಾರವಾಗಿದೆ. ರೈತರು ಹಳೆ ಹಾಗೂ ಸಾಂಪ್ರದಾಯಿಕ ಕೃಷಿ ಪದ್ಧತಿ ಬಿಟ್ಟು ಸಾವಯವ ಕೃಷಿ ಪದ್ಧತಿ ಅಳವಡಿಸಿಕೊಳ್ಳಬೇಕು. ಆಧುನಿಕ ತಂತ್ರಜ್ಞಾನದ ಬಳಕೆಯಿಂದ ಹೆಚ್ಚು ಲಾಭ ಪಡೆಯಬಹುದು. ನೀರು ಮತ್ತು ಮಣ್ಣಿನ ಪೋಷಣೆ ಮಾಡುವುದು ಪ್ರತಿಯೊಬ್ಬ ರೈತನ ಜವಾಬ್ದಾರಿ.
>
> – ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ.

ಭೂಮಿಗೆ ಹರಿದು ಬರುವ ನೀರನ್ನು ಸಂಸ್ಕರಣೆ ಮಾಡಿ ಮಿತವಾಗಿ ಬಳಕೆ ಮಾಡಿ. ಭೂಮಿ ಸವಕಳಿ ತಪ್ಪಿಸಿ. ಸಾವಯವ ಕೃಷಿ ಪದ್ಧತಿ ಮೂಲಕ ಉತ್ತಮ ಭತ್ತದ ಇಳುವರಿ ಪಡೆಯಬಹುದು. ಕಬ್ಬಿನ ಬೆಳೆಗೆ ಸಾಲು ಸಾಲು ಬಿಟ್ಟು ನೀರು ಹಾಯಿಸಿ. ತೋಟಗಾರಿಕೆ ಬೆಳೆ ಜೊತೆ ಕುರಿ, ಕೋಳಿ ಸಾಕಾಣಿಕೆ ಜೊತೆಗೆ ಪಶುಪಾಲನೆ ಮಾಡುವುದು ಸೂಕ್ತ ಎಂದು ಸಲಹೆ ನೀಡಿದರು.

ಬೆಂಗಳೂರು ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ.ನಿಶ್ಚಲಾನಂದನಾಥ ಸ್ವಾಮೀಜಿ ಮಾತನಾಡಿ, ಕೃಷಿಕರೇ ಹೆಚ್ಚಾಗಿರುವ ಸಂಶೋಧನ ಕೇಂದ್ರಕ್ಕೆ ವಿವಿ ನೀಡಿ 5 ಜಿಲ್ಲೆಗೆ ಅನುಕೂಲ ಮಾಡಿಕೊಟ್ಟಿರುವ ಸರ್ಕಾರದ ಕೆಲಸ ಉತ್ತಮವಾದದ್ದು. ಜಿಲ್ಲೆಯ ರೈತರು ಕೃಷಿಯಲ್ಲಿ ತೊಡಗಿದ್ದರೂ ಸಹ ಇಳುವರಿ ಕಡಿಮೆ. ಆದ್ದರಿಂದ ಪ್ರಗತಿಪರ ರೈತರ ಸಂಖ್ಯೆ ಹೆಚ್ಚಾಗಲು ಕೃಷಿ ಸಂಶೋಧಕರು ರೈತರೊಂದಿಗೆ ಸಂಪರ್ಕ ಇಟ್ಟುಕೊಂಡು ಅವರಿಗೆ ತಂತ್ರಜ್ಞಾನದ ಅರಿವು ಮೂಡಿಸಬೇಕು ಎಂದು ಸೂಚಿಸಿದರು.

ಕುವೆಂಪು ಅವರ ನೇಗಿಲ ಯೋಗಿ ಹಾಡಿನಂತೆ ಭೂಮಿ ಮತ್ತು ನೀರನ್ನು ಮಾತೆಯಂತೆ ಪೂಜಿಸಬೇಕು. ಕೃಷಿ ಕ್ಷೇತ್ರಕ್ಕೆ ಯುವ ಸಮೂಹ ಹೆಚ್ಚಿನ ಆದ್ಯತೆ ನೀಡಿ ಆಧುನಿಕ ಯಂತ್ರೋಪಕರಣಗಳು ತಂತ್ರಜ್ಞಾನ ಬಳಸಿ ಕೃಷಿ ಮಾಡಿ ಎಂದರು.

ಗಣ್ಯರು ಕೃಷಿ ಕುರಿತು ಮಾಹಿತಿಯುಳ್ಳ ಹಸ್ತಪ್ರತಿಯನ್ನು ಬಿಡುಗಡೆಗೊಳಿಸಿ, ರೈತ ಪ್ರಶಸ್ತಿ ಪ್ರದಾನ ಮಾಡಲಾಯಿತು. ವೇದಿಕೆಯಲ್ಲಿ ಮಂಡ್ಯ ಕೃಷಿ ವಿಜ್ಞಾನಿಗಳ ವಿಶ್ವವಿದ್ಯಾಲಯದ ವಿಶೇಷಾಧಿಕಾರಿ ಡಾ.ಕೆ.ಎಂ.ಹರಿಣಿ ಕುಮಾರ್, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ ನಿರ್ದೇಶಕ ಆರ್.ನೆಹಲ್, ಜಿಪಂ ಸಿಇಓ ಕೆ.ಆರ್ ನಂದಿನಿ, ಉದ್ಯಮಿ, ಚಿತ್ರ ನಿರ್ಮಾಪಕ ಉಮಾಪತಿ ಶ್ರೀನಿವಾಸ ಗೌಡ, ಸಂಶೋಧನಾ ನಿರ್ದೇಶಕ ಡಾ.ಜಿ.ಎಂ. ದೇವಗಿರಿ ಸೇರಿದಂತೆ ಇನ್ನಿತರರಿದ್ದರು.

ಮುಡಾ ಅಧ್ಯಕ್ಷರಾಗಿ ಬಿ.ಪಿ.ಪ್ರಕಾಶ್ ಪದಗ್ರಹಣ

ನಿಷ್ಠೆಯಿಂದ ದುಡಿದವರಿಗೆ ಕಾಂಗ್ರೆಸ್‌ನಲ್ಲಿ ಅಧಿಕಾರ; ಶಾಸಕ ರವಿಕುಮಾರ್



ಮುಡಾ ಅಧ್ಯಕ್ಷರಾಗಿ ಬಿ.ಪಿ.ಪ್ರಕಾಶ್ ಅಧಿಕಾರ ಸ್ವೀಕರಿಸಿದರು.

ಮಂಡ್ಯ, ಡಿ.7– ಕಡೆ ಕಾರ್ಯಕರ್ತರಿಗೂ ಅಧಿಕಾರ ಸಿಗುತ್ತದೆ ಎಂಬುದಕ್ಕೆ ಕಾಂಗ್ರೆಸ್ ಪಕ್ಷವೇ ಸಾಕ್ಷಿಯಾಗಿದ್ದು, ಯಾರೇ ಆಗಲಿ ಪಕ್ಷಕ್ಕೆ ನಿಷ್ಠೆಯಿಂದ ದುಡಿದವರಿಗೆ ಅಧಿಕಾರ ನೀಡಲು ಪಕ್ಷ ಸಿದ್ಧವಾಗಿದೆ ಎಂದು ಶಾಸಕ ಪಿ.ರವಿಕುಮಾರ್ ಗೌಡ ಗಣಿಗ ತಿಳಿಸಿದರು.

ನಗರದ ಮುಡಾ ಕಚೇರಿಯಲ್ಲಿ ನೂತನ ಅಧ್ಯಕ್ಷ ಬಿ.ಪಿ.ಪ್ರಕಾಶ್ ಅಧಿಕಾರ ಸ್ವೀಕಾರ ಸಮಾರಂಭದಲ್ಲಿ ಮಾತನಾಡಿದ ಅವರು, ಇದುವರೆಗೂ ನಮ್ಮ ಸರ್ಕಾರದಲ್ಲಿ ಕ್ಷೇತ್ರದ ಸುಮಾರು 450 ಮಂದಿಗೆ ವಿವಿಧ ಸ್ಥಳೀಯ ಸಂಸ್ಥೆಗಳಲ್ಲಿ ಅಧ್ಯಕ್ಷ, ಸದಸ್ಯರು ಹಾಗೂ ನಾಮನಿರ್ದೇಶಕ ಸ್ಥಾನಗಳನ್ನು ಕಲ್ಪಿಸಲಾಗಿದೆ. ಕಾಂಗ್ರೆಸ್ ಪಕ್ಷದಲ್ಲಿ ಮಾತ್ರ ಸಾಮಾಜಿಕ ನ್ಯಾಯ ಕಾಣಬಹುದಾಗಿದೆ ಎಂದರು.

ಪಕ್ಷದ ಯಾವ ಕಾರ್ಯಕರ್ತರೇ ಆಗಲಿ, ಮನೆಯಲ್ಲಿ ಕೂರದೇ ಪಕ್ಷಕ್ಕಾಗಿ ದುಡಿಯಬೇಕು. ಆಗ ಮಾತ್ರ ನಿಮ್ಮ ಶ್ರಮ ಪಕ್ಷಕ್ಕೆ ತಿಳಿಯಲಿದೆ. ಮನೆಯಲ್ಲಿದ್ದುಕೊಂಡು ಸುಮ್ಮನಿದ್ದರೆ ಯಾವುದೇ ಪ್ರಯೋಜನವಾಗುವುದಿಲ್ಲ. ಪಕ್ಷಕ್ಕಾಗಿ ದುಡಿದವರು ಯಾರೇ ಇದ್ದರೂ ಎದೆ ತಟ್ಟಿಕೊಂಡು ಅಧಿಕಾರ ಕೇಳಬೇಕು. ಆಗ ಮಾತ್ರ ಪಕ್ಷವೂ ಸದೃಢವಾಗಲಿದ್ದು, ಪಕ್ಷದ ಮುಖಂಡರು ಸಹ ನಿಮಗೆ ಅಧಿಕಾರ ಕೊಡಿಸುವಲ್ಲಿ ಮುನ್ನಡೆಯುತ್ತಾರೆ ಎಂದು ತಿಳಿಸಿದರು.

ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಸೇರಿದಂತೆ ಸಚಿವರು ಹಾಗೂ ಶಾಸಕರು ಪಕ್ಷಕ್ಕಾಗಿ ದುಡಿದ ಕಾರ್ಯಕರ್ತರನ್ನು ಎಂದಿಗೂ ಕೈ ಬಿಡುವುದಿಲ್ಲ. ಆ ನಿಟ್ಟಿನಲ್ಲಿ ಕಾಂಗ್ರೆಸ್ ಪಕ್ಷ ಕೆಲಸ ಮಾಡುತ್ತಿದೆ. ಬಿ.ಪಿ.ಪ್ರಕಾಶ್ ಅವರ ಪಕ್ಷ ನಿಷ್ಠೆ ಗುರುತಿಸಿ ಇಂದು ಮುಡಾ ಅಧ್ಯಕ್ಷರನ್ನಾಗಿ ಮಾಡಲಾಗಿದೆ. ಇದೇ ರೀತಿ ಪಕ್ಷಕ್ಕೆ ದುಡಿದ ಕಾರ್ಯಕರ್ತರಿಗೆ ಮುಂದೆ ಉತ್ತಮ ಅವಕಾಶಗಳು ಸಿಗಲಿವೆ ಎಂದರು.

ಅಧಿಕಾರ ಸ್ವೀಕರಿಸಿದ ಮುಡಾ ಅಧ್ಯಕ್ಷ ಬಿ.ಪಿ. ಪ್ರಕಾಶ್ ಮಾತನಾಡಿ, ಪಕ್ಷದ ಎಲ್ಲಾ ನಾಯಕರು, ಸಚಿವರು, ಶಾಸಕರು, ಮುಖಂಡರು, ಕಾರ್ಯಕರ್ತರ ಬೆಂಬಲದೊಂದಿಗೆ ನನಗೆ ಪಕ್ಷ ಮಹತ್ವದ ಜವಾಬ್ದಾರಿ ವಹಿಸಿದ್ದು, ಸಮರ್ಥವಾಗಿ ನಿಭಾಯಿಸುತ್ತೇನೆ. ಮುಡಾದಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಅವುಗಳನ್ನು ಹಂತ ಹಂತವಾಗಿ ಬಗೆಹರಿಸಲು ಪ್ರಯತ್ನಿಸಲಾಗುವುದು ಎಂದರು.

ಶಾಸಕ ಪಿ.ರವಿಕುಮಾರ್‌ಗೌಡ ಗಣಿಗ ಅವರು ಕ್ರಿಯಾಶೀಲವಾಗಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರ ಕೈ ಬಲಪಡಿಸುವ ಮೂಲಕ ಪಕ್ಷ ಸಂಘಟಿಸಲಾಗುವುದು. ಶಾಸಕರ ಎಲ್ಲಾ ಜನಪರ ಕಾರ್ಯಕ್ರಮಗಳಿಗೆ ಸಹಕಾರ ನೀಡುತ್ತಾ, ಅವರ ಜೊತೆಯಲ್ಲಿಯೇ ಮಂಡ್ಯ ನಗರದ ಅಭಿವೃದ್ಧಿಗೆ ಶ್ರಮಿಸಲಾಗುವುದು ಭರವಸೆ ನೀಡಿದರು.

ವೇದಿಕೆ ಸಮಾರಂಭಕ್ಕೂ ಮುನ್ನ ನಗರದ ಜೆ.ಸಿ. ವೃತ್ತದಿಂದ ಮುಡಾ ಕಚೇರಿವರೆಗೂ ಬೃಹತ್ ರ‍್ಯಾಲಿ ನಡೆಸಲಾಯಿತು. ಶಾಸಕ ಪಿ.ರವಿಕುಮಾರ್ ಗೌಡ ಗಣಿಗ ಹಾಗೂ ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್ ಅವರನ್ನು ವಿವಿಧ ಜಾನಪದ ಕಲಾತಂಡಗಳೊಂದಿಗೆ ಮೆರವಣಿಗೆ ನಡೆಸಲಾಯಿತು. ನಂತರ ಮುಡಾ ಕಚೇರಿಯಲ್ಲಿ ವಿಶೇಷ ಪೂಜೆ ಸಲ್ಲಿಸಿ ಅಧಿಕಾರ ಸ್ವೀಕಾರ ಮಾಡಲಾಯಿತು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ರುದ್ರಪ್ಪ, ಮುಡಾ ನಿರ್ದೇಶಕರಾದ ಕಾರ್ತಿಕ್, ಇದ್ರಿಸ್‌ಖಾನ್, ಮಹೇಶ್, ಕಮಲಮ್ಮ, ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮದ ಉಪಾಧ್ಯಕ್ಷೆ ವಿಜಯಲಕ್ಷ್ಮಿ, ಮುಖಂಡರಾದ ಗುರುಪ್ರಸಾದ್, ಎಂ.ಕೃಷ್ಣ ಇತರರಿದ್ದರು.

ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

ಮಂಡ್ಯ, ಡಿ.7– ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿರುವ ಸಂಸ್ಥೆಗಳು ಮತ್ತು ವ್ಯಕ್ತಿಗಳನ್ನೊಳಗೊಂಡಂತೆ ಕಲೆ, ಕ್ರೀಡೆ, ಸಾಹಿತ್ಯ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ಮತ್ತು ಕ್ಲಿಷ್ಟಕರ ಪರಿಸ್ಥಿಯಲ್ಲಿ ಆತ್ಮಸ್ಥೈರ್ಯದಿಂದ ಹೋರಾಡಿದ ವೀರ ಮಹಿಳೆಯರಿಗೆ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಅಗತ್ಯ ದಾಖಲಾತಿಗಳೊಂದಿಗೆ ಜ.5 ರೊಳಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಸಲ್ಲಿಸಲು ಕೋರಲಾಗಿದೆ. ಮಾಹಿತಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಥವಾ ದೂ: 221315 ಸಂಪರ್ಕಿಸಿ.

ಕೆ.ಆರ್.ಪೇಟೆ: ನಿವೃತ್ತ ಶಿಕ್ಷಕರಿಗೆ ಸನ್ಮಾನ, ಬೀಳ್ಕೊಡುಗೆ



ಕೆಆರ್.ಪೇಟೆ, ಡಿ.7– ವಿವಿಧ ಶಾಲೆಗಳಲ್ಲಿ ಸಹ ಶಿಕ್ಷಕ, ಮುಖ್ಯ ಶಿಕ್ಷಕರಾಗಿ ಉತ್ತಮ ಸೇವೆ ಸಲ್ಲಿಸಿ ನಿವೃತ್ತರಾದ ತಾಲೂಕಿನ ಅಗ್ರಹಾರ ಬಾಚಹಳ್ಳಿ ಸರ್ಕಾರಿ ಪ್ರೌಢಶಾಲೆ ಹಿರಿಯ ಶಿಕ್ಷಕ ಕೆ.ಎಸ್.ರಾಜು ಅವರನ್ನು ಎಸ್‌ಡಿಎಂಸಿ ಹಾಗೂ ಶಾಲೆ ವತಿಯಿಂದ ಸನ್ಮಾನಿಸಿ, ಬೀಳ್ಕೊಡಲಾಯಿತು.

ಬೀಳ್ಕೊಡುಗೆ ಸಮಾರಂಭ ಉದ್ಘಾಟಿಸಿ ಮಾತನಾಡಿದ ಪಿಡಿಓ ಶಿಲ್ಪ, ಶಿಕ್ಷಕ ಕೆಎಸ್.ರಾಜು ಅವರು ಕಳೆದ 34 ವರ್ಷಗಳಲ್ಲಿ ವಿವಿಧ ಸರ್ಕಾರಿ ಪ್ರೌಢಶಾಲೆಯಲ್ಲಿ ಉತ್ತಮ, ಕ್ರಿಯಾಶೀಲ ಹಾಗೂ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿದ್ದಾರೆ. ಅಲ್ಲದೇ ನಮ್ಮ ಅಗ್ರಹಾರಬಾಚಹಳ್ಳಿಯಲ್ಲಿ 18 ವರ್ಷಗಳಿಂದ ಉತ್ತಮ ಸೇವೆ ಸಲ್ಲಿಸಿ, ಈ ಭಾಗದ ಸಾವಿರಾರು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿದ್ದಾರೆ. ಅಲ್ಲದೇ ವಿದ್ಯಾರ್ಥಿಗಳಲ್ಲಿ ಓದುವ ಆಸಕ್ತಿ ಮೂಡಿಸುವ ಸಲುವಾಗಿ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಪಡೆಯುವ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಿ ಗೌರವಿಸುತ್ತಾ ಬಂದಿದ್ದಾರೆ. ಅಲ್ಲದೇ ಬಡ ವಿದ್ಯಾರ್ಥಿಗಳಿಗೆ ಲೇಖನ ಸಾಮಗ್ರಿ, ಸ್ಕೂಲ್ ಬ್ಯಾಗ್ ಕೊಡುಗೆ ನೀಡಿದ್ದಾರೆ. ಶಾಲೆ ಅಭಿವೃದ್ಧಿಗೂ ಹೆಚ್ಚಿನ ಒಲವು ಹೊಂದಿದ್ದರು. ರಾಜು ಅವರ ನಿವೃತ್ತ ಜೀವನ ಸುಖಕರವಾಗಿರಲಿ ಎಂದು ಶುಭ ಹಾರೈಸಿದರು.

ಅಧ್ಯಕ್ಷತೆಯನ್ನು ಎಸ್‌ಡಿಎಂಸಿ ಅಧ್ಯಕ್ಷ ಎ.ವಿ.ಕೃಷ್ಣ ವಹಿಸಿದ್ದರು. ಮುಖ್ಯ ಶಿಕ್ಷಕ ಪುಟ್ಟರಾಜು, ನಿವೃತ್ತ ಬಿಇಓ ಎ.ಬಿ. ಪುಟ್ಟಸ್ವಾಮಿಗೌಡ, ಶಿಕ್ಷಣ ಸಂಯೋಜಕ ಎಂ.ಎಸ್.ಸುರೇಶ್, ತಾಲೂಕು ವಕೀಲರ ಸಂಘದ ಅಧ್ಯಕ್ಷ ಕೆ.ಎನ್.ನಾಗೇಗೌಡ, ನಿವೃತ್ತ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಹನುಮಂತೇಗೌಡ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಅನುರಾಧಾ, ಎ.ಹೆಚ್.ಯೋಗೇಶ್, ಗ್ರಾಪಂ ಸದಸ್ಯರಾದ ಶ್ರೀನಿವಾಸ್, ನೇತ್ರಾವತಿ, ಎಸ್‌ಡಿಎಂಸಿ ಉಪಾಧ್ಯಕ್ಷ ಪರಮೇಶ್, ಸದಸ್ಯರಾದ ಆರ್.ಜಗದೀಶ್, ರೂಪೇಶಾಚಾರ್, ರುಕ್ಮಾಂಗದಾಚಾರ್ ಇದ್ದರು.

ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಪಾಂಡವಪುರ, ಡಿ.7– ತಾಲೂಕಿನ ದೊಡ್ಡಬ್ಯಾಡರಹಳ್ಳಿ ಗ್ರಾಪಂ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ 1.31 ಕೋಟಿ ವೆಚ್ಚದ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಭೂಮಿ ಪೂಜೆ ನೆರವೇರಿಸಿದರು.

ಚಿಕ್ಕಬ್ಯಾಡರಹಳ್ಳಿಯಲ್ಲಿ 20 ಲಕ್ಷ, ತಾಳಶಾಸನ ಗ್ರಾಮದಲ್ಲಿ 41.50 ಲಕ್ಷ, ತಿಮ್ಮನಕೊಪ್ಪಲು ಗ್ರಾಮದಲ್ಲಿ 23 ಲಕ್ಷ ಹಾಗೂ ದೊಡ್ಡ ಬ್ಯಾಡರಹಳ್ಳಿ ಗ್ರಾಮದಲ್ಲಿ 47 ಲಕ್ಷ ವೆಚ್ಚದ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಶಾಸಕರು, ಗ್ರಾಮೀಣ ಪ್ರದೇಶದಲ್ಲಿ ರಸ್ತೆ ಹಾಗೂ ಚರಂಡಿ ಸೌಲಭ್ಯ ಒದಗಿಸಿಕೊಡುವ ಉದ್ದೇಶದಿಂದ ಆರ್‌ಡಿಪಿಆರ್ ಇಲಾಖೆ ಅನುದಾನದ 1.31 ಕೋಟಿ ವೆಚ್ಚದಲ್ಲಿ ದೊಡ್ಡಬ್ಯಾಡರಹಳ್ಳಿ ಗ್ರಾಪಂ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ರಸ್ತೆ, ಚರಂಡಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಗಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದು ಭರವಸೆ ನೀಡಿದರು.



ಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಚಾಲನೆ ನೀಡಿದರು.

ಈ ವೇಳೆ ಗ್ರಾಪಂ ಅಧ್ಯಕ್ಷ ರವಿರಾಜ್, ಸದಸ್ಯರಾದ ಎಸ್.ಆನಂದ್, ಕೆ.ಮನು, ಮಂಗಳಮ್ಮ, ಭಾರತಿ, ಶಿವಲಿಂಗೇಗೌಡ, ಇಂಜಿನಿಯರ್‌ಗಳಾದ ಅಭಿಷೇಕ್, ಪ್ರಜ್ವಲ್, ಮುಖಂಡರಾದ ತಿಮ್ಮೇಗೌಡ, ತಮ್ಮೇಗೌಡ, ಬಸವ, ಪ್ರಶಾಂತ್, ಮಹದೇವಪ್ಪ, ಟಿ.ಸಿ.ಮಂಜುನಾಥ್, ಸೋಮು, ಪುಟ್ಟಪ್ಪ ನಂಜುಂಡಪ್ಪ ಸೋಮಣ್ಣ ಸೇರಿದಂತೆ ಗ್ರಾಪಂ ವ್ಯಾಪ್ತಿಯ ಮುಖಂಡರು ಹಾಜರಿದ್ದರು.

ಒಂದನೇ ಪುಟದಿಂದ

ಇಂದಿನಿಂದ ಕಾಮಗಾರಿ ಆರಂಭ

ಅಪಘಾತಗಳು ಸಂಭವಿಸಿತ್ತು. ಈ ಹಿನ್ನೆಲೆ ನಾಲ್ಕು ಪಥದ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಕೈಗೆತ್ತಿಕೊಳ್ಳಲಾಗಿದೆ. ಮಂಡ್ಯದಲ್ಲಿ 2023ರ ಮಾ.2ರಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಈ ಯೋಜನೆಗೆ ಶಿಲಾನ್ಯಾಸ ನೆರವೇರಿಸಿದ್ದರು. 5 ಪ್ಯಾಕೇಜ್‌ನಲ್ಲಿ ಅನುಷ್ಠಾನಗೊಳ್ಳುತ್ತಿರುವ ಈ ಯೋಜನೆಯಲ್ಲಿ ಈಗಾಗಲೇ ಮೊದಲ ಪ್ಯಾಕೇಜ್ ಕಾಮಗಾರಿ ಆರಂಭಗೊಂಡಿದೆ. ಆದರೆ ರಾಷ್ಟ್ರೀಯ ವನ್ಯಜೀವಿ ಮಂಡಳಿ ಅನುಮತಿ ವಿಳಂಬವಾದ ಕಾರಣ ಪ್ಯಾಕೇಜ್ 2 ರ ಕಾಮಗಾರಿ ವಿಳಂಬವಾಗಿತ್ತು. ಆದರೆ ಈಗ ಪ್ಯಾಕೇಜ್ 2 ರ ಕಾಮಗಾರಿ ಕೂಡ ನಾಳೆಯಿಂದ ಆರಂಭಗೊಳ್ಳುತ್ತಿದೆ.

ಈ ವಿಚಾರವನ್ನು ಮೈಸೂರು ಕೊಡಗು ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಖಚಿತಪಡಿಸಿದ್ದಾರೆ. ನಿರಂತರ ಒತ್ತಡದ ಫಲವಾಗಿ ಇಂದು ಮೈಸೂರು ಹಾಗೂ ಕುಶಾಲನಗರದ ನಡುವಿನ ಪ್ಯಾಕೇಜ್ 2ರ ಕಾಮಗಾರಿಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿ ಅನುಮತಿ ನೀಡಿದೆ ಎಂದು ತಿಳಿಸಿದ್ದಾರೆ.

ಹುಣಸೂರು ಹಾಗೂ ಕುಶಾಲನಗರದ ನಡುವೆ ಕೈಗೊಳ್ಳುತ್ತಿರುವ ಕಾಮಗಾರಿ ಅನುಷ್ಠಾನಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಹೆದ್ದಾರಿ ನಿರ್ಮಾಣ ಮಾಡುತ್ತಿರುವ ಕಂಪನಿಗೆ ಸಮ್ಮತಿ ಪತ್ರ ನೀಡಿದ್ದಾರೆ. ಈ ಹಿನ್ನೆಲೆ ಪ್ಯಾಕೇಜ್ 2 ರ ಕಾಮಗಾರಿ ನಾಳೆಯಿಂದ ಆರಂಭಗಲಿದೆ. ಇದಕ್ಕಾಗಿ ಅಗತ್ಯವಿರುವ ಯಂತ್ರೋಪಕರಣ ಹಾಗೂ ಇತರೆ ಉಪಕರಣಗಳನ್ನು ಸಿದ್ಧಪಡಿಸಿಕೊಳ್ಳಲಾಗಿದೆ. ನಾಳೆಯಿಂದ ಈ ಕಾಮಗಾರಿ ಆರಂಭಗೊಂಡರೆ ಇನ್ನು 18 ತಿಂಗಳಲ್ಲಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ.

ಕೆಎಸ್‌ಸಿಎ ಅಧ್ಯಕ್ಷರಾಗಿ ವೆಂಕಟೇಶ್ ಪ್ರಸಾದ್

ವಿ.ಎಂ.ಮಂಜುನಾಥ್ ಮತ್ತು ಶೈಲೇಶ್ ಎನ್.ಪೋಲ್ ಆಯ್ಕೆಯಾದರು. ಪರಾಜಿತ ಅಭ್ಯರ್ಥಿ ಶಾಂತಕುಮಾರ್ ಅವರ ನಾಮಪತ್ರ ತಿರಸ್ಕೃತಗೊಂಡಿದ್ದರಿಂದ ವೆಂಕಟೇಶ್ ಪ್ರಸಾದ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿತ್ತು. ಆದರೆ, ಶಾಂತಕುಮಾರ್ ಅವರು ಕೋರ್ಟ್ ಮೊರೆ ಹೋದ ಪರಿಣಾಮ ಅವರ ನಾಮಪತ್ರ ಸಿಂಧುಗೊಳಿಸಿ ಚುನಾವಣೆ ನಡೆಸುವಂತೆ ಕೋರ್ಟ್ ಆದೇಶ ನೀಡಿತ್ತು. ಅದರಂತೆ ಇಂದು ನಡೆದ ಚುನಾವಣೆಯಲ್ಲೂ ಸಹ ವೆಂಕಟೇಶ್ ಪ್ರಸಾದ್ ಗೆದ್ದು ಬೀಗಿದ್ದಾರೆ.

ಮೈಸೂರು ಝೋನ್‌ನಿಂದ ಪಿ.ಶ್ರೀನಿವಾಸ ಪ್ರಸಾದ್, ಬೆಂಗಳೂರು ಝೋನ್‌ನಿಂದ ಕಲ್ಪನಾ ವೆಂಕಟಾಚಾರ್, ಆಶಿಶ್ ಅಮರ್ ಲಾಲ್, ಅವಿನಾಶ್ ವೈದ್ಯ, ಶಿವಮೊಗ್ಗ ಝೋನ್‌ನಿಂದ ಡಿ.ಎಸ್. ಅರುಣ್, ತುಮಕೂರು ಝೋನ್‌ನಿಂದ ಸಿ.ಆರ್.ಹರೀಶ್, ಧಾರವಾಡ ಝೋನ್‌ನಿಂದ ವೀರಣ್ಣ ಎಸ್.ಸವಡಿ, ರಾಯಚೂರು ಝೋನ್‌ನಿಂದ ಕುಶಾಲ್ ಪಟೀಲ್ ಗಡ್ಡಿ, ಮಂಗಳೂರು ಝೋನ್‌ನಿಂದ ಅವಿರೋಧವಾಗಿ ಶೇಖರ್ ಐ.ಶೆಟ್ಟಿ ಆಯ್ಕೆಯಾಗಿದ್ದಾರೆ.

1994ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ ವೆಂಕಟೇಶ್ ಪ್ರಸಾದ್ ಟೀಂ ಇಂಡಿಯಾದ ಯಶಸ್ವಿ ವೇಗದ ಬೌಲರ್ ಆಗಿದ್ದು, 33 ಟೆಸ್ಟ್ ಪಂದ್ಯದಿಂದ 96 ವಿಕೆಟ್ ಕಬಳಿಸಿದ್ದರೆ, 161 ಏಕದಿನ ಪಂದ್ಯದಿಂದ 196 ವಿಕೆಟ್ ಉರುಳಿಸಿದ್ದಾರೆ.

61 ಇಂಡಿಗೋ ವಿಮಾನಗಳು ರದ್ದು

ಸಹಜ ಸ್ಥಿತಿಯತ್ತ ವಿಮಾನ ನಿಲ್ದಾಣ: ಕಳೆದ ಐದು ದಿನಗಳಿಂದ ಪ್ರಯಾಣಿಕರಿಂದ ತುಂಬಿ ತುಳುಕುತ್ತಿದ್ದ ವಿಮಾನ ನಿಲ್ದಾಣವು ಇದೀಗ ಸಹಜ ಸ್ಥಿತಿಗೆ ಮರಳುತ್ತಿದೆ. ಏರ್ಪೋರ್ಟ್ ಆಡಳಿತ ಮಂಡಳಿ ಕೈಗೊಂಡ ಮುಂಜಾಗ್ರತಾ ಕ್ರಮಗಳಿಂದಾಗಿ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರ ಸಂಖ್ಯೆ ಕಡಿಮೆಯಾಗಿದೆ. ರದ್ದಾದ ವಿಮಾನಗಳ ಮಾಹಿತಿಯನ್ನು ಏರ್ಲೈನ್ಸ್ ಸಿಬ್ಬಂದಿ ಮೊದಲೇ ಸಂದೇಶದ ಮೂಲಕ ಪ್ರಯಾಣಿಕರಿಗೆ ತಲುಪಿಸಿದ್ದಾರೆ. ರದ್ದಾದ ವಿಮಾನಗಳ ಪ್ರಯಾಣಿಕರು ಏರ್ಪೋರ್ಟ್‌ಗೆ ಬಾರದಂತೆ ಸಂದೇಶ ನೀಡಿದ ಹಿನ್ನೆಲೆಯಲ್ಲಿ ಏರ್ಪೋರ್ಟ್‌ನಲ್ಲಿ ಜನಸಂದಣಿ ಇಳಿಮುಖವಾಗಿದೆ. ವಿಶೇಷವಾಗಿ ಇಂಡಿಗೋ ಕೌಂಟರ್ ಮುಂದೆಯೂ ಜನರ ಸಂಖ್ಯೆ ಕಡಿಮೆಯಾಗಿದೆ.

ಹೆಚ್ಚುವರಿ ಸಿಬ್ಬಂದಿ ನಿಯೋಜನೆ: ಹಲವು ವಿಮಾನಗಳು ರದ್ದಾಗಿದ್ದರೆ, ಮುಂದುವರೆದ ಕೆಲ ಇಂಡಿಗೋ ವಿಮಾನಗಳ ಹಾರಾಟದಲ್ಲಿ ವಿಳಂಬ ಉಂಟಾಗಿದೆ. ವಿಮಾನಗಳು ವಿಳಂಬವಾದ ಹಿನ್ನೆಲೆಯಲ್ಲಿ ಕೆಲ ಪ್ರಯಾಣಿಕರು ಏರ್ಪೋರ್ಟ್‌ನಲ್ಲಿ ಕಾದು ಕುಳಿತಿದ್ದಾರೆ. ಪ್ರಯಾಣಿಕರಿಗೆ ಫ್ಲೈಟ್‌ಗಳ ಬಗ್ಗೆ ಸೂಕ್ತ ಮಾಹಿತಿ ನೀಡಲು ಮತ್ತು ಗೊಂದಲ ನಿವಾರಿಸಲು ಏರ್ಪೋರ್ಟ್ ಆಡಳಿತ ಮಂಡಳಿಯು ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜಿಸಿದೆ. ಒಟ್ಟಾರೆಯಾಗಿ ಕ್ಯಾನ್ಸಲ್ ಆದ ವಿಮಾನಗಳ ಮಾಹಿತಿಯನ್ನು ಮೊದಲೇ ನೀಡುತ್ತಿರುವುದರಿಂದ, ದೇವನಹಳ್ಳಿ ಬಳಿಯ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಒತ್ತಡ ಕಡಿಮೆಯಾಗಿ ಸಹಜ ವಾತಾವರಣ ನಿರ್ಮಾಣವಾಗುತ್ತಿದೆ.

8 ತಾಸಿನೊಳಗೆ ರಿಯಲ್ ಎಸ್ಟೇಟ್ ಉದ್ಯಮಿ ರಕ್ಷಣೆ

ಅವರನ್ನು ಟಾಟಾ ಸುಮೋ ದಲ್ಲಿ ಅಪಹರಿಸಿದೆ. ಅಪಹರಣದ ವೇಳೆ ಸಮೀಪದ ಹಾಲಿನ ಬೂತ್ ಬಳಿ ಸಾಕಷ್ಟು ಜನರು ನಿಂತಿದ್ದರಾದರೂ, ಲೋಕೇಶ್ ಅವರ ಸಹಾಯಕ್ಕೆ ಯಾರೂ ಧಾವಿಸಿಲ್ಲ. ಆದರೆ ಅವರನ್ನು ಅಪಹರಿಸಿದ ಸುಮೋ, ಹಿನಕಲ್ ಕಡೆಗೆ ಹೋಗಿದ್ದನ್ನು ಕೆಲವರು ಪೊಲೀಸರಿಗೆ ತಿಳಿಸಿದ್ದರು.

ತಕ್ಷಣವೇ ವಿಜಯನಗರ ಠಾಣೆ ಇನ್ಸ್‌ಪೆಕ್ಟರ್ ಸುರೇಶ್ ಕುಮಾರ್ ನೇತೃತ್ವದ ತಂಡ ಸ್ಥಳಕ್ಕೆ ದೌಢಾಯಿಸಿ, ರಾಯಲ್ ಎನ್‌ಫೀಲ್ಡ್‌ನ ಬೈಕ್‌ನ ನೋಂದಣಿ ಸಂಖ್ಯೆ ಆಧರಿಸಿ, ಅಪಹರಿಸಲ್ಪಟ್ಟಿರುವುದು ಲೋಕೇಶ್ ಎಂಬುದನ್ನು ಪತ್ತೆ ಹಚ್ಚಿದ್ದರು. ಅದೇ ವೇಳೆ ಹುಣಸೂರು ಮತ್ತು ಕೆ.ಆರ್.ನಗರ ಕಡೆ ಸುಮೋ ಚಲಿಸಿದರೆ, ಅದನ್ನು ತಡೆಯುವ ನಿಟ್ಟಿನಲ್ಲಿ ಜಿಲ್ಲಾ ಪೊಲೀಸರಿಗೆ ಸಂದೇಶವನ್ನು ರವಾನಿಸಿದ್ದರು.

ಕೋಟಿ ಒತ್ತೆ ಹಣಕ್ಕೆ ಬೇಡಿಕೆ: ಈ ಮಧ್ಯೆ ಅಪಹರಣಕಾರರು ಲೋಕೇಶ್ ಪತ್ನಿ ನಯನಾ ಅವರಿಗೆ ಕರೆ ಮಾಡಿ, 1 ಕೋಟಿ ರೂ. ಒತ್ತೆ ಹಣ ನೀಡುವಂತೆಯೂ, ಇಲ್ಲದಿದ್ದರೆ ಲೋಕೇಶ್ ಅವರನ್ನು ಹತ್ಯೆಗೈಯ್ಯುವುದಾಗಿಯೂ ಬೆದರಿಕೆ ಹಾಕಿದ್ದರು.

ಅಷ್ಟರೊಳಗಾಗಿ ಬೈಕ್‌ನ ನೋಂದಣಿ ಸಂಖ್ಯೆಯಾದ ಪತ್ತೆಯಾದ ವಿಳಾಸವನ್ನು ಪೊಲೀಸರು ತಲುಪಿದ್ದು, ಅಪಹರಣಕಾರರು ಒತ್ತೆ ಹಣಕ್ಕೆ ಕರೆ ಮಾಡಿರುವುದು ಗೊತ್ತಾಗಿದೆ. ತಕ್ಷಣವೇ ನಯನ ಅವರು ಪೊಲೀಸರಿಗೆ ತಮ್ಮ ಪತಿ ಅಪಹರಣವಾಗಿದ್ದು, ಒತ್ತೆ ಹಣಕ್ಕೆ ಬೇಡಿಕೆ ಇಡಲಾಗಿದೆ ಎಂದು ದೂರನ್ನು ಸಲ್ಲಿಸಿದರು.

ಅಪಹರಣಕಾರರು ಲೋಕೇಶ್ ಅವರ ಮೊಬೈಲ್‌ನಿಂದಲೇ ಕರೆ ಮಾಡುತ್ತಿದ್ದರು. ಅಪಹರಣಕಾರರೊಂದಿಗೆ ಹಣ ಇರುವ ಬಗ್ಗೆ ಚೌಕಾಸಿ ಮಾಡಿ ಮಾತನಾಡುವ ಮೂಲಕ ಮೊಬೈಲ್ ಸಂಪರ್ಕದಲ್ಲಿರುವಂತೆ ಪೊಲೀಸರು ಸಲಹೆ ನೀಡಿದ್ದರು ಎಂದು ಹೇಳಲಾಗಿದೆ.

ಕೋಟಿ ರೂ. ಒತ್ತೆ ಹಣಕ್ಕೆ ಬೇಡಿಕೆ ಇಟ್ಟಿದ್ದ ಅಪಹರಣಕಾರರು ಚೌಕಾಸಿ ನಂತರ 30 ಲಕ್ಷ ರೂ.ಗಳಿಗೆ ಒಪ್ಪಿದ್ದರು. ನಯನ ಮತ್ತು ಅಪಹರಣಕಾರರ ನಡುವೆ ಒತ್ತೆ ಹಣದ ಚೌಕಾಸಿ ಮಾತುಕತೆಗಳು ನಡೆಯುತ್ತಿದ್ದ ವೇಳೆ ಮೈಸೂರು ನಗರ ಪೊಲೀಸ್ ಇಲಾಖೆಯ ತಾಂತ್ರಿಕ ತಂಡ ಲೋಕೇಶ್ ಅವರ ಮೊಬೈಲ್ ಲೊಕೇಷನ್ ಅನ್ನು ಪತ್ತೆ ಹಚ್ಚಿತ್ತು.

ಅಪಹರಣಕಾರರ ಬಂಧಿಸಿ ಲೋಕೇಶ್ ಅವರನ್ನು ರಕ್ಷಿಸುವ ಸಲುವಾಗಿ ರಚಿಸಲಾಗಿದ್ದ ಪೊಲೀಸ್ ತಂಡಗಳು ಮೊಬೈಲ್ ಲೊಕೇಷನ್ ಆಧರಿಸಿ ಇಂದು ಮುಂಜಾನೆ 4 ಗಂಟೆ ಸುಮಾರಿಗೆ ಕೆ.ಆರ್.ನಗರದ ಹಂಪಾಪುರ ಬಳಿ ನಿರ್ಜನ ಪ್ರದೇಶದಲ್ಲಿ ಟಾಟಾ ಸುಮೋ ನಿಂತಿರುವುದನ್ನು ಪತ್ತೆ ಹಚ್ಚಿ, ಮಿಂಚಿನ ದಾಳಿ ನಡೆಸಿದ ವೇಳೆ ಪ್ರೀತಂ ಸ್ಥಳದಿಂದ ಪರಾರಿಯಾಗಿದ್ದು, ಉಳಿದ ನಾಲ್ವರು ಪೊಲೀಸರಿಗೆ ಸಿಕ್ಕಿ ಬಿದ್ದಿದ್ದಾರೆ. ಸಂಜೆಯ ವೇಳೆಗೆ ಪ್ರೀತಂನನ್ನೂ ಕೂಡ ಬಂಧಿಸಿದ್ದಾರೆ.

ಲೋಕೇಶ್ ಅವರನ್ನು ಅಪಹರಣ ಮಾಡಿರುವವರು ಪರಿಚಿತರೇ ಆಗಿದ್ದು, ಒಂದು ವೇಳೆ ಲೋಕೇಶ್ ಪತ್ನಿ ನಯನ ಅವರು ಒತ್ತೆ ಹಣ ನೀಡಿದ್ದರೂ ಪರಿಚಯಸ್ಥರಾಗಿರುವುದರಿಂದ ಸಿಕ್ಕಿ ಬೀಳಬಹುದು ಎಂಬ ಕಾರಣಕ್ಕಾಗಿ ಹಣ ಪಡೆದುಕೊಂಡು ಲೋಕೇಶ್ ಅವರನ್ನು ಹತ್ಯೆ ಮಾಡುವ ಅಪಾಯವಿತ್ತು. ಆದರೆ ಪೊಲೀಸರ ಮಿಂಚಿನ ಕಾರ್ಯಾಚರಣೆಯಿಂದಾಗಿ ಲೋಕೇಶ್ ಅವರ ಹತ್ಯೆ ತಪ್ಪಿದಂತಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಲೋಕೇಶ್ ಅಪಹರಣ ವಿಚಾರ ತಿಳಿಯುತ್ತಿದ್ದಂತೆಯೇ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ನಿರ್ದೇಶನದ ಮೇರೆಗೆ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಕೆ.ಎಸ್.ಸುಂದರ ರಾಜ್ ಮಾರ್ಗದರ್ಶನದಲ್ಲಿ ವಿಜಯನಗರ ಉಪ ವಿಭಾಗದ ಎಸಿಪಿ ರವಿಪ್ರಸಾದ್, ವಿಜಯನಗರ ಠಾಣೆ ಇನ್ಸ್‌ಪೆಕ್ಟರ್ ಎಸ್.ಬಿ.ಸುರೇಶ್ ಕುಮಾರ್, ಸಬ್ ಇನ್ಸ್‌ಪೆಕ್ಟರ್‌ಗಳಾದ ಜೈಕೀರ್ತಿ, ಎಂ.ಆನಂದ್, ಸಿಬ್ಬಂದಿಗಳಾದ ಶಂಕರ್, ವೆಂಕಟೇಶ್, ಸುನಿಲ್, ಗಂಗಾಧರ್, ಲಿಖಿತ್, ಮಂಜುನಾಥ್, ಲೋಕೇಶ್, ಚಾಲಕ ಗಿರೀಶ್ ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು. ಅಪಹರಣವಾದ ಕೆಲವೇ ಗಂಟೆಗಳಲ್ಲಿ ಆರೋಪಿಗಳನ್ನು ಬಂಧಿಸಿ, ಉದ್ಯಮಿಯನ್ನು ರಕ್ಷಿಸಿದ ಪೊಲೀಸ್ ತಂಡಕ್ಕೆ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಡಿಸಿಪಿಗಳಾದ ಬಿಂದುರಾಣಿ ಕೆಎಸ್.ಸುಂದರ್‌ರಾಜ್ ಅಭಿನಂದನೆ ತಿಳಿಸಿದ್ದಾರೆ.

ಚಳಿಗಾಲದ ಅಧಿವೇಶನ ಆರಂಭ

ಅಧಿವೇಶನ ಹಿನ್ನೆಲೆ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಈ ಬಾರಿ ಬೆಳಗಾವಿ ನಗರದಲ್ಲಿ ಹೆಚ್ಚುವರಿ ಭದ್ರತೆ ನಿಯೋಜನೆ ಮಾಡಲಾಗಿದೆ. ದೆಹಲಿಯಲ್ಲಿ ಉಗ್ರರಿಂದ ಕಾರು ಸ್ಫೋಟ ಪ್ರಕರಣ ಹಿನ್ನೆಲೆ ಅಧಿವೇಶನದ ವೇಳೆ ಎಚ್ಚರ ವಹಿಸುವಂತೆ ಕೇಂದ್ರ ಗುಪ್ತಚರ ಇಲಾಖೆ ಮಾಹಿತಿ ನೀಡಿರುವ ಕಾರಣ ಬೆಳಗಾವಿ ಸುವರ್ಣ ಸೌಧದ ಸುತ್ತಮುತ್ತ ಹೈಅಲರ್ಟ್ ಘೋಷಿಸಲಾಗಿದೆ.

ಬೆಳಗಾವಿ ನಗರದಲ್ಲಿ ಹೆಚ್ಚುವರಿಯಾಗಿ 6 ಸಾವಿರ ಪೊಲೀಸರ ನಿಯೋಜನೆ ಮಾಡಲಾಗಿದ್ದು, ನಗರ ಪೊಲೀಸ್ ಆಯುಕ್ತ ಭೂಷಣ್ ಬೊರಸೆ ನೇತೃತ್ವದಲ್ಲಿ ಬಂದೋಬಸ್ತ್ ಕೈಗೊಳ್ಳಲಾಗಿದೆ. ಆರು ಎಸ್‌ಪಿ ರ‍್ಯಾಂಕ್ ಮಟ್ಟದ ಪೊಲೀಸ್ ಅಧಿಕಾರಿಳು, 146 ಹಿರಿಯ ಪೊಲೀಸ್ ಅಧಿಕಾರಿಗಳು, 3,820 ಪೊಲೀಸ್ ಸಿಬ್ಬಂದಿ, 500 ಹೋಂ ಗಾರ್ಡ್ಸ್, 8 ಕ್ಷಿಪ್ರ ಕಾರ್ಯಪಡೆ, 10 ಡಿಎಆರ್ ತುಕಡಿ, 35 ಕೆಎಸ್‌ಆರ್‌ಪಿ ತುಕಡಿ, 1 ಬಿಡಿಡಿಎಸ್ ತಂಡ, 1 ಗರುಡಾ ಫೋರ್ಸ್, 16 ವಿಧ್ವಂಸಕ ಕೃತ್ಯ ತಪಾಸಣೆ ತಂಡಗಳು ಭದ್ರತೆಗಾಗಿ ನಿಯೋಜನೆಗೊಂಡಿವೆ. ಸುವರ್ಣ ವಿಧಾನಸೌಧ ಸುತ್ತಮುತ್ತ ಪೊಲೀಸ್ ಸರ್ಪಗಾವಲು ಇರಲಿದ್ದು, ಸುವರ್ಣ ಗಾರ್ಡನ್ ಮತ್ತು ಅಲಾರವಾಡ ಬಳಿ ಪ್ರತಿಭಟನೆಗಳಿಗೆ ಸ್ಥಳ ನಿಗದಿ ಮಾಡಲಾಗಿದೆ.

ಬಿಜೆಪಿಯಿಂದ ಮಹತ್ವದ ನಿರ್ಧಾರ: ಸಿಎಂ ಕುರ್ಚಿಗಾಗಿ ರಾಜ್ಯ ಸರ್ಕಾರದಲ್ಲಿ ಹಗ್ಗ ಜಗ್ಗಾಟ ನಡೆಯುತ್ತಿರುವ ಹಿನ್ನಲೆ ಅಧಿವೇಶನದಲ್ಲಿ ಅವಿಶ್ವಾಸ ನಿಲುವಳಿ ಮಂಡನೆಗೆ ವಿಪಕ್ಷ ಬಿಜೆಪಿ ಚಿಂತಿಸಿತ್ತು. ಆದರೆ ಈಗ ತನ್ನ ನಿರ್ಧಾರದಿಂದ ಬಿಜೆಪಿ ಹಿಂದೆ ಸರಿದಿದೆ. ಕಳೆದ ವಾರ ಬೆಂಗಳೂರಿನಲ್ಲಿ ನಡೆದ ಸಭೆಯಲ್ಲಿ ಅವಿಶ್ವಾಸ ಮಂಡನೆಗೆ ಮುಂದಾಗದಂತೆ ಬಿಜೆಪಿಗೆ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಸಲಹೆ ನೀಡಿದ್ದಾರೆ. ಅವಿಶ್ವಾಸ ಮಂಡನೆ ಮಾಡಿದರೆ ಕಾಂಗ್ರೆಸ್‌ನಲ್ಲಿ ಒಗ್ಗಟ್ಟು ಸೃಷ್ಟಿಯಾಗುತ್ತದೆ. ಹೀಗಾಗಿ ಒಗ್ಗಟ್ಟಾಗುವುದಕ್ಕೆ ಅವಕಾಶ ಕೊಡುವುದು ಬೇಡ ಎಂದು ಹೆಚ್‌ಡಿಕೆ ಸಲಹೆ ಹಿನ್ನಲೆ ಬಿಜೆಪಿ ನಿರ್ಧಾರ ಬದಲಾಯಿಸಿದೆ ಎನ್ನಲಾಗಿದೆ.

ಮನುಷ್ಯನಿಗೆ ವೃದ್ಧಾಪ್ಯ ಪರಿಪಕ್ವತೆಯ ಕಾಲ

ಹಿರಿಯ ನಟ ಡಾ.ಶ್ರೀನಾಥ್ ಅಭಿಮತ



ಮೈಸೂರಿನ ಜೆಕೆ ಮೈದಾನದ ಎಂಎಂಸಿ ಅಮೃತ ಮಹೋತ್ಸವ ಸಭಾಂಗಣದಲ್ಲಿ ಆಯೋಜಿಸಿದ್ದ ಸಂಗೀತ ರಸಸಂಜೆ ಕಾರ್ಯಕ್ರಮದಲ್ಲಿ ಹಿರಿಯ ನಾಗರಿಕರನ್ನು ಸನ್ಮಾನಿಸಲಾಯಿತು.

ಮೈಸೂರು,ಡಿ.7(ಪಿಎಂ)– ವೃದ್ಧಾಪ್ಯದ ಕಾಲದಲ್ಲಿ ಮನುಷ್ಯನಿಗೆ ಪರಿಪಕತ್ವತೆ ಮೂಡಲಿದೆ ಎಂದು ಹಿರಿಯ ನಟ ಡಾ.ಶ್ರೀನಾಥ್ ಅಭಿಪ್ರಾಯಪಟ್ಟರು.

ಮೈಸೂರಿನ ಜೆಕೆ ಮೈದಾನದಲ್ಲಿರುವ ಮೈಸೂರು ವೈದ್ಯಕೀಯ ಕಾಲೇಜಿನ ಅಮೃತ ಮಹೋತ್ಸವ ಸಭಾಂಗಣದಲ್ಲಿ ಸ್ವರಾಂಜಲಿ ತಂಡ ಹಾಗೂ ಶಾರದಾ ಎಜುಕೇಷನಲ್ ಮತ್ತು ಚಾರಿಟಬಲ್ ಟ್ರಸ್ಟ್ ಜಂಟಿ ಆಶ್ರಯದಲ್ಲಿ 'ಮಧುರ ಮಿಲನ' ಶೀರ್ಷಿಕೆಯಡಿ ವಿಶೇಷವಾಗಿ ಹಿರಿಯ ನಾಗರಿಕರು ಮತ್ತು ವೃದ್ಧಾಶ್ರಮಗಳ ಹಿರಿಯರಿಗಾಗಿ ಭಾನುವಾರ ಹಮ್ಮಿಕೊಂಡಿದ್ದ ಸಂಗೀತ ರಸ ಸಂಜೆ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಜೀವನದಲ್ಲಿ ಈ ಕ್ಷಣ ನನ್ನದು ಎಂದು ಪ್ರತಿಕ್ಷಣದಲ್ಲಿಯೂ ಸಂತಸದಿಂದ ಬದುಕಲು ಕಲಿಯಬೇಕು. ಆಗ ಮಾತ್ರ ಜೀವನ ಸುಂದರವಾಗಿರುತ್ತದೆ. ಜೀವನದಲ್ಲಿ ನಮ್ಮ ಆಯ್ಕೆ ಮುಖ್ಯ. ಅದು ಜೀವನದ ಗತಿಯನ್ನೇ ಬದಲಿಸಬಲ್ಲದು. ನನ್ನ ಆಯ್ಕೆ ಕೂಡ ನನ್ನ ಜೀವನದ ಧಿಕ್ಕನ್ನೇ ಬದಲಿಸಿತು. ಪತ್ನಿಯಾಗಿ ನಾನು ಗೀತಾ ಅವರನ್ನು ಆಯ್ಕೆ ಮಾಡಿದ್ದರಿಂದ ನಟನಾ ಕ್ಷೇತ್ರದಲ್ಲಿ ನನ್ನ ಬದುಕೇ ಬದಲಾಯಿತು ಎಂದು ಹೇಳಿದರು. ಹಿರಿಯ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಮಾತನಾಡಿ, ವೃದ್ಧಾಪ್ಯದಲ್ಲೂ ಒತ್ತಡ ಮುಕ್ತರಾಗಿ ಸಂತೋಷದಾಯಕವಾಗಿ ಬದುಕುವ ಕಲೆ ರೂಢಿಸಿ ಕೊಳ್ಳಬೇಕು. ಸಾಕಷ್ಟು ವಯೋವೃದ್ಧರು ಮೊದಲಿನಂತೆ ತಮಗೆ ಚೈತನ್ಯ ಇಲ್ಲವಲ್ಲ ಎಂದು ಕೊರಗುತ್ತಾರೆ. ಆದರೆ, ಅಂತಹ ಒತ್ತಡಕ್ಕೆ ಸಿಲುಕದೇ ಜೀವನವನ್ನು ಸಹಜವಾಗಿ ಸ್ವೀಕರಿಸಿ ಸಂತೃಪ್ತಿಯಿಂದ ಬದುಕಲು ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ಸ್ವಾವಲಂಬಿ ಜೀವನ ನಡೆಸುತ್ತಿರುವ ಹಿರಿಯ ನಾಗರಿಕರನ್ನು ಸನ್ಮಾನಿಸಲಾಯಿತು. ಅಲ್ಲದೆ, ಸ್ವರಾಂಜಲಿ ತಂಡದಿಂದ ನಡೆಸಿದ್ದ ಸಾಂಸ್ಕೃತಿಕ ಮತ್ತು ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದ ಹಿರಿಯ ನಾಗರಿಕರಿಗೆ ಬಹುಮಾನ ವಿತರಿಸಲಾಯಿತು. ಬಳಿಕ ಸಂಗೀತ ಸಂಜೆ ಕಾರ್ಯಕ್ರಮ ನಡೆಯಿತು.

ಸಂಗೀತ ಕಾರ್ಯಕ್ರಮಕ್ಕೆ ಉಚಿತ ಪ್ರವೇಶಾವಕಾಶ ಕಲ್ಪಿಸಲಾಗಿತ್ತು. ಸ್ವರಾಂಜಲಿ ತಂಡದ ಮುಖ್ಯಸ್ಥ ಡಾ.ಎಂ.ಎನ್.ರಘುವೀರ್, ಡಾ.ಹೆಚ್.ಎನ್.ದಿನೇಶ್, ಡಾ.ಲಾವಣ್ಯ ಶೆಣೈ, ಕೆ.ಶಂಕರ್, ದಿವ್ಯ ಕೇಶವನ್, ಇಂದುಮತಿ ಜೈಪಾಲ್ ಮತ್ತಿತರರು ಹಾಜರಿದ್ದರು.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಹಾಲಿನ ಟ್ಯಾಂಕರ್‌ಗೆ ಡಿಕ್ಕಿಯಾಗಿ ಸುಟ್ಟು ಕರಕಲಾದ ರೆನಾಲ್ಟ್ ಡಸ್ಟರ್ ಕಾರು

ರಾಮನಗರ, ಡಿ.7– ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಇಂದು (ಡಿ.7) ಬೆಳಿಗ್ಗೆ ಭೀಕರ ಅಪಘಾತ ಸಂಭವಿಸಿದೆ. ಮೈಸೂರಿನಿಂದ ಬೆಂಗಳೂರಿನ ಕಡೆಗೆ ಬರುತ್ತಿದ್ದ ರೆನಾಲ್ಟ್ ಡಸ್ಟರ್ ಕಾರು, ಮುಂದೆ ಸಾಗುತ್ತಿದ್ದ ಹಾಲಿನ ಟ್ಯಾಂಕರ್‌ಗೆ ಹಿಂದಿನಿಂದ ರಭಸವಾಗಿ ಗುದ್ದಿದ ಪರಿಣಾಮ, ಕ್ಷಣಾರ್ಧದಲ್ಲಿ ಬೆಂಕಿ ಹೊತ್ತಿಕೊಂಡು ಕಾರು ಸಂಪೂರ್ಣವಾಗಿ ಸುಟ್ಟು ಕರಕಲಾಗಿದೆ.

ಈ ದುರ್ಘಟನೆ ರಾಮನಗರ ಜಿಲ್ಲೆಯ ಸಂಗಬಸವನ ದೊಡ್ಡಿ ಬಳಿ ನಡೆದಿದೆ. ತೀವ್ರ ವೇಗದಲ್ಲಿದ್ದ ಕಾರು, ಹಾಲಿನ ಟ್ಯಾಂಕರ್‌ಗೆ ಡಿಕ್ಕಿ ಹೊಡೆದ ರಭಸಕ್ಕೆ ಸ್ಪಾರ್ಕ್ ಉಂಟಾಗಿ, ಕಾರಿನ ಎಂಜಿನ್ ಭಾಗದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಕೆಲವೇ ನಿಮಿಷಗಳಲ್ಲಿ ಬೆಂಕಿಯ ಕೆನ್ನಾಲಿಗೆ ಇಡೀ ಕಾರನ್ನು ಆವರಿಸಿಕೊಂಡು, ರೆನಾಲ್ಟ್ ಡಸ್ಟರ್ ಕಾರು ರಸ್ತೆಯಲ್ಲೇ ಸುಟ್ಟು ಕರಕಲಾಗಿದೆ. ಅಪಘಾತ ಸಂಭವಿಸುತ್ತಿದ್ದಂತೆಯೇ ಕಾರಿನಲ್ಲಿದ್ದ ಪ್ರಯಾಣಿಕರು ತಕ್ಷಣವೇ ಹೊರಬರಲು ಯಶಸ್ವಿಯಾಗಿದ್ದಾರೆ. ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದೂ, ಅವರಿಗೆ ಸಣ್ಣಪುಟ್ಟ ಸುಟ್ಟ ಗಾಯಗಳಾಗಿವೆ. ತಕ್ಷಣವೇ ಸ್ಥಳಕ್ಕಾಗಮಿಸಿದ ಸ್ಥಳೀಯರು ಮತ್ತು ಹೆದ್ದಾರಿ ಗಸ್ತು ಸಿಬ್ಬಂದಿ ಕಾರಿನಲ್ಲಿದ್ದ ಗಾಯಾಳುಗಳನ್ನು ರಕ್ಷಿಸಿ, ರಾಮನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಬೆಂಕಿ ಹೊತ್ತಿ ಉರಿಯುತ್ತಿದ್ದರಿಂದ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಕೆಲಕಾಲ ಟ್ರಾಫಿಕ್ ಜಾಮ್ ಉಂಟಾಗಿತ್ತು. ವಾಹನಗಳು ನಿಧಾನಗತಿಯಲ್ಲಿ ಸಾಗಿದವು. ಈ ಘಟನಾ ಸ್ಥಳಕ್ಕೆ ರಾಮನಗರ ಸಂಚಾರ ಠಾಣೆ ಪೊಲೀಸರು ತಕ್ಷಣವೇ ಆಗಮಿಸಿ, ವಾಹನ ಸಂಚಾರ ಸುಗಮಗೊಳಿಸಲು ನೆರವಾದರು. ಅಗ್ನಿಶಾಮಕ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿ ಉರಿಯುತ್ತಿದ್ದ ಬೆಂಕಿಯನ್ನು ಸಂಪೂರ್ಣವಾಗಿ ನಂದಿಸಿದರು. ಆದರೂ, ಕಾರು ಸಂಪೂರ್ಣವಾಗಿ ಸುಟ್ಟು ಕಬ್ಬಿಣದ ರಾಶಿಯಾಗಿ ಮಾರ್ಪಟ್ಟಿತ್ತು.

ಭೋವಿ ಅಭಿವೃದ್ಧಿ ನಿಗಮದಿಂದ ಅಂಬೇಡ್ಕರ್‌ಗೆ ಗೌರವ ನಮನ




ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಜಿಲ್ಲಾ ಕಚೇರಿಯಲ್ಲಿ ಡಾ.ಅಂಬೇಡ್ಕರ್‌ರ ಮಹಾಪರಿನಿಬ್ಬಾಣ ದಿನ ಆಚರಿಸಲಾಯಿತು.

ಮೈಸೂರು,ಡಿ.7(ಎಂಕೆ)–ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ 69ನೇ ವರ್ಷದ ಮಹಾಪರಿನಿಬ್ಬಾಣ ದಿನದ ಅಂಗವಾಗಿ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಜಿಲ್ಲಾ ಕಚೇರಿಯಲ್ಲಿ ನಿಗಮದ ಅಧ್ಯಕ್ಷ ಎಂ.ರಾಮಪ್ಪ ನೇತೃತ್ವದಲ್ಲಿ ಡಾ.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮೂಲಕ ಗೌರವ ನಮನ ಸಲ್ಲಿಸಲಾಯಿತು. ಬಳಿಕ ನಿಗಮದಿಂದ ದೊರೆಯುವ ನೇರ ಸಾಲ ಯೋಜನೆ, ಉದ್ಯಮ ಶೀಲತಾ ಯೋಜನೆ ಹಾಗೂ ಗಂಗಾ ಕಲ್ಯಾಣ ಯೋಜನೆ ಫಲಾನುಭವಿಗಳ ಸ್ಥಳಕ್ಕೆ ತೆರಳಿ ಪ್ರಗತಿ ಪರಿಶೀಲನೆ ನಡೆಸಿದರು. ವಡ್ಡರಪಾಳ್ಯ ಗ್ರಾಮಕ್ಕೆ ತೆರಳಿ ಭೋವಿ ಸಮುದಾಯದ ಜನರ ಕುಂದು–ಕೊರತೆ ಆಲಿಸಿ, ಅಹವಾಲು ಸ್ವೀಕರಿಸಿದರು. ಗ್ರಾಮಕ್ಕೆ ಸರ್ಕಾರಿ ಸಾರಿಗೆ ವ್ಯವಸ್ಥೆ ಇಲ್ಲದಿರುವ ಕುರಿತು ಗ್ರಾಮಸ್ಥರು ಮನವಿ ಮಾಡಿದ ಹಿನ್ನಲೆ ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ಕರೆ ಮಾಡಿ, ಕೂಡಲೇ ಗ್ರಾಮಕ್ಕೆ ಸಾರಿಗೆ ಬಸ್ ಕಲ್ಪಿಸುವಂತೆ ಸೂಚಿಸಿದರು. ನಂತರ ಗ್ರಾಮದ ಮುಖ್ಯಸ್ಥರೊಬ್ಬರ ಮನೆಗೆ ಭೇಟಿ ನೀಡಿ, ಗ್ರಾಮಸ್ಥರೊಂದಿಗೆ ಸಭೆ ನಡೆಸಿ, ನಿಗಮದಿಂದ ದೊರೆಯುವ ಸೌಲಭ್ಯವನ್ನು ತಿಳಿಸಿದರು. ಈ ವೇಳೆ ಭೋವಿ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಶ್ರೀಧರ್‌ಮೂರ್ತಿ, ಸಿಬ್ಬಂದಿ ಮಹಾಲಕ್ಷ್ಮಿ ಮತ್ತಿತರರಿದ್ದರು.

ಡಿ.10, ವಿದ್ಯುತ್ ವ್ಯತ್ಯಯ

ಮೈಸೂರು, ಡಿ.7– ದೇವನೂರು ಹಾಗೂ ರಾಜೀವನಗರ ವಿದ್ಯುತ್ ವಿತ



ರಣಾ ಕೇಂದ್ರದಲ್ಲಿ ನಿರ್ವಹಣಾ ಕಾಮಗಾರಿ ನಿಮಿತ್ತ ಡಿ.10ರಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಮಹದೇವಪುರ ಮುಖ್ಯ ರಸ್ತೆ, ಪ್ರಜ್ವಲ್ ಆಸ್ಪತ್ರೆ, ಸಾತಗಳ್ಳಿ ಎ ಜೋನ್, ಈಡಿಗ ಮೈದಾನ, ಭರತ್‌ನಗರ, ಶಕ್ತಿನಗರ, ರಾಜ್‌ಕುಮಾರ್ ರಸ್ತೆ, ಎಸ್‌ಪಿಟಿ ಮತ್ತು ಆರ್‌ಎಂಎನ್‌ಎಸ್ ಲೇಔಟ್, ನೆಹರುನಗರ, ವಿ.ಟಿ.ಯು ಕಾಲೇಜು ಎದುರು, ಮಾನಸಿನಗರ, ವಿದ್ಯಾಶಂಕರ ಲೇಔಟ್, ಬಿ.ಡಿ ಕಾಲೋನಿ, ರಾಜೀವನಗರ, ತ್ರಿವೇಣಿಸರ್ಕಲ್, ಸಾತಗಳ್ಳಿ ಬಿ ಜೋನ್, ಬಿಎಸ್‌ಎನ್‌ಎಲ್ ಲೇಔಟ್, ಪ್ಯಾರಾಡೈಸ್ ಲೇಔಟ್, ದೇವೇಗೌಡ ಸರ್ಕಲ್, ಡಿಟಿಎಸ್ ರಾವ್‌ನಗರ, ಕಲ್ಯಾಣ್‌ನಗರ ಹಾಗೂ ಸುತ್ತಮುತ್ತ.

ರಾಜೀವನಗರ 2ನೇ, 3ನೇ ಹಂತ, ಎನ್‌ಜಿ ಕರೀಂಬ್ಲಾಕ್, ಗುಪ್ತಾ ಸ್ಟೋರ್, ಅಲ್‌ಬದರ್ ಸರ್ಕಲ್, ಖುಬಾ ಮಸಿದಿ ಸುತ್ತ–ಮುತ್ತ, ಸೂರ್ಯನಾರಾಯಣ ದೇವಸ್ಥಾನ ರಸ್ತೆ, ದಸ್ತಗಿರಿ ಫಂಕ್ಷನ್ ಹಾಲ್, ಕ್ರಿಶ್ಚಿಯನ್ ಕಾಲೋನಿ, ನಾಗರಾಜಪ್ಪ ಲೇಔಟ್, ಸುದಾನಂದ ಆಸ್ಪತ್ರೆ, ರೇಷಮ್ ಉದ್ಯೋಗ್ ಲೇಔಟ್, ಡಾಲರ್ಸ್ ಕಾಲೋನಿ, ಆಶಿಯಾನ ಲೇಔಟ್, ಎನ್‌ಎಚ್ ಆಸ್ಪತ್ರೆ, ಪ್ರಜ್ವಲ್ ಆಸ್ಪತ್ರೆ, ಆರ್‌ಟಿಓ ಫಿಟ್‌ನೆಸ್ ಸೆಂಟರ್, ಅಬ್ದುಲ್ ಕಲಂ ಲೇಔಟ್, ರಿಂಗ್ ರಸ್ತೆ ಹಾಗೂ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ.

ಅಶೋಕಪುರಂ ಭೀಮ ಬಳಗದಿಂದ ಅಂಬೇಡ್ಕರ್ ಪರಿನಿಬ್ಬಾಣ ದಿನಾಚರಣೆ

ಮೈಸೂರು, ಡಿ.7(ಎಂಕೆ) – ಮೈಸೂರಿನ ಅಶೋಕಪುರಂನಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಉದ್ಯಾನವನದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಅವರ 69ನೇ ವರ್ಷದ ಮಹಾ ಪರಿನಿಬ್ಬಾಣದ ದಿನದ ಅಂಗವಾಗಿ ಭೀಮ ಬಳಗದ ವತಿಯಿಂದ ಡಾ.ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಸಲ್ಲಿಸಿ, ದೀಪ ಬೆಳಗಿಸುವ ಮೂಲಕ ನಮನ ಸಲ್ಲಿಸಲಾಯಿತು.



ಡಾ.ಬಿ.ಆರ್.ಅಂಬೇಡ್ಕರ್‌ರ 69ನೇ ವರ್ಷದ ಮಹಾಪರಿನಿಬ್ಬಾಣದ ದಿನದ ಅಂಗವಾಗಿ ಭೀಮ ಬಳಗದಿಂದ ಗೌರವ ನಮನ ಸಲ್ಲಿಸಲಾಯಿತು.

ಬಳಿಕ ಬಳಗದ ಪ್ರಧಾನ ಕಾರ್ಯದರ್ಶಿ ಹಾಗೂ ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಬಾಬಾ ಸಾಹೇಬ್ ಡಾ. ಅಂಬೇಡ್ಕರ್ ಅವರು ರಚಿಸಿರುವ ಭಾರತ ಸಂವಿಧಾನ, ದೇಶದ ಪ್ರತಿಯೊಬ್ಬರಿಗೂ ಮೀಸಲಾಗಿದೆ. ಧರ್ಮಾತೀತ ಮತ್ತು ಜಾತ್ಯಾತೀತವಾಗಿ ರಚನೆಯಾಗಿದೆ ಎಂದರು.

ಪಾಲಿಕೆ ಮಾಜಿ ಆಯುಕ್ತ ಎಂ.ಸಂದೀಪ್ ಮಾತನಾಡಿ, ಸಂವಿಧಾನ ದಡಿಯಲ್ಲಿ ನಾವೆಲ್ಲರೂ ಕಾರ್ಯನಿರ್ವಹಿಸಬೇಕು. ಅಂಬೇಡ್ಕರ್ ಅವರು ತೋರಿರುವ ಸಮಾನತೆ ಮಾರ್ಗದಲ್ಲಿ ಸಾಗಬೇಕು ಎಂದರು. ಅಶೋಕಪುರಂ ವಿನಾಯಕ ಕ್ರೀಡಾ ಸಮಾಜ ಸೇವಾ ಸಂಸ್ಥೆ ಅಧ್ಯಕ್ಷ ಎಸ್.ಆನಂದ್‌ಕುಮಾರ್, ಭೀಮ ಬಳಗದ ಅಧ್ಯಕ್ಷ ಷಣ್ಮುಖ, ಉಪಾಧ್ಯಕ್ಷ ಶ್ರೀಧರ, ಕಾರ್ಯದರ್ಶಿಗಳಾದ ರವೀಂದ್ರ ತಿಮ್ಮಯ್ಯ, ಮುಖಂಡರಾದ ಸಿದ್ದರಾಜು, ಕೆಂಚಪ್ಪ, ಪುಟ್ಟರಾಜು, ಮಹೇಶ್, ಬಾಲರಾಜು, ಮೋಹನ್, ಬಸವರಾಜು, ಚರಣ್, ವಿಜಯಕುಮಾರ್, ಮರಿಸ್ವಾಮಿ, ಸೋಹನ್‌ಕುಮಾರ್ ಮತ್ತಿತರರಿದ್ದರು.

ಡಿ.17ಕ್ಕೆ ದೆಹಲಿಯಲ್ಲಿ ರಾಷ್ಟ್ರಕವಿ ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ಹಿಂದಿ ಆವೃತ್ತಿ ಬಿಡುಗಡೆ

ಮೈಸೂರು,ಡಿ.7(ಜಿಎ)–ರಾಷ್ಟ್ರಕವಿ ಕುವೆಂಪು ಅವರಿಗೆ ಮರಣೋತ್ತರ ಭಾರತ ರತ್ನ ಪ್ರಶಸ್ತಿ ನೀಡಬೇಕೆಂಬ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಹಾಗೂ ಇಡೀ ರಾಷ್ಟ್ರದ ಗಮನ ಸೆಳೆಯಲು ಡಿ.17 ರಂದು ದೆಹಲಿಯಲ್ಲಿರುವ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಕುವೆಂಪು ವಿಶ್ವಮಾನವ ಕ್ಷೇಮಾಭಿವೃದ್ಧಿ ಟ್ರಸ್ಟ್ ಹಾಗೂ ದೆಹಲಿ ಕರ್ನಾಟಕ ಸಂಘದ ವತಿಯಿಂದ ಕುವೆಂಪು ಅವರ ಸಾಧನೆ ಮತ್ತು ಕೊಡುಗೆ ವಿಚಾರ ಸಂಕಿರಣ ಹಾಗೂ ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ' ಹಿಂದಿ ಆವೃತ್ತಿ ಬಿಡುಗಡೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಎಚ್.ಕೆ.ರಾಮು ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಹೆಚ್.ಕೆ.ರಾಮು, ಸಿಪಿಕೆ ಮಾತನಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 11ಗಂಟೆಗೆ ಕಾರ್ಯಕ್ರಮವನ್ನು ಶ್ರೀ ಆದಿಚುಂಚನಗಿರಿ ಮಠದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸುವರು. ಬೇಲಿ ಮಠದ ಶಿವಾನುಭವ ಚರಮೂರ್ತಿ ಶಿವರುದ್ರ ಸ್ವಾಮೀಜಿ, ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ಡಾ.ನಿಶ್ಚಲಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕುವೆಂಪು ಅವರ ಭಾವಚಿತ್ರ ಅನಾವರಣಗೊಳಿಸಿ, ಶ್ರೀ ರಾಮಾಯಣ ದರ್ಶನಂ ಹಿಂದಿ ಆವೃತ್ತಿ ಬಿಡುಗಡೆಗೊಳಿಸಲಿದ್ದಾರೆ ಎಂದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಶಾಸಕ ಜಿ.ಟಿ.ದೇವೇಗೌಡ, ಮೈಸೂರು ವಿವಿ ವಿಶ್ರಾಂತ ಕುಲಪತಿ ಡಾ.ಕೆ.ಎಸ್. ರಂಗಪ್ಪ, ಆದಿಚುಂಚನಗಿರಿ ವಿವಿ ವಿಶ್ರಾಂತ ಕುಲಪತಿ ಡಾ.ಎಂ.ಎ.ಶೇಖರ್, ಜಾನಪದ ಪರಿಷತ್ ಮಾಜಿ ಅಧ್ಯಕ್ಷ ಟಿ.ತಿಮ್ಮೇಗೌಡರು, ಗಡಿನಾಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ಸಿ.ಸೋಮಶೇಖರ್, ಪ್ರಸಾರಾಂಗದ ಮಾಜಿ ನಿರ್ದೇಶಕ ಪ್ರೊ.ಸಿ.ನಾಗಣ್ಣ, ಆಂಧ್ರ ಪ್ರದೇಶದ ಆದಾಯ ತೆರಿಗೆ ಇಲಾಖೆಯ ಪ್ರಧಾನ ಆಯುಕ್ತ ಜಯರಾಮ್ ರಾಯಪುರ, ಹಿಂದಿ ಪ್ರಾಧ್ಯಾಪಕ ಡಾ.ಜಿ.ಟಿ.ಪ್ರಭುಶಂಕರ್ ಪ್ರೇಮಿ, ಸಂದರ್ಶಕ ಪ್ರಾಧ್ಯಾಪಕ ಪ್ರೊ.ಕೆ.ಶಿವಾರೆಡ್ಡಿ, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಸಿ.ಎಂ.ನಾಗರಾಜ್, ಕುವೆಂಪು ವಿಚಾರ ವೇದಿಕೆ ಅಧ್ಯಕ್ಷ ಎಂ.ಸಿ.ನರೇಂದ್ರ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ಅಂದು ಮಧ್ಯಾಹ್ನ 3.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಉದ್ಘಾಟಿಸಲಿದ್ದಾರೆ. ಶ್ರೀ ಆದಿಚುಂಚನಗಿರಿ ಮಠದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ರಾಮಕೃಷ್ಣ ಆಶ್ರಮದ ಅಧ್ಯಕ್ಷ ಶ್ರೀ ಮುಕ್ತಿದಾನಂದ ಜೀ ಮಹಾರಾಜ್, ಸ್ಫಟಿಕಪುರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ಡಾ.ನಂಜಾವಧೂತ ಸ್ವಾಮೀಜಿ, ಮಾದಾರ ಚೆನ್ನಯ್ಯ ಗುರುಪೀಠದ ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಈ ವೇಳೆ ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ 'ತ್ರಿರಂಗ: ರಾಷ್ಟ್ರಕವಿ ಕುವೆಂಪು ಅವರ ಸಾಹಿತ್ಯ ಅವಲೋಕನ' ಕೃತಿಯನ್ನು ಬಿಡುಗಡೆಗೊಳಿಸಲಿದ್ದಾರೆ ಎಂದರು.

ಮುಖ್ಯ ಅತಿಥಿಗಳಾಗಿ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಸಚಿವ ಹೆಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಷಿ, ಗಜೇಂದ್ರಸಿಂಗ್ ಶೇಖಾವತ್, ವಿ.ಸೋಮಣ್ಣ, ಮಾಜಿ ಕೇಂದ್ರ ಸಚಿವ ಎಂ.ವೀರಪ್ಪ ಮೊಯ್ಲಿ, ರಾಜ್ಯ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಟಿ.ಬಿ.ಜಯಚಂದ್ರ, ಸಾಹಿತಿಗಳಾದ ಡಾ.ಚಂದ್ರಶೇಖರ್ ಕಂಬಾರ, ಡಾ.ಹಂಪ ನಾಗರಾಜಯ್ಯ, ಸಿ.ಪಿ.ಕೃಷ್ಣಕುಮಾರ್, ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಮಾಧವ್ ಕೌಶಿಕ್, ಸಂಸದರಾದ ಯದುವೀರ್ ಒಡೆಯರ್, ತೇಜಸ್ವಿಸೂರ್ಯ, ಡಾ.ಸಿ.ಎನ್.ಮಂಜುನಾಥ್, ಮಾಹಿತಿ ಹಕ್ಕು ಆಯೋಗದ ರಾಜ್ಯ ಆಯುಕ್ತ ಕೆ.ಎಂ. ಚಂದ್ರೇಗೌಡ, ಪ್ರಸಾರಂಗದ ಮಾಜಿ ನಿರ್ದೇಶಕ ಕೆ.ಟಿ.ವೀರಪ್ಪ, ಸೇರಿದಂತೆ ಮತ್ತಿತರರು ಆಗಮಿಸಲಿದ್ದಾರೆ ಎಂದರು.

ಹಿರಿಯ ಸಾಹಿತಿ ಡಾ.ಸಿ.ಪಿ.ಕೆ. ಮಾತನಾಡಿ, ಇದು ಕನ್ನಡದ ಡಿಂಡಿಮವನ್ನು ದೆಹಲಿಯಲ್ಲಿ ಬಾರಿಸುವ ಕಾರ್ಯಕ್ರಮವೂ ಆಗಿದೆ. ಬದುಕಿದ್ದಾಗಲೇ ಕುವೆಂಪು ಅವರಿಗೆ ಭಾರತ ರತ್ನ ಸಿಗ ಬೇಕಾಗಿತ್ತಾದರೂ, ಈಗ ಮರಣೋತ್ತರ ವಾಗಿಯಾದರೂ ಸಿಗಲೆಂಬ ಹೋರಾಟ ತಮ್ಮೆಲ್ಲರದಾಗಿದೆ. ಇದಕ್ಕೆ ಯಾರ ವಿರೋಧವೂ ವ್ಯಕ್ತವಾಗದೆಂಬ ಭಾವನೆ ತಮ್ಮದು ಎಂದರು.

ಹಿರಿಯ ಸಾಹಿತಿ ಡಾ.ಸಿ.ನಾಗಣ್ಣ ಮಾತನಾಡಿ, ಕುವೆಂಪು ಅವರ ಕರ್ಮಭೂಮಿ ಮೈಸೂರು ಆಗಿತ್ತು. ಹಲವಾರು ದಶಕ ಇಲ್ಲಿಯೇ ನೆಲೆಸಿ ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಇವರಿಗೆ ಭಾರತ ರತ್ನ ಎಂದೋ ಬರಬೇಕಾಗಿತ್ತು. ಬಾರದೇ ಇರಲು ಈ ಕುರಿತು ಈ ಹಿಂದೆ ಆಗೊಮ್ಮೆ ಈಗೊಮ್ಮೆ ಎದ್ದಿದ್ದ ಕ್ಷೀಣ ಧ್ವನಿ ಸಹಾ ಕಾರಣವಾಗಿರಬಹುದಾಗಿದೆ. ಆದರೆ ಈಗ ಇಡೀ ರಾಷ್ಟ್ರದ ಗಮನ ಅವರತ್ತ ಸೆಳೆದು ಭಾರತ ರತ್ನ ದಕ್ಕುವಂತೆ ಮಾಡುವ ನಿಟ್ಟಿನಲ್ಲಿ ಟ್ರಸ್ಟ್ ಮೊದಲಾದವು ಶ್ರಮಿಸುತ್ತಿವೆ ಎಂದರು.

ಸುದ್ದಿಗೋಷ್ಠಿಯಲ್ಲಿ ಪ್ರಸಾರಾಂಗದ ಮಾಜಿ ನಿರ್ದೇಶಕ ಕೆ.ಟಿ.ವೀರಪ್ಪ, ಡಾ. ಎಲ್.ದೇವೇಗೌಡ, ಒಕ್ಕಲಿಗ ವಿಕಾಸ ವೇದಿಕೆಯ ಹೆಚ್.ಎಲ್.ಯಮುನಾ ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಮೈಸೂರು: ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಉದ್ಯೋಗಿನಿ ಯೋಜನೆ, ಚೇತನ ಯೋಜನೆಗಳಿಗೆ ಸೇವಾಸಿಂಧು ಪೋರ್ಟಲ್‌ನಲ್ಲಿ ಅನ್‌ಲೈನ್ ಮೂಲಕ ಹಾಗೆಯೇ ಧನಶ್ರೀ ಯೋಜನೆ ಹಾಗೂ ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆಯಡಿ ಆನ್‌ಲೈನ್ ಹಾಗೂ ಆಫ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವವರು ಅರ್ಜಿಗಳನ್ನು ನಿಗದಿಪಡಿಸಿದ ಅವಧಿಯೊಳಗೆ, ಅಗತ್ಯ ದಾಖಲಾತಿಗಳೊಂದಿಗೆ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮೈಸೂರು ಇವರಿಗೆ ಸಲ್ಲಿಸುವುದು. ಬಾಪೂಜಿ ಸೇವಾ ಕೇಂದ್ರ, ಗ್ರಾಮ ಒನ್, ಬೆಂಗಳೂರು ಒನ್, ಕರ್ನಾಟಕ ಒನ್ ಕೇಂದ್ರಗಳಲ್ಲಿ https://sevasindhu.karnataka.gov.in ಮೂಲಕ ಡಿ.15 ಸಂಜೆ 5.30ರೊಳಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಪಠ್ಯ ಪುಸ್ತಕದಲ್ಲಿ ಸಂವಿಧಾನ ಅಳವಡಿಸುವಂತೆ ಕೇಂದ್ರ ಸಚಿವ ಹೆಚ್‌ಡಿಕೆ ಹೇಳಬೇಕಿತ್ತು

ಮೈಸೂರು ವಿವಿ ನಿವೃತ್ತ ಸಹಾಯಕ ಕುಲಸಚಿವ ವಿ.ತಿರುಮಲಸ್ವಾಮಿ ಅಭಿಪ್ರಾಯ

ಮೈಸೂರು, ಡಿ.7–ಸಂವಿಧಾನದಿಂದ ಎರಡು ಬಾರಿ ಮುಖ್ಯಮಂತ್ರಿ ಆಗಿರುವ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಭಗವದ್ಗೀತೆ ಪಠ್ಯಪುಸ್ತಕದಲ್ಲಿ ಅಳವಡಿಸುವ ಬದಲು ಸಂವಿಧಾನವನ್ನು 1ನೇ ತರಗತಿಯಿಂದ ಪಿಯುವರೆಗೆ ಕಲಿಸುವಂತೆ ಹೇಳಬೇಕಿತ್ತು ಎಂದು ಮೈಸೂರು ವಿವಿ ನಿವೃತ್ತ ಸಹಾಯಕ ಕುಲಸಚಿವ ವಿ.ತಿರುಮಲಸ್ವಾಮಿ ಅಭಿಪ್ರಾಯಪಟ್ಟಿದ್ದಾರೆ.

ಕುಮಾರಸ್ವಾಮಿ ಅವರು ಪಠ್ಯಪುಸ್ತಕದಲ್ಲಿ ಭಗವದ್ಗೀತೆ ಅಳವಡಿಸಿ ಎಂದು ನೀಡಿರುವ ಹೇಳಿಕೆ ಬೇಸರದ ಸಂಗತಿ. ಅವರು ಎರಡು ಸಲ ಸಿಎಂ ಸ್ಥಾನ ಪಡೆದಿದ್ದು, ಸಂವಿಧಾನದಿಂದಲೋ ಅಥವಾ ಭಗವದ್ಗೀತೆಯಿಂದಲೋ ಎಂದು ಸಮಾಜಕ್ಕೆ ತಿಳಿಸಬೇಕಿದೆ. ಸಂವಿಧಾನದ ಆರ್ಟಿಕಲ್ 163ರಲ್ಲಿ ಸರ್ಕಾರ ರಚಿಸಲು ಒಂದೇ ಪಕ್ಷದ ಬಹುಮತವಿಲ್ಲದಾಗ ಬೇರೊಂದು ಪಕ್ಷದ ಶಾಸಕರನ್ನು ಸೇರಿಸಿಕೊಂಡು ರಾಜ್ಯಪಾಲರಿಗೆ ಬಹುಮತ ತೋರಿಸಿ ಸರ್ಕಾರ ರಚಿಸಲು ಅವಕಾಶವಿದೆ. ಈ ರೀತಿ ಮಾಡಿ ಅವರು ಎರಡು ಬಾರಿ ಸಿಎಂ ಆಗಿದ್ದಾರೆ ಎಂದು ಹೇಳಿದ್ದಾರೆ. ಭಗವದ್ಗೀತೆ ಅಳವಡಿಕೆ ಮಾತಿನ ಹಿಂದೆ ಸ್ವಾರ್ಥ ರಾಜಕೀಯವಿದೆ. ಈ ಹಿನ್ನೆಲೆಯಲ್ಲಿ ಸಂವಿಧಾನದ ಸಂರಕ್ಷಕರಾಗಿ ಎಲ್ಲರೂ ಕೈ ಜೋಡಿಸಿ ಎಂದು ಪ್ರಕಟಣೆ ಮೂಲಕ ಆಗ್ರಹಿಸಿದ್ದಾರೆ.

'ಔದ್ಯೋಗಿಕ ದೃಷ್ಟಿಕೋನದಲ್ಲಿ ಖನಿಜ ಸಂಪನ್ಮೂಲಗಳು' ಕುರಿತು ಬೋಧನಾ ಸುಧಾರಣಾ ಕಾರ್ಯಕ್ರಮ



ಮಾನಸಗಂಗೋತ್ರಿ ಭೂ ವಿಜ್ಞಾನ ಅಧ್ಯಯನ ವಿಭಾಗದ ಎಂಎನ್‌ವಿ ಸಭಾಂಗಣದಲ್ಲಿ ಮಾಳವೀಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದ ಸಹಯೋಗದಲ್ಲಿ ಏರ್ಪಡಿಸಿದ್ದ 'ಔದ್ಯೋಗಿಕ ದೃಷ್ಟಿಕೋನದಲ್ಲಿ ಖನಿಜ ಸಂಪನ್ಮೂಲಗಳು' ಕುರಿತ ಬೋಧನಾ ಸುಧಾರಣೆ ಕಾರ್ಯಕ್ರಮವನ್ನು ವಿವಿ ಕುಲಸಚಿವೆ ಎಂ.ಕೆ.ಸವಿತಾ ಉದ್ಘಾಟಿಸಿದರು.

ಮೈಸೂರು,ಡಿ.7(ಜಿಎ)–ಖನಿಜ ಸಂಪನ್ಮೂಲಗಳು ಹಾಗೂ ಉದ್ಯಮಗಳಿಗೆ ಅವಿನಾಭಾವ ಸಂಬಂಧವಿದೆ. ಎಲ್ಲಿ ಖನಿಜಗಳು ದೊರೆಯುತ್ತವೆ ಅಂತಹ ಕಡೆಯಲ್ಲಿ ಕೈಗಾರಿಕೆಗಳು ಸ್ಥಾಪನೆಯಾಗುತ್ತವೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಈಗಾಗಲೇ ಸ್ಥಾಪನೆಯಾಗಿ ಕಾರ್ಯಾಚರಣೆ ಮಾಡುತ್ತಿರುವ ಉದ್ಯಮಗಳನ್ನು ಕೂಲಂಕುಷವಾಗಿ ಅಧ್ಯಯನ ನಡೆಸಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ.ಸವಿತಾ ಸಲಹೆ ನೀಡಿದರು.

ಮಾನಸಗಂಗೋತ್ರಿಯ ಭೂ ವಿಜ್ಞಾನ ಅಧ್ಯಯನ ವಿಭಾಗದ ಎಂಎನ್‌ವಿ ಸಭಾಂಗಣದಲ್ಲಿ ಮಾಳವೀಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದ ಸಹಯೋಗದಲ್ಲಿ ಏರ್ಪಡಿಸಿದ್ದ 'ಔದ್ಯೋಗಿಕ ದೃಷ್ಟಿಕೋನದಲ್ಲಿ ಖನಿಜ ಸಂಪನ್ಮೂಲಗಳು' ಕುರಿತ ಬೋಧನಾ ಸುಧಾರಣೆ ಕಾರ್ಯಕ್ರಮವನ್ನು ಉದ್ಘಾಟಿಸಿದ ಅವರು, ಭೂ ವಿಜ್ಞಾನವನ್ನು ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಭೂಮಿಯ ಒಡಲಲ್ಲಿ ದೊರೆಯುವ ಖನಿಜ ಸಂಪನ್ಮೂಲಗಳ ಬಗ್ಗೆ ಸಂಪೂರ್ಣ ಅರಿವು ಅಗತ್ಯವಾಗಿದೆ ಎಂದರು.

ಉದ್ಯಮ ಎಲ್ಲಿ ಸ್ಥಾಪನೆಯಾಗಿದೆ. ಕಚ್ಚಾ ಪದಾರ್ಥ ಸಿಗುವ ಕಡೆ ಸ್ಥಾಪನೆಯಾಗಿರುವುದೇ, ಖನಿಜಗಳು ಸಿಗುವ ಕಡೆ ಇದಿಯೇ ಅಥವಾ ಮಾರುಕಟ್ಟೆಯು ಚನ್ನಾಗಿ ಇರುವ ಜಾಗದಲ್ಲಿ ಕಾರ್ಯಾರಂಭ ಮಾಡಿರುವುದೇ ಎನ್ನುವುದನ್ನು ತಿಳಿದುಕೊಳ್ಳಬೇಕು. ಏಕೆಂದರೆ ಖನಿಜಕ್ಕೆ ಸಂಬಂಧಿಸಿದ ಉದ್ಯಮಗಳಾದರೂ ಅವರ ಅನುಕೂಲಕ್ಕೆ ತಕ್ಕಂತೆ ಬೇರೆ–ಬೇರೆ ಕಡೆ ಸ್ಥಾಪನೆ ಮಾಡಿಕೊಂಡಿರುತ್ತಾರೆ. ಆದ್ದರಿಂದ ಇವುಗಳನ್ನು ತಿಳಿದುಕೊಳ್ಳುವುದು ಅಗತ್ಯ ಎಂದು ತಿಳಿಸಿದರು.

ರಾಷ್ಟ್ರೀಯ ಉಚ್ಚತ್ತರ್ ಶಿಕ್ಷಾ ಅಭಿಯಾನ ವತಿಯಿಂದ ಮೈಸೂರು ವಿಶ್ವವಿದ್ಯಾನಿಲಯದ ಅನೇಕ ವಿಭಾಗಗಳಲ್ಲಿ ಕಾರ್ಯಾಗಾರಗಳು ನಡೆಯುತ್ತಿದ್ದು, ಇವು ಯಶಸ್ವಿಯಾಗಬೇಕಾದರೆ, ಇದರಲ್ಲಿ ಭಾಗವಹಿಸುವವರು ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕು. ಸಂಪನ್ಮೂಲ ವ್ಯಕ್ತಿಗಳು ವಿಷಯ ನಿರೂಪಣೆ ಮಾಡುವಾಗ ಆಸಕ್ತಿಯಿಂದ ಕೇಳುವುದಲ್ಲದೇ, ಅಗತ್ಯವಾದ ಕಡೆ ಟಿಪ್ಪಣಿಗಳನ್ನು ಮಾಡಿಕೊಳ್ಳಬೇಕು. ಈ ರೀತಿ ಮಾಡುವುದರಿಂದ ಸಂಪನ್ಮೂಲ ವ್ಯಕ್ತಿಗಳಿಗೆ ಇನ್ನೂ ಹೆಚ್ಚಿನ ಉತ್ಸಾಹ ಬಂದು ವಿಷಯಗಳ ಆಳಕ್ಕೆ ಪ್ರವೇಶ ಮಾಡುತ್ತಾರೆ ಎಂದರು. ಕಾರ್ಯಕ್ರಮದಲ್ಲಿ ಭೂ ವಿಜ್ಞಾನ ಅಧ್ಯಯನ ವಿಭಾಗದ ಪ್ರೊ.ಡಿ.ನಾಗರಾಜು, ಪ್ರೊ.ಸುರೇಶ್‌ಕುಮಾರ್, ಪ್ರೊ.ಪ್ರಕಾಶ್ ನರಸಿಂಹ ಉಪಸ್ಥಿತರಿದ್ದರು.

ಒಮ್ಮೆ ಕಿರುತೆರೆಯಲ್ಲಿ ಕಾಣಿಸಿಕೊಂಡ ಯುವ ಕಲಾವಿದರು ಮತ್ತೆ ರಂಗಭೂಮಿಗೆ ವಾಪಸ್ ಬರಲು ಒಪ್ಪುವುದಿಲ್ಲ


ಹಿರಿಯ ರಂಗಕರ್ಮಿ ಶ್ರೀನಿವಾಸ ಕಪ್ಪಣ ಬೇಸರ

ಮೈಸೂರು, ಡಿ.7(ಎಸ್‌ಪಿಎನ್)–ಒಮ್ಮೆ ಕಿರುತೆರೆಯಲ್ಲಿ ಕಾಣಿಸಿಕೊಂಡ ಯುವ ಕಲಾವಿದರು ಮತ್ತೆ ರಂಗಭೂಮಿಗೆ ವಾಪಸ್ ಬರಲು ಒಪ್ಪುವುದಿಲ್ಲ. ಇದು ಬೇಸರ ಸಂಗತಿ ಎಂದು ಹಿರಿಯ ರಂಗಕರ್ಮಿ ಶ್ರೀನಿವಾಸ ಜಿ.ಕಪ್ಪಣ್ಣ ಅಭಿಪ್ರಾಯಪಟ್ಟರು.

ಮೈಸೂರು ರಂಗಾಯಣ ಆವರಣದ ಶ್ರೀರಂಗ ರಂಗಮಂದಿರದಲ್ಲಿ ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ವತಿಯಿಂದ ಏರ್ಪಡಿಸಿದ್ದ ರಂಗಭೂಮಿಯ 'ನೆನ್ನೆ ನಾಳೆಗಳ ನಡುವೆ ನೆನಪಿನಂಗಳದಲ್ಲಿ ಹಿರಿಯ ರಂಗಕರ್ಮಿ ಶ್ರೀನಿವಾಸ ಜಿ. ಕಪ್ಪಣ್ಣ ಮತ್ತು ನಾವು–ನೀವು' ಸಂವಾದದಲ್ಲಿ ಪಾಲ್ಗೊಂಡು ಮಾತನಾಡಿದರು.

ನಾನು ರಂಗಭೂಮಿಯಲ್ಲಿ ತೊಡಗಿಸಿಕೊಂಡು ಸುಮಾರು 50 ವರ್ಷಗಳು ಪೂರೈಸಿದೆ. ಈ ಅವಧಿಯಲ್ಲಿ ಸುಮಾರು 32ಕ್ಕೂ ಹೆಚ್ಚು ನಾಟಕಗಳನ್ನು ನಿರ್ದೇಶನ ಮಾಡಿ, ಪ್ರದರ್ಶಿಸಿದ್ದೇನೆ. ಅದರಲ್ಲಿ ಕಾಕನಕೋಟೆ, ತುಘಲಕ್ ನಾಟಕಗಳು ರಂಗಭೂಮಿಯಲ್ಲಿ ಹೆಸರು ತಂದುಕೊಟ್ಟಿತು ಎಂದು ಹಳೆಯ ದಿನಗಳನ್ನು ನೆನೆಪಿಸಿಕೊಂಡರು.

ಹಿರಿಯ ರಂಗಕರ್ಮಿ ಪ್ರೊ.ಬಿ.ಚಂದ್ರಶೇಖರ ಅವರ ಗರಡಿಯಲ್ಲಿ ಪಳಗಿದ್ದೇನೆ. ಇವರ ಜೊತೆ ಕೆಲಸ ಮಾಡುವಾಗ ಸೇರಿದಂತೆ ಇತರೆ ಹಿರಿಯ ನಿರ್ದೇಶಕರೊಂದಿಗೆ ಕೆಲಸ ಮಾಡಿದ್ದೇನೆ. 'ಎಲ್ಲಾ ನನ್ ಮಕ್ಕಳೇ', ಅಧಃಪಾತಾಳ, ಚಿಕ್ಕವೀರ ರಾಜೇಂದ್ರ ಮತ್ತು ಕುರುಡು ಕಾಂಚಾಣ, ಕಾಕನಕೋಟೆ ಸೇರಿದಂತೆ ಒಟ್ಟು 32 ನಾಟಕಗಳನ್ನು ನಿರ್ದೇಶಿಸಿ, ಪ್ರದರ್ಶನ ಕೊಟ್ಟಿದ್ದೇವೆ ಎಂದು ಮಾಹಿತಿ ನೀಡಿದರು.



ಸಂವಾದದಲ್ಲಿ ಹಿರಿಯ ರಂಗಕರ್ಮಿ ಶ್ರೀನಿವಾಸ ಜಿ. ಕಪ್ಪಣ್ಣ ಮಾತನಾಡುತ್ತಿರುವುದು.

ಜನಪ್ರಿಯ ಟಿವಿ ಧಾರಾವಾಹಿಗಳಾದ ಮಾಲ್ಗುಡಿ ಡೇಸ್, ಮುಕ್ತ ಹಾಗೂ ಮುಕ್ತಮುಕ್ತ ಧಾರಾವಾಹಿಗಳಲ್ಲೂ ಕೆಲಸ ಮಾಡಿದ್ದೇನೆ. ಕಿರುತೆರೆ ನಿರ್ದೇಶಕ ಟಿ.ಎನ್.ಸೀತಾರಾಂ ಅವರೊಂದಿಗೆ ಮುಕ್ತಮುಕ್ತ ಧಾರಾವಾಹಿಯ ಸಂವಾದದಲ್ಲಿ ಕಾರ್ಯಕ್ರಮ ನಿರೂಪಣೆ ಮಾಡುವ ಸಂದರ್ಭದಲ್ಲಿ ನನಗೆ ವೈಯಕ್ತಿಕ ಹೆಸರು ತಂದು ಕೊಟ್ಟ ಕಾರ್ಯಕ್ರಮವಾಗಿದೆ. ಡಾ.ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ನಾಟಕ ಆಧಾರಿತ ಕಾಕನಕೋಟೆ ಸಿನಿಮಾದಲ್ಲಿ ನಿರ್ಮಾಪಕನಾಗಿ ಕೆಲಸ ಮಾಡಿದ ಅನುಭವವಿದೆ ಎಂದು ತಿಳಿಸಿದರು.

ನನ್ನ ವ್ಯಾಸಂಗ ಅವಧಿಯಲ್ಲಿ ಕಾಲೇಜು ನಾಟಕದಲ್ಲಿ ಅಭಿನಯ ಮಾಡುತ್ತಿದ್ದೆ. ತದನಂತರ ಲೈಟಿಂಗ್ ವಿಭಾಗದಲ್ಲೆ ಕೆಲಸ ಮಾಡಿ, ನಾಟಕದ ಬೇರೆ ಬೇರೆ ವಿಭಾಗದಲ್ಲಿ ಕೆಲಸ ಮಾಡಿದ ಅನುಭವನ್ನು ಬಿಚ್ಚಿಟ್ಟರು. ಈ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆಯ ಮಾಧವ ಖರೆ ಸಂವಾದ ನಡೆಸಿಕೊಟ್ಟರು.

ದೇಶ - ವಿದೇಶ

ಮನೆಗೆ ಬೆಂಕಿ: ಗಾಯಗೊಂಡಿದ್ದ ಭಾರತೀಯ ವಿದ್ಯಾರ್ಥಿನಿ ಸಾವು

ನ್ಯೂಯಾರ್ಕ್: ಅಮೆರಿಕದ ಆಲ್ಬನಿಯಲ್ಲಿ ಸಂಭವಿಸಿದ ಅಗ್ನಿ ದುರಂತದಲ್ಲಿ ತೆಲಂಗಾಣ ಮೂಲದ ವಿದ್ಯಾರ್ಥಿನಿಯೊಬ್ಬಳು ಸಾವನ್ನಪ್ಪಿದ್ದಾಳೆ.



ಅಗ್ನಿ ಅವಘಡದಲ್ಲಿ ಸಾವನ್ನಪ್ಪಿದ ವಿದ್ಯಾರ್ಥಿನಿಯನ್ನು ತೆಲಂಗಾಣದ ಜನಗಾಂವ್ ಜಿಲ್ಲೆಯ ಸಹಜಾ ರೆಡ್ಡಿ ಎಂದು ಗುರುತಿಸಲಾಗಿದೆ. ಮೊದಲಿಗೆ ಬೆಂಕಿ ಪಕ್ಕದ ಕಟ್ಟಡದಲ್ಲಿ ಕಾಣಿಸಿಕೊಂಡಿದ್ದು, ಸಹಜಾಳ ಮನೆಗೆ ವ್ಯಾಪಿಸಿತ್ತು. ಬೆಂಕಿ ಹೊತ್ತಿಕೊಂಡಾಗ ಆಕೆ ನಿದ್ರೆಯಲ್ಲಿದ್ದಿದ್ದರಿಂದ ಬಚಾವ್ ಆಗಲು ಸಾಧ್ಯವಾಗಿಲ್ಲ ಎಂದು ವರದಿಯಾಗಿದೆ. ಈ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಭಾರತದ ಕಾನ್ಸುಲೇಟ್ ಜನರಲ್, ಆಲ್ಬನಿಯಲ್ಲಿ ನಡೆದ ಮನೆಯಲ್ಲಿ ಬೆಂಕಿ ಕಾಣಿಸಿಕೊಂಡ ಘಟನೆಯಲ್ಲಿ ಪ್ರಾಣ ಕಳೆದುಕೊಂಡ ಭಾರತೀಯ ಮೂಲದ ಸಹಜರೆಡ್ಡಿ ಉದುಮಲ ಅವರ ಅಕಾಲಿಕ ನಿಧನದಿಂದ ನಾವು ತೀವ್ರ ದುಃಖಿತರಾಗಿದ್ದೇವೆ. ಈ ಬಗ್ಗೆ ತೀವ್ರ ಸಂತಾಪ ವ್ಯಕ್ತಪಡಿಸಿದೆ. ಹೈದರಾಬಾದ್‌ನಲ್ಲಿ ಟಿಸಿಎಸ್‌ನಲ್ಲಿ ಉದ್ಯೋಗಿಯಾಗಿರುವ ಉದುಮುಲ ಜಯಕರ್ ರೆಡ್ಡಿ ಮತ್ತು ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕಿ ಗೋಪು ಮರಿಯಾ ಶೈಲಜಾ ಅವರ ಹಿರಿಯ ಮಗಳಾಗಿದ್ದು, ಸಹಜಾ 2021ರಲ್ಲಿ ಉನ್ನತ ಶಿಕ್ಷಣಕ್ಕಾಗಿ ಅಮೆರಿಕಕ್ಕೆ ತೆರಳಿದ್ದರು.

ಮದುವೆ ಸಮಾರಂಭದಲ್ಲಿ ನೃತ್ಯ ಮಾಡುತ್ತಿದ್ದಾಗ ಛಾವಣಿ ಕುಸಿತ


ಚುರಾ (ಹಿಮಾಚಲ ಪ್ರದೇಶ): ಹಿಮಾಚಲ ಪ್ರದೇಶದ ಚುರಾ ವಿಧಾನಸಭಾ ಕ್ಷೇತ್ರದ ಜುಂಗ್ರಾ ಗ್ರಾಮಪಂಚಾಯತ್‌ಗೆ ಸೇರಿದ ಶಹ್ವಾ ಗ್ರಾಮದಲ್ಲಿ ಶನಿವಾರ ಸಂಜೆ ನಡೆದ ವಿವಾಹ ಸಮಾರಂಭ ದಲ್ಲಿ ಭಯಾನಕ ದುರಂತ ಸಂಭವಿಸಿದೆ. ಸಾಂಪ್ರದಾಯಿಕ



ಮಣ್ಣಿನ ಮನೆಯ ಛಾವಣಿಯ ಮೇಲೆ ಸುಮಾರು 100ಕ್ಕೂ ಹೆಚ್ಚು ಜನರು ನೃತ್ಯ ಮಾಡುತ್ತಿದ್ದಾಗ ಇದ್ದಕ್ಕಿದ್ದಂತೆ ಛಾವಣಿ ದೊಡ್ಡ ಭಾಗ ಕುಸಿದು ಬಿದ್ದಿದೆ. ಛಾವಣಿ ಕುಸಿದ ಈ ದುರಂತದಲ್ಲಿ ಸುಮಾರು 25ಕ್ಕೂ ಹೆಚ್ಚು ಜನರು ಅವಶೇಷಗಳ ಅಡಿಯಲ್ಲಿ ಸಿಲುಕಿ ಗಾಯಗೊಂಡಿದ್ದಾರೆ. ವಧು–ವರನ ಕುಟುಂಬದ ಸದಸ್ಯರು ಮತ್ತು ಸ್ನೇಹಿತರು ಛಾವಣಿ ಮೇಲೆ ನೃತ್ಯ ಮಾಡುತ್ತಿದ್ದಾಗ ಕುಸಿದು ಬಿದ್ದಿದೆ. ಸಾಂಪ್ರದಾಯಿಕ ಮಣ್ಣಿನ ಮನೆ ದುರ್ಬಲಗೊಂಡಿದ್ದ ಕಾರಣ ಇದ್ದಕ್ಕಿದ್ದಂತೆ ಕುಸಿತ ಸಂಭವಿಸಿದೆ. ಸ್ಥಳೀಯ ಯುವಕರು ಮತ್ತು ನಿವಾಸಿಗಳು ತಕ್ಷಣವೇ ರಕ್ಷಣಾ ಕಾರ್ಯಕ್ಕೆ ಮುಂದಾದರು. ಕೈಗೆ ಸಿಕ್ಕ ಸಿಕ್ಕ ಸಾಧನಗಳನ್ನು ಬಳಸಿಕೊಂಡು ಅವಶೇಷಗಳನ್ನು ತೆರವುಗೊಳಿಸಿ, ಸಿಲುಕಿದ್ದ ಎಲ್ಲ 25ಕ್ಕೂ ಹೆಚ್ಚು ಜನರನ್ನೂ ಸುರಕ್ಷಿತವಾಗಿ ಹೊರತಂದರು.

ಅಮೆರಿಕದ ಅಲಾಸ್ಕಾದಲ್ಲಿ 7.0 ತೀವ್ರತೆಯ ಭೂಕಂಪ, ಕೆನಡಾದ ಗಡಿವರೆಗೂ ಕಂಪನದ ಅನುಭವ


ಅಲಾಸ್ಕಾ: ಅಲಾಸ್ಕಾ–ಕೆನಡಾ ಗಡಿಯ ಬಳಿ 7.0 ತೀವ್ರತೆಯ ಪ್ರಬಲ ಭೂಕಂಪ ಸಂಭವಿಸಿದ್ದು, ಯುಎಸ್ ಭೂ ವೈಜ್ಞಾನಿಕ ಸಮೀಕ್ಷೆ (ಯುಎಸ್‌ಜಿಎಸ್) ಪ್ರಕಾರ ಕೇಂದ್ರ ಬಿಂದುವು ಅಲಾಸ್ಕಾದ



ರಾಜಧಾನಿ ಜುನೌದಿಂದ ವಾಯುವ್ಯಕ್ಕೆ ಸುಮಾರು 370 ಕಿಲೋಮೀಟರ್ ದೂರದಲ್ಲಿ ಮತ್ತು ಕೆನಡಾದ ವೈಟ್ ಹಾರ್ಸ್‌ನಿಂದ ಪಶ್ಚಿಮಕ್ಕೆ ಸುಮಾರು 250 ಕಿಲೋ ಮೀಟರ್ ದೂರದಲ್ಲಿತ್ತು. ಕಂಪನವು ಎಷ್ಟು ಪ್ರಬಲವಾಗಿತ್ತೆಂದರೆ ಸಾವಿರಾರು ಕಿಲೋಮೀಟರ್ ದೂರದ ಜನರು ಭೂಮಿ ಕಂಪಿಸುತ್ತಿರುವಂತೆ ಅನುಭವಿಸಿದರು. ಈ ಭೂಕಂಪದಿಂದ ಯಾವುದೇ ಸುನಾಮಿ ಬೆದರಿಕೆ ಇಲ್ಲ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ. ಕೆನಡಾದ ವೈಟ್ ಹೌಸ್‌ನಲ್ಲಿರುವ ರಾಯಲ್ ಕೆನಡಿಯನ್ ಮೌಂಟೆಡ್ ಪೊಲೀಸ್ ಅಧಿಕಾರಿ ಕ್ಯಾಲಿಸ್ಟಾ ಮ್ಯಾಕ್‌ಲಿಯೋಡ್ ಭೂಕಂಪದ ನಂತರ ತಕ್ಷಣವೇ ತುರ್ತು ಕರೆಗಳನ್ನು ಸ್ವೀಕರಿಸಿದ್ದಾರೆ ಎಂದು ವರದಿ ಮಾಡಿದ್ದಾರೆ.

ದಕ್ಷಿಣ ಆಫ್ರಿಕಾದಲ್ಲಿ ಹಾಸ್ಟೆಲ್‌ಗೆ ನುಗ್ಗಿ ಗುಂಡಿನ ದಾಳಿ; ಮೂವರು ಮಕ್ಕಳು ಸೇರಿ 11 ಮಂದಿ ಸಾವು

ಪ್ರಿಟೋರಿಯಾ: ದಕ್ಷಿಣ ಆಫ್ರಿಕಾದ ರಾಜಧಾನಿ ಪ್ರಿಟೋರಿಯಾದಲ್ಲಿ ಶನಿವಾರ ಹಾಸ್ಟೆಲ್‌ವೊಂದಕ್ಕೆ ನುಗ್ಗಿದ ಬಂದೂಕುಧಾರಿಗಳು, ಮನಬಂದಂತೆ ಗುಂಡಿನ ದಾಳಿ ನಡೆಸಿದ್ದಾರೆ. ದಾಳಿಯಲ್ಲಿ ಮೂವರು



ಮಕ್ಕಳು ಸೇರಿದಂತೆ 11 ಜನ ಸಾವನ್ನಪ್ಪಿದ್ದಾರೆ.

ಸಾವನ್ನಪ್ಪಿದ 11 ಜನರಲ್ಲಿ 3 ವರ್ಷದ ಬಾಲಕ, 12 ವರ್ಷದ ಬಾಲಕ ಮತ್ತು 16 ವರ್ಷದ ಬಾಲಕಿ ಕೂಡ ಸೇರಿದ್ದಾರೆ. 14 ಜನರು ಗುಂಡೇಟಿನಿಂದ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ದಕ್ಷಿಣ ಆಫ್ರಿಕಾವನ್ನೇ ಬೆಚ್ಚಿಬೀಳಿಸಿದ ಈ ಸಾಮೂಹಿಕ ಗುಂಡಿನ ದಾಳಿಯಲ್ಲಿ ಒಟ್ಟು 25 ಜನರ ಮೇಲೆ ಗುಂಡು ಹಾರಿಸಲಾಗಿದೆ ಎಂದು ಪೊಲೀಸ್ ವಕ್ತಾರೆ ಅಥ್ಲೆಂಡಾ ಮಾಥೆ ಹೇಳಿದ್ದಾರೆ. ಇದು ತುಂಬಾ ದುರದೃಷ್ಟಕರ ಘಟನೆ. ಈ ಘಟನೆಯ ಬಗ್ಗೆ ಪೊಲೀಸರಿಗೆ ಸಂಜೆ 6 ಗಂಟೆ ಸುಮಾರಿಗೆ ಮಾಹಿತಿ ನೀಡಲಾಗಿತ್ತು. ದಾಳಿ ಕಾರಣ ಇನ್ನೂ ತಿಳಿದು ಬಂದಿಲ್ಲ ಮತ್ತು ಯಾರನ್ನೂ ಬಂಧಿಸಲಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

2ನೇ ಮದುವೆಗೆ ಪತಿ ಸಿದ್ಧತೆ: ನ್ಯಾಯಕ್ಕಾಗಿ ಪ್ರಧಾನಿ ಮೋದಿ ಬೇಡಿದ ಪಾಕ್ ಮಹಿಳೆ

ನವದೆಹಲಿ: ಕರಾಚಿಯಲ್ಲಿ ತನ್ನನ್ನು ಕೈಬಿಟ್ಟ ಪತಿ ದೆಹಲಿಯಲ್ಲಿ ರಹಸ್ಯವಾಗಿ ಎರಡನೇ ಮದುವೆಗೆ ಸಿದ್ಧತೆಗೆ ನಡೆಸಿದ್ದಾರೆ ಎಂದು ಪಾಕಿಸ್ತಾನದ ಮಹಿಳೆಯೊಬ್ಬರು ಆರೋಪಿಸಿದ್ದಾರೆ.



ನಿಕಿತಾ ನಾಗ್ದೇವ್ ಎಂದು ಗುರುತಿಸಲಾದ ಮಹಿಳೆ ಪ್ರಧಾನಿ ನರೇಂದ್ರ ಮೋದಿಯವರಿಂದ ನ್ಯಾಯ ಕೋರಿ ಹತಾಶೆಯ ವೀಡಿಯೊವೊಂದನ್ನು ಬಿಡುಗಡೆ ಮಾಡಿದ್ದಾರೆ. ಕರಾಚಿಯ ನಿವಾಸಿ ನಿಕಿತಾ, ದೀರ್ಘಾವಧಿಯ ವೀಸಾದಲ್ಲಿ ಇಂದೋರ್‌ನಲ್ಲಿ ವಾಸಿಸುತ್ತಿರುವ ಪಾಕಿಸ್ತಾನಿ ಮೂಲದ ವ್ಯಕ್ತಿ ವಿಕ್ರಮ್ ನಾಗ್ದೇವ್ ಅವರನ್ನು ಜನವರಿ 26, 2020 ರಂದು ಹಿಂದೂ ಪದ್ಧತಿಗಳ ಪ್ರಕಾರ ಕರಾಚಿಯಲ್ಲಿ ವಿವಾಹವಾಗಿರುವುದಾಗಿ ಆರೋಪಿಸಿದ್ದಾರೆ. ಇಂದು ನ್ಯಾಯ ಸಿಗದಿದ್ದರೆ ಮಹಿಳೆಯರು ನ್ಯಾಯದ ಮೇಲಿನ ನಂಬಿಕೆಯನ್ನು ಕಳೆದುಕೊಳ್ಳುತ್ತಾರೆ. ಅನೇಕ ಹುಡುಗಿಯರು ತಮ್ಮ ವೈವಾಹಿಕ ಮನೆಗಳಲ್ಲಿ ದೈಹಿಕ ಮತ್ತು ಮಾನಸಿಕ ಕಿರುಕುಳ ಎದುರಿಸುತ್ತಾರೆ. ಎಲ್ಲರೂ ನನ್ನೊಂದಿಗೆ ನಿಲ್ಲಬೇಕೆಂದು ನಾನು ವಿನಂತಿಸುತ್ತೇನೆ ಎಂದು ಅವರು ಮನವಿ ಮಾಡಿದ್ದಾರೆ.

ಮಡಿಕೇರಿಯಲ್ಲಿ ಅರ್ಥಪೂರ್ಣ ಧ್ವಜ ದಿನಾಚರಣೆ

ಮಡಿಕೇರಿ, ಡಿ.7– ರಾಷ್ಟ್ರದ ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ ನಗರದ ಸನ್ನಿಸೈಡ್ ಆವರಣದಲ್ಲಿರುವ 'ಅಮರ್ ಜವಾನ್' ಯುದ್ಧ ಸ್ಮಾರಕದಲ್ಲಿ ಅರ್ಥಪೂರ್ಣವಾಗಿ ನಡೆಯಿತು. ಕೊಡಗು ಜಿಲ್ಲಾಡಳಿತ, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಅಮರ್ ಜವಾನ್ ಯುದ್ಧ ಸ್ಮಾರಕಕ್ಕೆ ಮೇಜರ್ ಜನರಲ್ ಕಾಳೆಂಗಡ ಸಿ. ಕಾರ್ಯಪ್ಪ ಏರ್‌ಮಾರ್ಷಲ್ ನಂದಾ ಕಾರ್ಯಪ್ಪ ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಬಾರಿಕೆ ದಿನೇಶ್ ಕುಮಾರ್, ಗ್ರೂಪ್ ಕ್ಯಾಪ್ಟನ್ ಮನು ಭೀಮಯ್ಯ, ಏರ್ ಕಮಾಂಡರ್ ದೇವಯ್ಯ, ಲೆ.ಕರ್ನಲ್ ಕಾವೇರಪ್ಪ, ಕರ್ನಲ್ ನಾಚಪ್ಪ ಮತ್ತಿತ್ತರರು ಪುಷ್ಪ ಗುಚ್ಛ ಅರ್ಪಿಸಿ ಸೆಲ್ಯೂಟ್ ಮಾಡುವ ಮೂಲಕ ವೀರ ಯೋಧರಿಗೆ ಗೌರವ ನಮನ ಸಲ್ಲಿಸಿದರು.

ದೇಶ ಸೇವೆ ಸಂದರ್ಭ ವೀರ ಮರಣವನ್ನಪ್ಪಿದ ಯೋಧರ ಸ್ಮರಣಾರ್ಥ 2 ನಿಮಿಷಗಳ ಕಾಲ ಮೌನಾ ಚರಣೆ ನಡೆಸಲಾಯಿತು. ಕೊಡಗು ಪೊಲೀಸ್ ತಂಡ 3 ಸುತ್ತು ಕುಶಲ ತೋಪು ಸಿಡಿಸಿ ಗೌರವ ವಂದನೆ ಸಲ್ಲಿಸಿದರು. ಮೇ.ಜ. ಕೆ.ಸಿ.ಕಾರ್ಯಪ್ಪ ಅವರು ಸಶಸ್ತ್ರ ಪಡೆಗಳ ಧ್ವಜದ ಸ್ಟ್ಯಾಂಪ್ ಅನ್ನು ಬಿಡುಗಡೆಗೊಳಿಸಿದರು. ಜಿಲ್ಲಾ ಪೊಲೀಸ್ ತಂಡ ಬ್ಯಾಂಡ್ ಬಾರಿಸುವ ಮೂಲಕ ಗೌರವ ಸಲ್ಲಿಸಿದರು. ಮಾಜಿ ಸೈನಿಕರು, ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳು,


ಮೇಜರ್ ಜನರಲ್ ಕಾಳೆಂಗಡ ಸಿ.ಕಾರ್ಯಪ್ಪ ಯುದ್ಧ ಸ್ಮಾರಕಕ್ಕೆ ಪುಷ್ಪಗುಚ್ಛ ಅರ್ಪಿಸಿ ಸೆಲ್ಯೂಟ್ ಮಾಡುತ್ತಿರುವುದು

ಎನ್‌ಸಿಸಿ ವಿದ್ಯಾರ್ಥಿಗಳು ಯುದ್ಧ ಸ್ಮಾರಕಕ್ಕೆ ಗೌರವ ಸಲ್ಲಿಸಿದರು.

ಮೇ.ಜ. ಕೆ.ಸಿ.ಕಾರ್ಯಪ್ಪ, ಸೇನೆಗೆ ಸೇರುವವರಲ್ಲಿ ಪಂಜಾಬ್ ಪ್ರಥಮ ಸ್ಥಾನದಲ್ಲಿ, ಕೊಡಗು ಜಿಲ್ಲೆ 3ನೇ ಸ್ಥಾನದಲ್ಲಿದೆ ಈ ಹಿಂದೆ ಜಿಲ್ಲೆಯಿಂದ ಸೇನೆಗೆ ಹೆಚ್ಚಿನ ಸಂಖ್ಯೆಯಲ್ಲಿ ಸೇರ್ಪಡೆ ಆಗುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ವಿವಿಧ ಕಾರಣಗಳಿಂದ ಸೇನೆಗೆ ಸೇರ್ಪಡೆ ಆಗುವವರ ಸಂಖ್ಯೆ ಕಡಿಮೆಯಾಗುತ್ತಿದೆ ಎಂದು ಮೇ.ಜ. ಕೆ.ಸಿ.ಕಾರ್ಯಪ್ಪ ವಿಷಾದಿಸಿದರು. ಯುವ ಸಮೂಹ ಹೆಚ್ಚಿನ ಸಂಖ್ಯೆಯಲ್ಲಿ ಭಾರತೀಯ ಸೇನೆಗೆ ಸೇರುವಂತಾಗಬೇಕು ಎಂದು ಅವರು ಕರೆ ನೀಡಿದರು.

ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಬಿ.ಆರ್.ಶೆಟ್ಟಿ, ಜಿಲ್ಲಾ ಖಜಾನಾ ಧಿಕಾರಿ ರಘುನಾಥ್, ನಿವೃತ್ತ ಸೈನಾಧಿಕಾರಿಗಳು, ಎನ್‌ಸಿಸಿ ವಿದ್ಯಾರ್ಥಿಗಳು, ವಿವಿಧ ಸಂಘಟನೆಗಳ ಪ್ರಮುಖರು ಹಾಜರಿದ್ದರು.

ಬಿದ್ದಾಟಂಡ ವಾಡೆ ನೂರಂಬಡ ನಾಡ್ ಮಂದ್‌ನಲ್ಲಿ ಹುತ್ತರಿ ಕೋಲಾಟ

ನಾಪೋಕ್ಲು, ಡಿ.7(ದುಗ್ಗಳ)–ಇಗ್ಗುತ್ತಪ್ಪ ದೇವಡ ಪುತ್ತರಿ ನಮ್ಮೆ ಪೊಯಿಲೆ ಪೊಯಿಲೆ' ಘೋಷಣೆಯೊಂದಿಗೆ ಸಮೀಪದ ಬಿದ್ದಾಟಂಡ ವಾಡೆಯ ಐತಿಹಾಸಿಕ ನೂರಂಬಡ ನಾಡ್ಮಂದ್ನಲ್ಲಿ ಭಾನುವಾರ ಹುತ್ತರಿ ಹಬ್ಬದ ಪ್ರಯುಕ್ತ ಸಾಂಪ್ರದಾಯಿಕ ಹುತ್ತರಿ ಕೋಲಾಟದ ಕಾರ್ಯಕ್ರಮ ನಡೆಯಿತು.

ಬೇತು ಗ್ರಾಮದ ಇತಿಹಾಸ ಪ್ರಸಿದ್ಧ ಮಕ್ಕಿ ಶ್ರೀ ಶಾಸ್ತಾವು ದೇವಾಲಯದಿಂದ ಊರಿನ ಮುಖ್ಯಸ್ಥರು ದೇವರ ಕೋಲು, ವಸ್ತ್ರ ಹಾಗೂ ಬೆಳ್ಳಿಯ ಕಡತಲೆ (ಖಡ್ಗ)ದೊಂದಿಗೆ ಸಾಂಪ್ರದಾಯಿಕ ಕಾಪಳ ಕಳಿ ಕೊಂಬು ಕೊಟ್ಟು ವಾಲಗ, ದುಡಿಕೊಟ್ಟ್ ಪಾಟ್ನೊಂದಿಗೆ ಬೇತು ಗ್ರಾಮದ ಕುರುಂಬರಾಟ್ ಎಂಬಲ್ಲಿ ವಿಶ್ರಾಂತಿ ಪಡೆದು ಬಳಿಕ ಬಿದ್ದಾಟಂಡ ವಾಡೆಗೆ ಗ್ರಾಮ ಸ್ಥರು ಮೆರವಣಿಗೆಯಲ್ಲಿ ಆಗಮಿಸಿದ್ದರು. ಈ ಸಂದರ್ಭ ನೂರಂಬಡ ಮಂದ್ನಲ್ಲಿ ಬಿದ್ದಾಟಂಡ ಕುಟುಂಬದ ತಕ್ಕಮುಖ್ಯಸ್ಥರು ಸಾಂಪ್ರದಾಯಿಕ ಉಡುಪು ಬಿಳಿ ಕುಪ್ಪಸ ಧರಿಸಿ ಶ್ರೀ ಮಹದೇವರ ದೇವಾಲಯದಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿ ಸಂಪ್ರದಾಯದಂತೆ ದೇವರ ತಿರುವಭರಣ ಕೋಲನ್ನು ಬರಮಾಡಿಕೊಂಡರು.

ನಾಪೋಕ್ಲು ಗ್ರಾಮದವರು ದುಡಿಕೊಟ್ಟ್ ಪಾಟ್‌ಆಗಿ ವಾಡೆಗೆ ಆಗಮಿಸಿದ್ದರು. ಅದೇ ರೀತಿ ಕೊಳಕೇರಿಯ ಗ್ರಾಮಸ್ಥರು ಬರುತ್ತಿದ್ದಂತೆ ಅವರನ್ನು ಬಿದ್ದಾಟಂಡ ವಾಡೆಗೆ ಬರಮಾಡಿ ಕೊಳ್ಳಲಾಯಿತು. ಈ ಸಂದರ್ಭ ಕೋಲಾಟ ನಡೆಸುವ ಮಂದ್ನ ಮರದ ಕೆಳಗೆ ದೇವರ ತಿರುವಭರಣ


ಬಿದ್ದಾಟಂಡ ವಾಡೆಯ ಐತಿಹಾಸಿಕ ನೂರಂಬಡ ನಾಡ್ಮಂದ್ನಲ್ಲಿ ಸಾಂಪ್ರದಾಯಿಕ ಹುತ್ತರಿ ಕೋಲಾಟದಲ್ಲಿ ಕಾಪಳ ವೇಷಧಾರಿಗಳು.

ಕೋಲನ್ನು ಇಟ್ಟು ಪ್ರಾರ್ಥನೆ ಸಲ್ಲಿಸಿ ಸ್ವಲ್ಪ ವಿಶ್ರಾಂತಿ ಪಡೆಯಲಾಯಿತು. ನಂತರ ಮಂದ್‌ಗೆ ಪ್ರದಕ್ಷಣೆ ಬರುತ್ತಾ ಬಪ್ಪಕ ಪುತ್ತರಿ ಬಣ್ಣಾತೆ ಬಾತ್ ಪೋಯಿಲೇ, ಪೋಯಿಲೇ ಪೋಪಕ ಪುತ್ತರಿ ಏಣ್ಣಾತೇ ಪೋಚಿ– ಪೋಯಿಲೇ, ಪೋಯಿಲೇ ಎಂಬ ಉದ್ಘೋಷಣೆಯೊಂದಿಗೆ ಲಯಬದ್ಧವಾಗಿ ಮಂದ್ನಲ್ಲಿ ಪ್ರದಕ್ಷಣೆ ಬರುತ್ತಾ ಮೂರು ಗ್ರಾಮದ ಗ್ರಾಮಸ್ಥರು ಕೋಲು ಹೊಡೆಯುತ್ತಾ ಸಾಂಪ್ರದಾಯಿಕ ಹುತ್ತರಿ ಕೋಲಾಟದಲ್ಲಿ ಪಾಲ್ಗೊಂಡು ವಿಜೃಂಭಿಸಿದರು.

ಎರಡನೇ ದಿನ ಚಿಕ್ಕ ಕೋಲಲ್ಲೂ ಸಹ ಮೂರು ಗ್ರಾಮಸ್ಥರು ಸೇರಿ ಕೋಲಾಟ, ಪರೆಯ ಕಳಿ ಮುಂತಾದ ಕಾರ್ಯಕ್ರಮವನ್ನು ನಡೆಸಿ ನಂತರ ಕೋಲನ್ನು ಮಕ್ಕಿ ದೇವಾಲಯಕ್ಕೆ ಒಪ್ಪಿಸುತ್ತಾರೆ ಹೀಗೆ ಹುತ್ತರಿ ಹಬ್ಬಕ್ಕೆ ತೆರೆ ಎಳೆಯು ತ್ತಾರೆ.

ಕಾಪಳಕಳಿ : ಹುತ್ತರಿ ಹಬ್ಬದಲ್ಲಿ ಕಾಪಳಕಳಿಗೆ ಹೆಚ್ಚು ಮಹತ್ವ ಇದೆ. ಹುತ್ತರಿ ಹಬ್ಬದಂದು ಬೇತು ಗ್ರಾಮದ ಮಕ್ಕಿ ದೇವಾಲಯಕ್ಕೆ ಅಡಗಿದ ಕೆಂಬಟ್ಟಿ ಜನಾಂಗದವರು ಕಾಪಳ ವೇಷವನ್ನು ಧರಿಸುತ್ತಾರೆ. ಮೈಗೆ ಕಪ್ಪು ಬಣ್ಣದ ಮಸಿಯನ್ನು ಬಳಿದು ಕೈಯಲ್ಲಿ ಅಂಗರೇ ಕೋಲು ಹಿಡಿದು ವಾದ್ಯಕ್ಕೆ ತಕ್ಕಂತೆ ಕುಣಿಯುತ್ತಾರೆ. ಈ ವೇಷ ಎರಡು ಮೂರು ದಿನಗಳ ಕಾಲ ಇದ್ದು ಸಾಂಪ್ರದಾಯಿಕವಾಗಿ ನಡೆದು ಬಂದಿರುತ್ತದೆ. ಕೋಲಾಟದಲ್ಲಿ ನೂರಾರು ಗ್ರಾಮಸ್ಥರು ಪಾಲ್ಗೊಂಡು ಕೋಲಾಟ ಕಾರ್ಯಕ್ರಮಕ್ಕೆ ಮೆರಗು ನೀಡುತ್ತಾರೆ.

ಮೈಸೂರಿನಲ್ಲಿ ಸಾಧನೆ ಮಾಡಿದ ಯುಚ್ಚಿರಿಯೋ ಕರಾಟೆ ವಿದ್ಯಾರ್ಥಿಗಳು


ಮೈಸೂರಲ್ಲಿ ನಡೆದ ಮುಕ್ತ ಕರಾಟೆ ಪಂದ್ಯಾವಳಿಯಲ್ಲಿ ವಿಜೇತರಾದ ಯುಚ್ಚಿರಿಯೋ ಪಟುಗಳು

ವಿರಾಜಪೇಟೆ, ಡಿ.7–ಇಲ್ಲಿನ ಯುಚ್ಚಿರಿಯೋ ಕರಾಟೆ ವಿದ್ಯಾರ್ಥಿಗಳಾದ ಎಂ.ಹಿತಾ, ಜಿಯಾ ಫಾತಿಮಾ, ದೀಪಾನ್ವಿತ, ಜಂಯುಶ್ರೀ, ಕೆ.ಎಂ.ಶಶಾಂಕ್, ಯಶ್ವಂತ್ ಕೆ.ಎಂ, ಶಾನ್ ಜೈಸನ್, ಆಲ್ಬಿನ್ ಅಂಟೋನಿರವರುಗಳು ಮೈಸೂರಿನ ಮಹಾರಾಜ ಕಾಲೇಜಿನ ಆವರಣದಲ್ಲಿ ಏರ್ಪಡಿಸಲಾಗಿದ್ದ ಮುಕ್ತ ಕರಾಟೆ ಪಂದ್ಯಾವಳಿಯಲ್ಲಿ ಭಾಗವಹಿಸಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಇವರು ಕರಾಟೆ ಮುಖ್ಯ ತರಬೇತುದಾರರಾದ ಹೆಚ್.ಆರ್.ಶಿವಪ್ಪ ಅವರ ವಿದ್ಯಾರ್ಥಿಗಳಾಗಿದ್ದಾರೆ.

ಬ್ಲಾಕ್ ಕಾಂಗ್ರೆಸ್ ಪ್ರಚಾರ ಸಮಿತಿ ಪದಾಧಿಕಾರಿಗಳ ಪಟ್ಟಿ ಬಿಡುಗಡೆ

ವಿರಾಜಪೇಟೆ, ಡಿ.7–ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ ಹಾಗು ಜಿಲ್ಲಾ ಪಂಚಾಯಿತಿ ಚುನಾವಣೆ ಬರುತ್ತಿರುವ ಹಿನ್ನಲೆಯಲ್ಲಿ ವಿರಾಜಪೇಟೆ ಬ್ಲಾಕ್ 16 ವಲಯಗಳಲ್ಲಿ ಅಧ್ಯಕ್ಷರು ಹಾಗೂ ಪದಾಧಿಕಾರಿಗಳನ್ನು ಆಂಯ್ಕೆ ಮಾಡಲಾಗಿದೆ ಇನ್ನು 3 ವಲಯಗಳಲ್ಲಿ ಆಯ್ಕೆ ನಡೆಸಬೇಕು ಎಂದು ಬ್ಲಾಕ್ ಪ್ರಚಾರ ಸಮಿತಿ ಅಧ್ಯಕ್ಷ ಎಸ್.ಎಚ್.ಮತೀನ್ ಹೇಳಿದರು.

ಬ್ಲಾಕ್ ಕಾಂಗ್ರೆಸ್ ಪ್ರಚಾರ ಸಮಿತಿಯಿಂದ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಕಾಂಗ್ರೆಸ್ ಸರಕಾರದ ಗ್ಯಾರಂಟಿ ಯೋಜನೆಗಳು ಬಡ ಜನತೆಗೆ ತುಂಬ ಅನುಕೂಲವಾಗಿವೆ, ಹಾಗೂ ಶಾಸಕ ಎ.ಎಸ್.ಪೊನ್ನಣ್ಣ 800 ಕೋಟಿಗೂ ಹೆಚ್ಚು ಅನುದಾನ ತಂದಿದ್ದಾರೆ. ಇದರಿಂದ ಗ್ರಾಮೀಣ ಭಾಗದಲ್ಲಿ ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ರಸ್ತೆ ಕಾಮಗಾರಿಗಳು ಇಂದು ಅಭಿವೃದ್ಧಿ ಯತ್ತ ಸಾಗುತ್ತಿದೆ, ವಿರಾಜಪೇಟೆ ಪಟ್ಟಣದ ಮುಖ್ಯರಸ್ತೆ ಕಾಮಗಾರಿ ಅನೇಕ ವರ್ಷಗಳಿಂದ ಬಾಕಿ ಉಳಿದಿದ್ದು ಇಂದು ರಸ್ತೆ ಅಗಲಿಕರಣ ಅಭಿವೃದ್ಧಿಗೆ ಕಾಮಗಾರಿ ಪ್ರಾರಂಭಗೊಂಡಿದೆ ಎಂದರು.

ಅಮ್ಮತ್ತಿಯ ಮೈಕಲ್ ಮಾತನಾಡಿ ಅಮ್ಮತ್ತಿ ವ್ಯಾಪ್ತಿಯಲ್ಲಿ ಕೆಲವು ವರ್ಷಗಳಿಂದ ಗ್ರಾಮೀಣ ಭಾಗದ ಕೆಲವು ರಸ್ತೆಗಳಲ್ಲಿ ಜನರು ನಡೆದುಕೊಂಡು ಹೋಗಲು ಸಾಧ್ಯವಾಗುತ್ತಿರಲಿಲ್ಲ ಈಗ ಕಾಂಗ್ರೆಸ್ ಶಾಸಕ


ಬ್ಲಾಕ್ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಎಸ್.ಎಚ್. ಮತೀನ್ ಪದಾಧಿಕಾರಿಗಳ ಪಟ್ಟಿಯನ್ನು ಬಿಡುಗಡೆಗೊಳಿಸಿದರು.

ಎ.ಎಸ್.ಪೊನ್ನಣ್ಣ ಅವರು ಖುದ್ದು ಬೇಟಿನೀಡಿ ಅಮ್ಮತ್ತಿ–ಪಾಲಿಬೆಟ್ಟ ರಸ್ತೆ ಹಾಗೂ ತಿತಿಮತಿ ರಸ್ತೆಗಳು ಅಭಿವೃದ್ಧಿಗೊಂಡಿದೆ ಇದರಿಂದ ಆ ಬಾಗದ ಜನರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದರು.

ಬ್ಲಾಕ್ ಕಾಂಗ್ರೆಸ್ ಪ್ರಚಾರ ಸಮಿತಿಯ ಉಪಾಧ್ಯಕ್ಷ ಕೆ.ಆರ್.ಟೀನಾ, ಪ್ರಧಾನ ಕಾರ್ಯದರ್ಶಿ ರಚನ್ ಉತ್ತಪ್ಪ ಮತ್ತು ಅಗಸ್ಟಿನ್ ಬೆನ್ನಿ, ಕೋಶಾಧಿಕಾರಿ ದಿನೇಶ್ ನಂಬಿಯರ್, ಸಂಯೋಜಕ ರಂಜಿತ್ ಪೊನ್ನಣ್ಣ, ಖಜಾಂಚಿ ಮುಕ್ಕಾಟ್ಟಿರ ವಿನಿತಾ ಕಾವೇರಮ್ಮ, ಸದಸ್ಯರಾದ ಅಬ್ದುಲ್ ಲತೀಫ್, ಮೊಯಿದು, ಅಶೋಕ್ ಮತ್ತಿತರರು ಉಪಸ್ಥಿತರಿದ್ದರು.

ಇಂದು ಪಿಂಚಣಿ ಅದಾಲತ್

ಮಡಿಕೇರಿ: ಪಿಂಚಣಿ ಅದಾಲತ್‌ನ ಸಭೆಯು ಡಿ.8 ರಂದು ಮಧ್ಯಾಹ್ನ 4 ಗಂಟೆಗೆ ಕೊಡಗು ಅಂಚೆ ವಿಭಾಗದ ವಿಭಾಗೀಯ ಕಚೇರಿ ಸಿದ್ದಾಪುರ ರಸ್ತೆ ಅಶೋಕಪುರದಲ್ಲಿ ನಡೆಯಲಿದೆ.

ಸಭೆಯಲ್ಲಿ ಕೊಡಗು ಅಂಚೆ ವಿಭಾಗದ ಪೋಸ್ಟಲ್ ಪಿಂಚಣಿ ಸಂಬಂಧಿಸಿದ ಎಲ್ಲಾ ತರಹದ ಅಹವಾಲುಗಳನ್ನು ಸ್ವೀಕರಿಸಿ ಚರ್ಚಿಸಲಾಗುತ್ತದೆ. ಅಹವಾಲುಗಳಿದ್ದಲ್ಲಿ 'ಪಿಂಚಣಿ ಅದಾಲತ್' ಎಂದು ಬರೆದು ಅಂಚೆ ಅಧೀಕ್ಷಕರು, ಕೊಡಗು ಅಂಚೆ ವಿಭಾಗ, ಮಡಿಕೇರಿ ಇವರಿಗೆ ನೇರವಾಗಿ ತಲುಪುವಂತೆ ಕಳುಹಿಸಬೇಕು. ನಂತರ ಡಿ.8 ರಂದು ನಡೆಯುವ ಸಭೆಯಲ್ಲಿ ಭಾಗವಹಿಸಬಹುದು ಎಂದು ಕೊಡಗು ಅಂಚೆ ವಿಭಾಗದ ಅಂಚೆ ಅಧೀಕ್ಷಕರು ತಿಳಿಸಿದ್ದಾರೆ.

ಪುರಸಭಾ ಮಾಜಿ ಸದಸ್ಯನ ಮೇಲೆ ಬೀದಿ ನಾಯಿ ದಾಳಿ



ಕುಶಾಲನಗರ: ಪಟ್ಟಣದ ಪುರಸಭಾ ಮಾಜಿ ಸದಸ್ಯ ಎಂ.ಕೆ.ದಿನೇಶ್ (ಸುಂದರೇಶ್) ಮೇಲೆ ಬೀದಿನಾಯಿ ದಾಳಿ ಮಾಡಿ ಗಾಯಗೊಳಿಸಿರುವ ಘಟನೆ ಭಾನುವಾರ ನಡೆದಿದೆ.

ಇಲ್ಲಿನ ಕರಿಯಪ್ಪ ಬಡಾವಣೆಯಲ್ಲಿ ತಮ್ಮ ಮನೆಗೆ ಹೋಗುತ್ತಿದ್ದ ವೇಳೆ ಬೀದಿ ನಾಯಿಗಳು ಏಕಾಏಕಿ ದಾಳಿ ಮಾಡಿ ಅವರ ಕೈಬೆರಳಿಗೆ ಕಚ್ಚಿ ಹೊಟ್ಟೆಗೆ ಪರಚಿ ಗಾಯಗೊಳಿಸಿದೆ. ಗಾಯಗೊಂಡಿರುವ ದಿನೇಶ್ ಅವರು ಸಾಗರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇದೇ ನಾಯಿ ಹಲವರ ಮೇಲೆ ದಾಳಿ ನಡೆಸಿದ್ದು, ನಾಯಿಗಳ ಹಾವಳಿ ತಡೆಗಟ್ಟಲು ಅಧಿಕಾರಿಗಳು ವಿಫಲರಾಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಾದರ ಮಹಾಸಭಾದ ಜಿಲ್ಲಾಧ್ಯಕ್ಷರ ನೇಮಕ

ಚಾಮರಾಜನಗರ, ಡಿ.7–ರಾಜ್ಯ ಮಾದರ ಮಹಾಸಭಾದ ಜಿಲ್ಲಾಧ್ಯಕ್ಷರಾಗಿ ಎಂ.ಶಿವಮೂರ್ತಿ ಅವರನ್ನು ನೇಮಕ ಮಾಡಲಾಗಿದೆ.


ಎಂ.ಶಿವಮೂರ್ತಿ

ಮಾದಿಗ ಸಮುದಾಯದ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಅಭಿವೃದ್ಧಿಗೆ ನೀವು ನಿಷ್ಠೆಯಿಂದ ಹಾಗೂ ತ್ಯಾಗಮನೋಭಾವದಿಂದ ಕೆಲಸ ಮಾಡುವಂತೆ ಆಶಿಸುತ್ತೇವೆ. ಮಹಾಸಭೆ ಉದ್ದೇಶಗಳು ಹಾಗೂ ಸಂಘದ ಬೈಲಾವನ್ನು ಅನುಸರಿಸಿ, ಸಮುದಾಯದ ಒಳಿತಿಗಾಗಿ ಸಂಪೂರ್ಣ ಸಮರ್ಪಿತ ಮನೋಭಾವದಿಂದ ಸೇವೆ ಸಲ್ಲಿಸಬೇಕು. ಈ ನೇಮಕಾತಿ ಆದೇಶವು ಮುಂದಿನ ಚುನಾವಣೆವರೆಗೆ ಚಾಲ್ತಿಯಲ್ಲಿರುತ್ತದೆ. ಎಂದು ನೇಮಕಾತಿ ಆದೇಶ ಪತ್ರದಲ್ಲಿ ಕರ್ನಾಟಕ ಮಾದರ ಮಹಾಸಭಾ ಅಧ್ಯಕ್ಷ ಡಾ. ಕೆ. ಹೆಚ್.ಮುನಿಯಪ್ಪ ತಿಳಿಸಿದ್ದಾರೆ.

ಅಭಿನಂದನೆ: ಕರ್ನಾಟಕ ಮಾದರ ಮಹಾಸಭಾದ ಜಿಲ್ಲಾಧ್ಯಕ್ಷರಾಗಿ ತಮ್ಮನ್ನು ನೇಮಕ ಮಾಡಿದ ರಾಜ್ಯಾಧ್ಯಕ್ಷ ಡಾ.ಕೆ.ಹೆಚ್.ಮುನಿಯಪ್ಪ, ಮಾಜಿ ಸಚಿವರಾದ ಎ.ನಾರಾಯಣಸ್ವಾಮಿ, ಎಚ್.ಆಂಜನೇಯ, ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಕರ್ನಾಟಕ ಮಾದರ ಮಹಾಸಭಾದ ಚಾ.ನಗರ ಜಿಲ್ಲಾ ಉಸ್ತುವಾರಿ ಆರ್. ಧರ್ಮಸೇನ ಅಭಿನಂದನೆ ಸಲ್ಲಿಸುವುದಾಗಿ ಎಂ.ಶಿವಮೂರ್ತಿ ತಿಳಿಸಿದ್ದಾರೆ.

ವರ್ತಕನಿಂದ ಚಿನ್ನದ ಗಟ್ಟಿ ದರೋಡೆ ಮಾಡಿದ್ದ ಮೂವರ ಬಂಧನ

ಗುಂಡ್ಲುಪೇಟೆ, ಡಿ.7(ಸೋಮ್.ಜಿ)– ಚಿನ್ನವನ್ನು ಕೊಂಡೊಯ್ಯುತ್ತಿದ್ದ ವರ್ತಕನ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ ಕೋಟ್ಯಾಂತರ ಮೌಲ್ಯದ ಚಿನ್ನದ ಗಟ್ಟಿಯನ್ನು ದರೋಡೆ ಮಾಡಿದ್ದ ಮೂವರು ಆರೋಪಿಗಳನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ತಾಲೂಕಿನ ಬಂಡೀಪುರ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ ಮೂಲೆಹೊಳೆ ವಲಯ ಅರಣ್ಯ ಪ್ರದೇಶದಲ್ಲಿ ಕೇರಳದ ಆಭರಣ ತಯಾರಕನ ಕಾರನ್ನು ಅಡ್ಡಗಟ್ಟಿ ಆತ ಕೊಂಡೊಯ್ಯುತ್ತಿದ್ದ ಅಂದಾಜು 1.50 ಕೋಟಿ ರೂ ಮೌಲ್ಯದ ಸುಮಾರು 1318 ಗ್ರಾಂ ಮತ್ತು 760 ಮಿಲಿ ಗಟ್ಟಿ ಚಿನ್ನ ದೋಚಿದ್ದ ಕೇರಳದ ಕಣ್ಣೂರಿನ ನಿಜಾಮುದ್ದೀನ್, ತ್ರಿಚೂರಿನ ವಿಜು ಜಾನ್ ಹಾಗೂ ಮಡಿಕೇರಿಯ ಸುಹೇಲ್ ಖಾನ್ ಎಂಬವರನ್ನು ಬಂಧಿಸಿ ಅವರಿಂದ ಕಾರು (ಕೆ.ಎ.12 ಎಂ.ಸಿ. 3155) ಮತ್ತು ಮೊಬೈಲ್ ಫೋನ್ ವಶಕ್ಕೆ ಪಡೆದುಕೊಂಡು ಬಂಧಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಘಟನೆ ವಿವರ: ಮಂಡ್ಯದ ವ್ಯಾಪಾರಿಯೊಬ್ಬರಿಂದ ಚಿನ್ನವನ್ನು ಕೊಂಡೊಯ್ಯುತ್ತಿದ್ದ ಕೇರಳದ ಕ್ಯಾಲಿಕಟ್‌ನ ವ್ಯಾಪಾರಿ ವಿನು ಬಿನ್ ಕೃಷ್ಣನ್ ಎಂಬುವರ ಕಾರನ್ನು ನ.21ರಂದು ದುಷ್ಕರ್ಮಿಗಳು ಅಡ್ಡಗಟ್ಟಿ ಆತನ ಮೇಲೆ ಹಲ್ಲೆ ನಡೆಸಿ ಕಾರು ಸಮೇತ ಚಿನ್ನ ದೋಚಿದ ದರೋಡೆ



ಚಿನ್ನ ದರೋಡೆ ಪ್ರಕರಣದಲ್ಲಿ ಬಳಕೆ ಮಾಡಿದ್ದ ಕಾರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಕೋರರು ವಿನು ಮತ್ತು ಕಾರು ಚಾಲಕ ಇಬ್ಬರನ್ನು ಮೈಸೂರು–ವೀರಾಜಪೇಟೆ ರಸ್ತೆಯಲ್ಲಿ ಬಿಟ್ಟು ಹೋಗಿದ್ದರು.

ನಂತರ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ವಿನು ಗುಂಡ್ಲುಪೇಟೆ ಪೊಲೀಸ್ ಠಾಣೆಗೆ ತಡವಾಗಿ ಬಂದು ದೂರನ್ನು ಸಲ್ಲಿಸಿದ್ದರು. ನಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ ಅವರ ಮಾರ್ಗದರ್ಶನದಲ್ಲಿ ತನಿಖೆ ನಡೆಸಿದ ಪೊಲೀಸರು ಘಟನೆಗೆ ಸಂಬಂಧಿಸಿದಂತೆ ಮೂವರು ಆರೋಪಿಗಳನ್ನು ಬಂಧಿಸಿ, ಕೃತ್ಯಕ್ಕೆ ಬಳಸಿದ್ದ ಫೋನ್ ಮತ್ತು ಕಾರನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಆದರೆ ಬಂಧಿತರಿಂದ ಯಾವುದೇ ಚಿನ್ನವನ್ನು ವಶಕ್ಕೆ ಪಡೆಯಲು ಸಾಧ್ಯವಾಗಿಲ್ಲ. ಆದ್ದರಿಂದ ಪ್ರಕರಣದ ಉಳಿದ ಆರೋಪಿಗಳ ಪತ್ತೆಕಾರ್ಯ ಪ್ರಗತಿಯಲ್ಲಿದೆ. ಬಂಧಿತರಿಂದ ಹೆಚ್ಚಿನ ಮಾಹಿತಿ ಪಡೆಯಲು ಸೋಮವಾರ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿ ಬಂಧಿತರನ್ನು ಪೊಲೀಸ್ ಕಸ್ಟಡಿಗೆ ತೆಗೆದು ಕೊಳ್ಳಲಾಗುವುದು ಎಂದು ಪೊಲೀ ಸರು ತಿಳಿಸಿದ್ದಾರೆ. ಈ ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪಿಗಳು ಈಗಾಗಲೇ ಹಲವು ಕಾನೂನುಬಾಹಿರ ಕೃತ್ಯಗಳಲ್ಲಿ ಭಾಗಿಯಾಗಿದ್ದು, ಹಲವು ಪ್ರಕರಣಗಳು ದಾಖಲಾಗಿವೆ. ಶೀಘ್ರದಲ್ಲೇ ಮಾಲು ಸಮೇತ ಎಲ್ಲಾ ಆರೋಪಿಗಳನ್ನು ಪತ್ತೆ ಹಚ್ಚಿ ಬಂಧಿಸಲಾಗುವುದು ಎಂದು ಪೊಲೀಸರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಎಎಸ್‌ಪಿ ಶಶಿಧರ್ ಮತ್ತು ಡಿವೈಎಸ್‌ಪಿ ಸ್ನೇಹರಾಜ್ ನಿರ್ದೇಶನದಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಗಳಾದ ಜಯಕುಮಾರ್, ಸಾಗರ್, ವನರಾಜು, ಮೋಹಿತ್ ಸಹದೇವ್, ಪಿಎಸ್‌ಐಗಳಾದ ಸಾಹೇಬ ಗೌಡ, ಮಹೇಶ್, ನವೀನ್ ಕುಮಾರ್, ತಾಜುದ್ದೀನ್, ಸಿಬ್ಬಂದಿಗಳಾದ ಪುಟ್ಟರಾಜು, ಕಿಶೋರ್, ಶಿವರಾಜು, ಮಹೇಶ್, ಅಕ್ಬರ್ ಅಲಿ, ಮಹೇಶ್, ರಾಜು, ಜಗದೀಶ್, ಮಹದೇವ, ಸಿಡಿಆರ್ ವಿಭಾಗದ ಎಎಸ್‌ಐಗಳಾದ ವೆಂಕಟೇಶ್, ಶಂಕರರಾಜ್ ಆರೋಪಿಗಳ ಪತ್ತೆ ಕಾರ್ಯವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ ಶ್ಲಾಘಿಸಿದ್ದಾರೆ.

ಅಂಬೇಡ್ಕರ್ ಪರಿನಿಬ್ಬಾಣ ದಿನ: ಬಿವಿಎಸ್‌ನಿಂದ ಮೊಂಬತ್ತಿ ಮೆರವಣಿಗೆ



ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ಮೊಂಬತ್ತಿ ಮೆರವಣಿಗೆಗೆ ಚಾಲನೆ ನೀಡಿದರು.

ಚಾಮರಾಜನಗರ, ಡಿ.7– ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ 69ನೇ ಪರಿನಿಬ್ಬಾಣ ದಿನಾಚರಣೆ ಅಂಗವಾಗಿ ಭಾರತೀಯ ವಿದ್ಯಾರ್ಥಿ ಸಂಘದ ವತಿಯಿಂದ ನಗರದಲ್ಲಿ ಮೊಂಬತ್ತಿ ಮೆರವಣಿಗೆ ನಡೆಯಿತು.

ನಗರದ ಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಅಂಬೇಡ್ಕರ್ ರವರ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ಚಾಲನೆ ನೀಡಿದರು. ಅಲ್ಲಿಂದ ಹೊರಟ ಮೆರವಣಿಗೆ ಭುವನೇಶ್ವರಿ ವೃತ್ತ ಬಿ.ರಾಚಯ್ಯ ಜೋಡಿ ರಸ್ತೆಯ ಮೂಲಕ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ಬಳಿ ತೆರಳಿ ಸಾಮೂಹಿಕ ಬುದ್ಧವಂದನೆ ಸಲ್ಲಿಸಿ ಮುಕ್ತಾಯಗೊಂಡಿತು.

ಮೆರವಣಿಗೆಗೆ ಚಾಲನೆ ನೀಡಿದ ಡಾ.ಬಿ.ಟಿ. ಕವಿತಾ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಅವರು ದೇಶದ ಸರ್ವರಿಗೂ ಸಮಾನತೆ ಹಕ್ಕು, ಕರ್ತವ್ಯಗಳನ್ನು ಸಂವಿಧಾನದಲ್ಲಿ ಕಲ್ಪಿಸಿಕೊಟ್ಟಿದ್ದಾರೆ. ಅವರನ್ನು ಸ್ಮರಿಸಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು.

ಭಾರತೀಯ ವಿದ್ಯಾರ್ಥಿ ಸಂಘದ ಜಿಲ್ಲಾ ಸಂಯೋಜಕ ಪರ್ವತ್‌ರಾಜ್ ಮಾತನಾಡಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಮಹಾ ಪರಿನಿರ್ವಾಣದ ದಿನದಂದು ನಾವು ಅವರ ಆದರ್ಶಗಳನ್ನು ಪಾಲಿಸುವುದು ಅವರಿಗೆ ನೀಡುವ ಬಹು ಮುಖ್ಯ ಗೌರವವಾಗಿದೆ ಎಂದರು. ಮೆರವಣಿಗೆಯಲ್ಲಿ ಮುಖಂಡರಾದ ಸಿ.ಎಂ.ಕೃಷ್ಣಮೂರ್ತಿ, ನಮ್ಮನೆ ಪ್ರಶಾಂತ, ವಕೀಲರಾದ ಮಹೇಂದ್ರ, ಬುದ್ದ ಮಹೇಶ್, ಕಾವ್ಯ, ನೇತ್ರಾ, ಸುಮಾ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕ್ಷತ್ರಿಯ ಸಮಾಜದಿಂದ ನೀರಿನ ಘಟಕ ಆರಂಭ



ಗುಂಡ್ಲುಪೇಟೆ, ಡಿ.7(ಸೋಮ್.ಜಿ)– ಪಟ್ಟಣದ ಶ್ರೀ ಚಾಮುಂಡೇಶ್ವರಿ ದೇವಾಲಯದ ಆವರಣದಲ್ಲಿ ಭಾವಸಾರ ಕ್ಷತ್ರಿಯ ಸಮಾಜದ ವತಿಯಿಂದ ಶುದ್ಧಕುಡಿಯುವ ನೀರಿನ ಘಟಕ ಆರಂಭಿಸಿ ಸಾರ್ವಜನಿಕರಿಗೆ ಉಚಿತವಾಗಿ ವಿತರಣೆ ಮಾಡಲಾಯಿತು.

ಭಾನುವಾರ ಬೆಳಗ್ಗೆ ಘಟಕಕ್ಕೆ ಶಾಸಕರ ಆಪ್ತ ಕಾರ್ಯದರ್ಶಿ ಮಂಜುನಾಥ್ ಮತ್ತು ಸಮಾಜದ ಮುಖಂಡರು ಚಾಲನೆ ನೀಡಿದರು. ನೂತನ ಘಟಕವಾದ ಹಿನ್ನೆಲೆಯಲ್ಲಿ ಭಾನುವಾರ ಬೆಳಗ್ಗೆ 11ರಿಂದ ಸಂಜೆ 5 ಗಂಟೆವರೆಗೆ ಸಾರ್ವಜನಿಕರಿಗೆ ಉಚಿತವಾಗಿ ಶುದ್ಧ ನೀರನ್ನು ವಿತರಣೆ ಮಾಡಲಾಯಿತು.

ಪುರಸಭೆ ಸದಸ್ಯ ನಾಗೇಶ್, ಶಾಸಕರ ಆಪ್ತ ಕಾರ್ಯದರ್ಶಿ ಮಂಜುನಾಥ್, ಗೌರವಾಧ್ಯಕ್ಷ ಮೋಹನ್‌ರಾವ್‌ನಾಯಕ್, ಭಾವಸಾರ್ ಕ್ಷತ್ರಿಯ ಸಮಾಜದ ಅಧ್ಯಕ್ಷ ನವೀನ್‌ವಾದೋನೆ, ಉಪಾಧ್ಯಕ್ಷ ಪಿ.ಜಿ. ವಿಶ್ವನಾಥ್‌ರಾವ್, ಪ್ರಧಾನಕಾರ್ಯದರ್ಶಿ ಎಂ.ಶಿವಕುಮಾರ್ ಅಷ್ಟಕರ್ ಸೇರಿದಂತೆ ಭಾವಸಾರ್ ಕ್ಷತ್ರಿಯ ಸಮಾಜದ ಮುಖಂಡರು, ಯುವಕರು, ಪದಾಧಿಕಾರಿಗಳು ಮತ್ತು ಮಹಿಳಾ ಸದಸ್ಯರು ಇದ್ದರು.

ಯರಿಯೂರು ಗ್ರಾಮಕ್ಕೆ ಅನುದಾನ ಬಿಡುಗಡೆಗೆ ಆಗ್ರಹ

ಯಳಂದೂರು, ಡಿ.7 (ವಿ.ನಾಗರಾಜು)– ತಾಲೂಕಿನ ಯರಿಯೂರು ಗ್ರಾಮಕ್ಕೆ ಅನುದಾನ ಬಿಡುಗಡೆ ಮಾಡಬೇಕೆಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಹೆಚ್.ಸಿ. ಮಹದೇವಪ್ಪರಿಗೆ ಗ್ರಾಮದ ಯಜಮಾನರು ಒತ್ತಾಯಿಸಿದ್ದಾರೆ.

ಜಿಲ್ಲೆಯ ಹೊಂಗನೂರು ಗ್ರಾಮದಲ್ಲಿ ಅಂಬೇಡ್ಕರ್ ಪ್ರತಿಮೆ ನಿರ್ಮಾಣಕ್ಕೆ ಗುದ್ದಲಿ ಪೂಜೆ ಕಾರ್ಯಕ್ರಮಕ್ಕೆ ಹೋಗುವ ಸಂದರ್ಭದಲ್ಲಿ ಗ್ರಾಮದಲ್ಲಿ ಗ್ರಾಮದ ಯಜಮಾನರಾದ ಶ್ರೀನಿವಾಸ್ ಮತ್ತು ಗ್ರಾಮಸ್ಥರು ಮತ್ತು ಗ್ರಾಮಸ್ಥರು ಮೂಲ ಸಮಸ್ಯೆಗಳ ಬಗ್ಗೆ ಹಾಗೂ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಯರಿಯೂರು ಗ್ರಾಮಕ್ಕೆ ಅನುದಾನ ಬಿಡುಗಡೆ ಮಾಡಬೇಕೆಂದು ಇತ್ತೀಚಿಗೆ ಮನವಿ ಸಲ್ಲಿಸಿದರು.

ಗ್ರಾಮದ ಯಜಮಾನ ಶ್ರೀನಿವಾಸ್ ಮಾತನಾಡಿ ಯರಿಯೂರು ಗ್ರಾಮಕ್ಕೆ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಎಸ್‌ಇಪಿ ಟಿಎಸ್‌ಪಿ ಯೋಜನೆ ಅಡಿಯಲ್ಲಿ ಮೂಲಭೂತ ಸೌಕರ್ಯ ಗಳನ್ನು


ಯರಿಯೂರು ಗ್ರಾಮಕ್ಕೆ ಭೇಟಿ ನೀಡಿದ ಡಾ॥ ಹೆಚ್ ಸಿ ಮಹದೇವಪ್ಪ ಮತ್ತು ಎ ಆರ್ ಕೃಷ್ಣಮೂರ್ತಿರವರನ್ನು ಆರತಿ ಬೆಳಗುವ ಮೂಲಕ ಸ್ವಾಗತಿಸಿದರು.

ಒದಗಿಸಬೇಕು ಎಂದು ಮನವಿ ಮಾಡಿದರು. ಇದೇ ವೇಳೆ ಯರಿಯೂರು ಗ್ರಾಮಕ್ಕೆ ಭೇಟಿ ನೀಡಿದ ಸಚಿವ ಮಹದೇವಪ್ಪ ಮತ್ತು ಎ ಆರ್ ಕೃಷ್ಣಮೂರ್ತಿ ಅವರನ್ನು ಆರತಿ ಬೆಳಗುವ ಮೂಲಕ ಸ್ವಾಗತಿಸಿದರು.ಯಜಮಾನರಾದ ಮಹದೇವ, ರಂಗಸ್ವಾಮಿ, ಚನ್ನಂಕಯ್ಯ, ಚಿಕ್ಕಮಾದಯ್ಯ ಸಿದ್ದರಾಜು ಗೋವಿಂದ ರಂಗಸ್ವಾಮಿ, ಶಿವಯ್ಯ, ಯುವಕ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಕುಮಾರ್ ಹಾಗೂ ಮಹಿಳಾ ಸಂಘಟನೆಯ ಶಶಿ ಪುಟ್ಟಮಾದಮ್ಮ ಹಾಜರಿದ್ದರು.

ಜೂಜಾಟ: 14 ಮಂದಿ ಬಂಧನ

ಕೊಳ್ಳೇಗಾಲ, ಡಿ.7(ಎನ್‌ಎನ್)– ತಾಲೂಕಿನ ಶಿವನಸಮುದ್ರದಲ್ಲಿ ಅಕ್ರಮವಾಗಿ ಜೂಜಾಡುತ್ತಿದ್ದ 14 ಮಂದಿಯನ್ನು ಬಂಧಿಸಿ, ಪಣಕ್ಕಿಟ್ಟಿದ್ದ 16.210 ರೂ. ಹಣ ಹಾಗೂ ನಾಲ್ಕು ಬೈಕ್‌ಗಳನ್ನು ಗ್ರಾಮಾಂತರ ಪೊಲೀಸರು ಜಪ್ತಿ ಮಾಡಿದ್ದಾರೆ.

ಕನಕಪುರ ತಾಲೂಕಿನ ತೋಟಹಳ್ಳಿ ಗ್ರಾಮದ ಕೃಷ್ಣ (48), ರಮೇಶ್ (45), ನಟರಾಜು (42), ರಮೇಶ್(36), ಕೃಷ್ಣ(55) ಮಧು(38), ರಾಕೇಶ್(46) ದಿಲೀಪ್ (34), ಆನಂದ್(34) ರವಿಚಂದ್ರ(42), ಗಡಸಹಳ್ಳಿ ಗ್ರಾಮದ ಉಮೇಶ್(43), ತಾಂಡ್ಯ ಗ್ರಾಮದ ರಮೇಶ್(49), ಸಾತನೂರು ಟೌನ್‌ನ ಹರೀಶ್‌ಕುಮಾರ್ (34), ಕುಣಿಗಲ್ ತಾಲೂಕಿನ ಹೊನ್ನ ಮಾಚನಹಳ್ಳಿ ಗ್ರಾಮದ ಪ್ರಸನ್ನ ಕುಮಾರ್ (43) ಎನ್ನಲಾಗಿದೆ.

ಈ ಆರೋಪಿಗಳು ಶಿವನಸಮುದ್ರ ಆದಿಪರಾಶಕ್ತಿ ಪಾರ್ಟಿ ಹಾಲ್ ಕೊಠಡಿಯಲ್ಲಿ ಅಕ್ರಮವಾಗಿ ಹಣವನ್ನು ಪಣವಾಗಿಟ್ಟು ಜೂಜಾಡುತ್ತಿದ್ದ ಖಚಿತ ಮಾಹಿತಿ ಮೇರೆಗೆ ಗ್ರಾಮಾಂತರ ಪೊಲೀಸರು ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಿದ್ದಾರೆ. ಈ ಸಂಬಂಧ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಅಂಬೇಡ್ಕರ್ ಪರಿನಿಬ್ಬಾಣ ದಿನ ಆಚರಣೆ

ಕೊಳ್ಳೇಗಾಲ, ಡಿ.7– ಡಾ.ಬಿ.ಆರ್.ಅಂಬೇಡ್ಕರ್ ಅವರ 69ನೇ ಪರಿನಿಬ್ಬಾಣ ದಿನದ ಅಂಗವಾಗಿ ಮುಂಬತ್ತಿ ಮೆರವಣಿಗೆ ನಡೆಸಲಾಯಿತು

ಪಟ್ಟಣದ ಭೀಮನಗರ ಬಡಾವಣೆಯಿಂದ ಹೊರಟ ಮೇಣದ ಬತ್ತಿ ಮೆರವಣಿಗೆ ಸಾಮಂದಿಗೇರಿ ಬೀದಿ, ಮಕ್ಕಳ ಮೈದಾನ ವೃತ್ತ, ಕನ್ನಿಕಾ ಪರಮೇಶ್ವರಿ ರಸ್ತೆ, ಮಸೀದಿ ವೃತ್ತ, ಡಾ.ಅಂಬೇಡ್ಕರ್ ರಸ್ತೆ ಮೂಲಕ ಅಂಬೇಡ್ಕರ್ ಪ್ರತಿಮೆಗೆ ತೆರಳಿದರು.

ಡಾ.ಬಿ.ಆರ್.ಅಂಬೇಡ್ಕರ್ ಸ್ಮಾರಕ ಸಂಘದ ಅಧ್ಯಕ್ಷರು ಆನಂದಮೂರ್ತಿ, ಕಾರ್ಯದರ್ಶಿ ಪಾಪಣ್ಣ, ಉಪಾಧ್ಯಕ್ಷ ಕಿರಣ್, ಹೈಕೋರ್ಟ್ ವಕೀಲರು ಮೋಹನ್ ಕುಮಾರ್, ಮುಳ್ಳೂರು ಮಂಜು, ಭೀಮನಗರ ದೊಡ್ಡ ಯಜಮಾನರು ಚಿಕ್ಕಮಾಳಿಗೆ ಹಾಗೂ ಇತರರು ಇದ್ದರು.

ಅಂಬೇಡ್ಕರ್ ಮಹಾ ಪರಿನಿರ್ವಾಣ ದಿನಾಚರಣೆ



ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ 69ನೇ ಮಹಾ ಪರಿನಿರ್ವಾಣ ದಿನದ ಅಂಗವಾಗಿ ಮೈಸೂರಿನ ಪಡುವಾರಹಳ್ಳಿಯ ಡಾ.ಅಂಬೇಡ್ಕರ್ ಪುತ್ಥಳಿ ಬಳಿ ಕ್ಯಾಂಡಲ್ ಬೆಳಗಿಸಿ ಗೌರವ ಸಮರ್ಪಿಸಲಾಯಿತು. ಜಯಲಕ್ಷ್ಮಿಪುರಂ ಠಾಣೆ ಇನ್ಸ್‌ಪೆಕ್ಟರ್ ಕುಮಾರ್, ವಿ.ವಿ.ಪುರಂ ಠಾಣೆ ಇನ್ಸ್‌ಪೆಕ್ಟರ್ ವಿವೇಕಾನಂದ, ಮುಖಂಡರಾದ ಚುದ್ರು ಮಹದೇವ್, ಸುರೇಶ್, ಸತೀಶ್, ಸುಕೇಶ್ ಮತ್ತಿತರರು ಪಾಲ್ಗೊಂಡಿದ್ದರು.



ಮೈಸೂರು ತಾಲೂಕು ಕಡಕೊಳ ಗ್ರಾಮದ ಅಂಬೇಡ್ಕರ್ ಯುವಕರ ಸಂಘದ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರ ಮಹಾ ಪರಿನಿರ್ವಾಣ ದಿನದ ಪ್ರಯುಕ್ತ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪನಮನ ಅರ್ಪಿಸಿ, ಕ್ಯಾಂಡಲ್ ಬೆಳಗಿಸುವ ಮೂಲಕ ಗೌರವ ಸಲ್ಲಿಸಲಾಯಿತು. ಗ್ರಾಮದ ಯಜಮಾನ ಭೈರವಸ್ವಾಮಿ, ವಕೀಲ ಲೋಕೇಶ್, ಮುಖಂಡರಾದ ರವಿ, ವೈರಮುಡಿ, ಭರತ್, ಸಿದ್ದಯ್ಯ, ಮಾಯಣ್ಣ, ಭೀರಯ್ಯ ಬೀರೇಶ್, ಪ್ರವೀಣ್, ಯೋಗಿ, ಬಾಲು, ಗಂಗಾ, ನರಸಿಂಹ, ಗಿರೀಶ್, ಯೋಗ ಶಿವಪ್ರಸಾದ್, ಚೇತನ್ ರಾಜ್, ಹೇಮಂತ್, ಕಾಳಯ್ಯ, ಮನು, ವಿನಯ ಮತ್ತಿತರರು ಹಾಜರಿದ್ದರು.

ಅಭಿನಂದನೆ



ಭಾವೈಕ್ಯತೆ ಹಾಗೂ ಆರೋಗ್ಯ ಕಾಳಜಿ ಸಂದೇಶ ಸಾರುವ ಉದ್ದೇಶದೊಂದಿಗೆ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ವಿನಯ್ ಸಿಂಗ್ ಮಾರ್ಗದರ್ಶನದಲ್ಲಿ ಸೈಕಲ್ ಜಾಥಾ ಹಮ್ಮಿಕೊಂಡಿರುವ 'ರಾಯಲ್ ರೈಡರ್ಸ್ ಮೈಸೂರ್' ತಂಡದ 11 ಸದಸ್ಯರಲ್ಲಿ ಒಬ್ಬರಾದ ಲಿಕ್ಕಾರಾಮ್ ಸೋಲಂಕಿ ಅವರನ್ನು ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು ಅಭಿನಂದಿಸಿದರು. ಈ ವೇಳೆ ಲಿಕ್ಕಾರಾಮ್ ಪತ್ನಿ ಪಿಸ್ತಾ ಚೌದರಿ, ಚುದ್ರಹಾಸ್, ನರಸಿಂಹೇಗೌಡ, ಮಧುಸೂದನ್, ಯದುಕುಮಾರ್, ಕೃಷ್ಣಪ್ಪ, ಹನುಮಗೌಡ ಮತ್ತಿತರರಿದ್ದರು.



ಮೈಸೂರು ತಾಲೂಕು ಮಾವಿನಹಳ್ಳಿ ಗ್ರಾಮದಲ್ಲಿ ಜೈ ಭೀಮ್ ಬಳಗದ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರ ಬೃಹತ್ ಫೋಟೋಗೆ ಪುಷ್ಪನಮನ ಅರ್ಪಿಸಿ, ಕ್ಯಾಂಡಲ್ ಬೆಳಗುವ ಮೂಲಕ ಅಂಬೇಡ್ಕರ್ ಅವರ ಮಹಾ ಪರಿನಿರ್ವಾಣ ದಿನ ಆಚರಿಸಲಾಯಿತು. ಸಮಾಜ ಸೇವಕ ಎಸ್.ಶ್ರೀಕಾಂತ್ ಮತ್ತು ಜೈ ಭೀಮ್ ಸಂಘಟನೆಯ ಪದಾಧಿಕಾರಿಗಳು ಪಾಲ್ಗೊಂಡಿದ್ದರು.



ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ 69ನೇ ಮಹಾ ಪರಿನಿಬ್ಬಾಣ ದಿನದ ಪ್ರಯುಕ್ತ ಮೈಸೂರಿನ ಪುರಭವನ ಆವರಣದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ (ಡಿಎಸ್‌ಎಸ್) ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಲಾಯಿತು. ಡಿಎಸ್‌ಎಸ್‌ನ ಜಿಲ್ಲಾಧ್ಯಕ್ಷ ಎನ್.ಬಸವರಾಜು ಕೈಲಾಸಪುರಂ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಣಿಕಂಠ ಚೆಟ್ಟಿಹುಂಡಿ ಹಾಜರಿದ್ದರು.

ಶಾಲೆಗೆ ಅಲ್ಮಿರಾ ಕೊಡುಗೆ ಹಿನ್ನೆಲೆ ಸನ್ಮಾನ...



ಮೈಸೂರು ತಾಲೂಕು ಜಯಪುರ ಹೋಬಳಿಯ ಅರಸಿನಕೆರೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರು 15 ಸಾವಿರ ಮೌಲ್ಯದ ಬೀರು (ಅಲ್ಮಿರಾ) ಅನ್ನು ಕೊಡುಗೆಯಾಗಿ ಶನಿವಾರ ಶಾಲೆಗೆ ನೀಡಿದರು. ಇದೇ ವೇಳೆ ಶಾಲೆಯ ವತಿಯಿಂದ ಎಸ್‌ಡಿಎಂಸಿ ಪದಾಧಿಕಾರಿಗಳು ಮತ್ತು ಶಿಕ್ಷಕರು ಶ್ರೀಕಾಂತ್ ಅವರನ್ನು ಸನ್ಮಾನಿಸಿದರು.

ಹೆಚ್.ಡಿ. ಕೋಟೆ ತಾಲೂಕಿನಲ್ಲಿ

ಶಿಥಿಲಗೊಂಡ ವಿದ್ಯುತ್ ಕಂಬಗಳ ಬದಲಾವಣೆ ಕಾಮಗಾರಿ ಶೀಘ್ರ ಆರಂಭ



ಜೋತು ಬಿದ್ದಿರುವ ಮಾರ್ಗಗಳಿಗೆ ಮಧ್ಯಂತರ ಕಂಬಗಳ ಅಳವಡಿಕೆ, ಶಿಥಿಲಗೊಂಡಿರುವ ಕಂಬಗಳ ಬದಲಾವಣೆ, ಹಳೆಯ ವಿದ್ಯುತ್ ವಾಹಕಗಳ ಬದಲಾವಣೆ, ಪರಿವರ್ತಕ ಕೇಂದ್ರಗಳ ನವೀಕರಣ ಮತ್ತು ಹೆಚ್ಚುವರಿ ಪರಿವರ್ತಕಗಳ ಅಳವಡಿಕೆ ಕಾಮಗಾರಿಗಳಿಗೆ ಚಾಲನೆ ನೀಡಿದ ಶಾಸಕ ಅನಿಲ್ ಚಿಕ್ಕಮಾದು.

ಹೆಚ್.ಡಿ. ಕೋಟೆ, ಡಿ.7– ಹೆಚ್.ಡಿ. ಕೋಟೆ ಪಟ್ಟಣ ಮತ್ತು ತಾಲೂಕಿನಲ್ಲಿ ಶಿಥಿಲಗೊಂಡಿರುವ ವಿದ್ಯುತ್ ಕಂಬಗಳನ್ನು ಬದಲಿಸುವ ಕಾಮಗಾರಿಯನ್ನು ಶೀಘ್ರ ಆರಂಭಿಸಲಾಗುವುದು ಎಂದು ಶಾಸಕ ಅನಿಲ್ ಚಿಕ್ಕಮಾದು ಇಂದಿಲ್ಲಿ ತಿಳಿಸಿದ್ದಾರೆ.

ತಾಲೂಕಿನ ವಡ್ಡರಗುಡಿ ಗ್ರಾಮದಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ 5 ಕೋಟಿ ವೆಚ್ಚದಲ್ಲಿ ಜೋತು ಬಿದ್ದಿರುವ ಮಾರ್ಗಗಳಿಗೆ ಮಧ್ಯಂತರ ಕಂಬಗಳ ಅಳವಡಿಕೆ, ಶಿಥಿಲಗೊಂಡಿರುವ ಕಂಬಗಳ ಬದಲಾವಣೆ, ಹಳೆಯ ವಿದ್ಯುತ್ ವಾಹಕಗಳ ಬದಲಾವಣೆ, ಪರಿವರ್ತಕ ಕೇಂದ್ರಗಳ ನವೀಕರಣ ಮತ್ತು ಹೆಚ್ಚುವರಿ ಪರಿವರ್ತಕಗಳ ಅಳವಡಿಕೆ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು ತಾಲೂಕಿಗೆ 9 ಸಬ್ ಸ್ಟೇಷನ್‌ಗಳನ್ನು ತರಲಾಗಿದ್ದು ಪ್ರಸ್ತುತ 3 ಸ್ಟೇಷನ್‌ಗಳು ಚಾಲನೆಯಾಗಿವೆ. ಉಳಿದ 6 ಸಬ್ ಸ್ಟೇಷನ್‌ಗಳ ಕಾಮಗಾರಿಗಳು ನಡೆಯುತ್ತಿವೆ ಎಂದು ವಿವರಿಸಿದರು. ಮಾದಾಪುರ, ಹೊಮ್ಮರಗಳ್ಳಿ, ಕ್ಯಾತನಹಳ್ಳಿ, ಬೆಟ್ಟದಬೀಡು, ಹೈರಿಗೆ, ಹೆಬ್ಬನಗುಪ್ಪೆ, ಕೆ.ಆರ್.ಪುರ, ಮುಳ್ಳೂರು, ಸಾಗರೆ, ಅಂತರಸಂತೆ, ಬಿ.ಮಟಕೆರೆ ಗ್ರಾಮಗಳಲ್ಲೂ ಸಹ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

> ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನಲ್ಲಿ ಸಂಪೂರ್ಣವಾಗಿ ವಿದ್ಯುತ್ ಸಮಸ್ಯೆ ಬಗೆಹರಿಸಲು 220 ಕೆ.ಬಿ. ವಿದ್ಯುತ್ ಘಟಕವನ್ನು ಸ್ಥಾಪಿಸಲು ಯೋಜನೆ ರೂಪಿಸಿದ್ದು ಮುಂದಿನ ದಿನಗಳಲ್ಲಿ 1200 ಕೋಟಿ ವೆಚ್ಚದಲ್ಲಿ ಕಾಮಗಾರಿ ಆರಂಭಿಸಲು ಜಾಗವನ್ನು ಹುಡುಕಲಾಗುತ್ತಿದೆ.
> – ಅನಿಲ್ ಚಿಕ್ಕಮಾದು, ಶಾಸಕ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಚಂದುಕುಮಾರ್, ಮುಖಂಡರಾದ ರಾಜು ವಿಶ್ವಕರ್ಮ, ಎಚ್.ಸಿ.ನರಸಿಂಹಮೂರ್ತಿ, ಜಿಮ್ ಯಶವಂತ್, ಸೋಮಶೇಖರ್, ಪುಟ್ಟಬಸವ, ಚಿಕ್ಕಣ್ಣ, ಕಾರ್ತಿಕ್, ಗಿರೀಶ್, ಕೆಂಡಗಣ್ಣಾರಾಧ್ಯ, ಶೈಲಾರಾಧ್ಯ, ದಶರಥ ಅಂಗಡಿ ಹುಚ್ಚಪ್ಪ, ಪ್ರೇಂಸಾಗರ್, ಮಂಜು, ರಮೇಶ್, ರವಿ, ಆಟೋ ರಮೇಶ್, ಅಶೋಕ್, ಸಿದ್ದರಾಮು, ಗುತ್ತಿಗೆದಾರ ಸಮಿವುಲ್ಲಾ ಇದ್ದರು.

ತಿ.ನರಸೀಪುರ ಸಮಗ್ರ ಅಭಿವೃದ್ಧಿಗೆ 200 ಕೋಟಿ ರೂ.ಗಳ ಬಿಡುಗಡೆ

ನನ್ನನ್ನು ಗೆಲ್ಲಿಸುತ್ತ ಬಂದಿರುವ ನಿಮ್ಮ ಋಣ ತೀರಿಸುವ ಕೆಲಸ ಮಾಡುವೆ : ಹೆಚ್‌ಸಿಎಂ



ತಿ.ನರಸೀಪುರ ತಾಲೂಕು ಹೆಮ್ಮಿಗೆ ಗ್ರಾಮದಲ್ಲಿ 25 ಲಕ್ಷ ರೂ.ಗಳ ವೆಚ್ಚದಲ್ಲಿ ರಸ್ತೆ ಮತ್ತು ಚರಂಡಿ ಕಾಮಗಾರಿಗೆ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಭೂಮಿಪೂಜೆ ನೆರವೇರಿಸಿದರು.

ತಿ.ನರಸೀಪುರ, ಡಿ.7– ತಿ.ನರಸೀಪುರ ವಿಧಾನಸಭಾ ಕ್ಷೇತ್ರವನ್ನು ಸಮಗ್ರ ಅಭಿವೃದ್ಧಿಪಡಿಸಲು ಮಾಸ್ಟರ್ ಪ್ಲಾನ್ ಸಿದ್ದಪಡಿಸಲಾಗಿರುವುದರಿಂದ 200 ಕೋಟಿ ರೂ.ಗಳ ಅನುದಾನ ಬಿಡುಗಡೆಯಾಗಿದ್ದು ಹಂತ ಹಂತವಾಗಿ ಅಭಿವೃದ್ಧಿ ಕಾಮಗಾರಿ ನಡೆಯಲಿದೆ ಎಂದು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಇಂದಿಲ್ಲಿ ತಿಳಿಸಿದರು.

ತಿ.ನರಸೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹೆಮ್ಮಿಗೆ ಗ್ರಾಮದ ಸಾಮಾನ್ಯ ವರ್ಗದ ಬೀದಿಯಲ್ಲಿ ಮುಖ್ಯಮಂತ್ರಿಗಳ ವಿಶೇಷ ಮಂಜೂರಾತಿ ಯೋಜನೆಯಡಿ 25 ಲಕ್ಷ ರೂ.ಗಳ ವೆಚ್ಚದ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಕ್ಷೇತ್ರದಲ್ಲಿ ಪ್ರಸಕ್ತ ಅವಧಿಯಲ್ಲಿ ನಿರೀಕ್ಷೆಗೂ ಮೀರಿದ ಅಭಿವೃದ್ಧಿ ಕೆಲಸಗಳು ಆಗಿವೆ. ಕ್ಷೇತ್ರದ ಸಮಗ್ರ ಅಭಿವೃದ್ಧಿಯತ್ತ ಮುನ್ನಡೆಯುತ್ತಿದೆ.

ಪ್ರಸಕ್ತ ವಿಧಾನ ಸಭಾ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗಾಗಿ 200 ಕೋಟಿಯಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ. ಪ.ಜಾತಿ, ಪ.ವರ್ಗ ಹಾಗೂ ಸಾಮಾನ್ಯ ವರ್ಗದ ಜನರು ವಾಸಿಸುವ ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿ ಕಾಮಗಾರಿ ಮಾಡಿ ಅನುಕೂಲ ಕಲ್ಪಿಸಿಕೊಡಲಾಗುತ್ತದೆ ಎಂದರು.

ಕ್ಷೇತ್ರದ ಜನತೆ ಕಳೆದ 40 ವರ್ಷಗಳಿಂದ ನನಗೆ ಆಶೀರ್ವಾದ ಮಾಡುವ ಮೂಲಕ ರಾಜಕೀಯ ಜೀವ ನೀಡಿದ್ದೀರಿ, ನೀವು ಆಯ್ಕೆ ಮಾಡಿದಾಗಲೆಲ್ಲಾ ಸರ್ಕಾರ ಅಧಿಕಾರಕ್ಕೆ ಬಂದು ನಾನು ಸಚಿವನಾಗಿ ಆಯ್ಕೆಯಾಗುತ್ತಾ ಬಂದಿದ್ದೇನೆ. ಪ್ರತಿ ಬಾರಿಯೂ ನನ್ನ ಮೇಲೆ ವಿಶ್ವಾಸವಿರಿಸಿ ನನ್ನನ್ನು ಆಯ್ಕೆ ಮಾಡಿದ ನಿಮ್ಮ ಋಣವನ್ನು ಕ್ಷೇತ್ರದಲ್ಲಿ ಅಭಿವೃದ್ಧಿ ಕಾಮಗಾರಿ ಮೂಲಕ ತೀರಿಸುತ್ತೇನೆ. ಹಾಗಾಗಿ ಕ್ಷೇತ್ರದ ಜನತೆಯ ಸಹಕಾರ ನಾವೆಂದಿಗೂ ಮರೆಯುವುದಿಲ್ಲ ಎಂದರು.

ನನ್ನಂತೆಯೇ ನನ್ನ ಮಗನಿಗೂ ರಾಜಕೀಯದಲ್ಲಿ ನೆಲೆ ಕಲ್ಪಿಸಿಕೊಡಲು ಕ್ಷೇತ್ರದ ಜನರು ಸಹಕಾರ ನೀಡಿದ್ದೀರಿ. ನಿಮ್ಮ ಪ್ರೀತಿ ವಿಶ್ವಾಸಕ್ಕೆ ನಾವಿಬ್ಬರೂ ಆಭಾರಿಯಾಗಿದ್ದು, ಮುಂದೆ ನಾನು ಮತ್ತು ಸುನೀಲ್ ಬೋಸ್ ಇಬ್ಬರೂ ಸೇರಿ ಕ್ಷೇತ್ರಕ್ಕೆ ಮತ್ತಷ್ಟು ಅಭಿವೃದ್ಧಿಯ ಕೊಡುಗೆ ನೀಡಲಿದ್ದೇವೆ. ಮುಂದೆಯೂ ಇದೇ ರೀತಿಯ ಸಹಕಾರವನ್ನು ಕ್ಷೇತ್ರದ ಜನತೆಯಿಂದ ಬಯಸುತ್ತೇವೆ ಎಂದರು.

ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ. ಬಸವರಾಜು, ಬಗರ್ ಹುಕುಂ ಕಮಿಟಿ ತಾಲೂಕು ಅಧ್ಯಕ್ಷ ಹೆಚ್.ವಿ. ಶೇಷಾದ್ರಿ, ಡೇರಿ ಕಾರ್ಯದರ್ಶಿ ಹೆಮ್ಮಿಗೆ ಸೋಮಣ್ಣ, ಗ್ರಾ.ಪಂ. ಮಾಜಿ ಅಧ್ಯಕ್ಷ ಗುರುಮೂರ್ತಿ, ಮುಖಂಡರುಗಳಾದ ಚಿಕ್ಕ ಹೊನ್ನಯ್ಯ, ಕರಿಯಪ್ಪ, ಈರಯ್ಯ, ಮಹದೇವ,ವಸಂತ ನಾಯಕ, ಮಲ್ಲಿ ರವಿ, ಬಂಗಾರ ಸ್ವಾಮಿ, ಶಂಕರ, ನಂಜುಂಡಯ್ಯ, ಮಹಾದೇವ, ಬಲ್ಲಯ್ಯ, ಪಿಡಿಒ ಚಿದಾನಂದ, ಮಹೇಶ್, ಸಚಿವರ ಆಪ್ತ ಕಾರ್ಯದರ್ಶಿ ಬಸವರಾಜು, ತಹಸೀಲ್ದಾರ್ ಸುರೇಶಾಚಾರ್, ಜಿಪಂ ಕಾರ್ಯಪಾಲಕ ಅಭಿಯಂತರೆ ಚರಿತ, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಅಭಿಯಂತರ ಸತೀಶ್ ಚಂದ್ರ, ಅಧಿಕಾರಿಗಳಾದ ಶಿವರಾಜು, ಶಾಂತ, ಕೆ.ಬಿ. ಶ್ವೇತ ಮತ್ತಿತರರು ಇದ್ದರು.

ಡಿ.9, 11ರಂದು ವಿದ್ಯುತ್ ವ್ಯತ್ಯಯ



ಹೆಚ್.ಡಿ.ಕೋಟೆ, ಡಿ.7– ಕೋಟೆ ಹಂಪಾಪುರ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ತುರ್ತು ಲಿಂಕ್ ಲೈನ್ ಹಾಗೂ ಸೋಲಾರ್ ಕಾಮಗಾರಿ ನಿಮಿತ್ತ ಡಿ.9 ಮತ್ತು ಡಿ.11 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಹಂಪಾಪುರ, ಕಂಚನಹಳ್ಳಿ, ಹೊಮ್ಮರಗಳ್ಳಿ, ಮಾದಾಪುರ, ಕೆ.ಬೆಳತ್ತೂರು, ಮನಗನಹಳ್ಳಿ, ಬಾಚೇಗೌಡನಹಳ್ಳಿ ಪಂಚಾಯಿತಿ ವ್ಯಾಪ್ತಿಯ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಲಂಕೆಯನ್ನು ಮಾದರಿ ಗ್ರಾಮವನ್ನಾಗಿ ಮಾಡುವೆ



ಲಂಕೆ ಗ್ರಾಮದ ರಸ್ತೆ ಅಭಿವೃದ್ಧಿಗೆ ಭೂಮಿ ಪೂಜೆಯನ್ನು ಶಾಸಕ ಅನಿಲ್ ಚಿಕ್ಕಮಾದು ನೆರವೇರಿಸಿದರು.

ಸರಗೂರು, ಡಿ.7– ತಾಲೂಕಿನಲ್ಲೆ ದೊಡ್ಡ ಗ್ರಾಮವಾದ ಲಂಕೆಯನ್ನು ಮಾದರಿ ಗ್ರಾಮವನ್ನಾಗಿ ಮಾಡುವೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದ್ದಾರೆ.

ತಾಲೂಕಿನ ಲಂಕೆ ಗ್ರಾಮದಲ್ಲಿ ಶನಿವಾರ ಒಂದು ಕೋಟಿ ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು. ದೊಡ್ಡ ಗ್ರಾಮವಾದ ಲಂಕೆಗೆ ನಾನು ಶಾಸಕನಾದ ಮೇಲೆ ಸುಮಾರು 5 ಕೋಟಿ ರೂ.ಗಳಿಗೂ ಹೆಚ್ಚು ಅನುದಾನ ನೀಡುವ ಮೂಲಕ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಅನುದಾನ ನೀಡಿ, ಮಾದರಿ ಗ್ರಾಮವನ್ನಾಗಿ ಮಾಡಲಾಗುವುದು. ಇಲ್ಲಿ ಎಲ್ಲ ಸಮುದಾಯದವರು ವಾಸವಾಗಿದ್ದೀರಿ ಎಂದ ಅವರು, ಮಾಜಿ ಶಾಸಕರಾದ ನನ್ನ ತಂದೆ ದಿ.ಚಿಕ್ಕಮಾದು, ಮಾಜಿ ಸಂಸದ ಆರ್.ಧ್ರುವನಾರಾಯಣ ಅವರು ಹೆಚ್ಚಿನ ಶ್ರಮ ವಹಿಸಿ, ಗ್ರಾಮಕ್ಕೆ ಮೂಲ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಶ್ರಮಿಸಿದ್ದರು ಎಂದು ಸ್ಮರಿಸಿದರು.

ಗ್ರಾಮದ ರಸ್ತೆ, ಚರಂಡಿ, ಅಂಬೇಡ್ಕರ್ ಸಮುದಾಯ ಭವನ, ಆಸ್ಪತ್ರೆ, ಅಂಗನವಾಡಿ ಸೇರಿದಂತೆ ಇನ್ನಿತರ ಕಾಮಗಾರಿಗಳ ಅಭಿವೃದ್ಧಿಗೆ ಅನುದಾನ ನೀಡಿದ್ದೇನೆ. ಮುಂದಿನ ದಿನಗಳಲ್ಲಿಯೂ ಇನ್ನೂ ಹೆಚ್ಚಿನ ಅನುದಾನ ನೀಡುವ ಮೂಲಕ ಮಾದರಿ ಗ್ರಾಮವನ್ನಾಗಿ ಮಾಡುತ್ತೇನೆ. ಹಾಗೆ ಹೈಟೆಕ್ ಬಸ್ ನಿಲ್ದಾಣ, ಕಾಡಂಚಿನಲ್ಲಿ ಪ್ರಾಣಿಗಳ ಹಾವಳಿ ತಡೆಗೆ ಬ್ಯಾರಿಕೇಡ್ ಕಾಮಗಾರಿಗೆ ಕ್ರಮ ವಹಿಸಲಾಗುವುದು. ಇದಕ್ಕೆ ಗ್ರಾಮಸ್ಥರ ಸಹಕಾರ ಅಗತ್ಯವಾಗಿದೆ ಎಂದರು.

ಇದಲ್ಲದೆ ನನ್ನ ರಾಜಕೀಯ ಗುರುಗಳಾದ ದಿವಂಗತ ಆರ್.ಧ್ರುವನಾರಾಯಣ್ ಅವರ ಕೊಡುಗೆಯೂ ಗ್ರಾಮಕ್ಕೆ ಇದೆ. ಹೀಗಾಗಿ ಎಲ್ಲರೂ ಒಗ್ಗೂಡಿ ಪಕ್ಷ ಬೆಂಬಲಿಸಬೇಕು. ಗ್ರಾಮದಲ್ಲಿನ ಹತ್ತಾರು ಸಮಸ್ಯೆಗಳನ್ನು ಹಂತ–ಹಂತವಾಗಿ ಬಗೆಹರಿಸುವ ನಿಟ್ಟಿನಲ್ಲಿ ಶ್ರಮಿಸುವೆ ಎಂದು ಅವರು ಇದೇ ವೇಳೆ ಹೇಳಿದರು.

ಎಇಇ ರಮೇಶ್, ಗುತ್ತಿಗೆದಾರ ಮಂಜುನಾಥ್, ಲಂಕೆ ಗ್ರಾಮದ ಗೌಡಿಕೆ ಶಿವಮಲ್ಲಪ್ಪ, ಮಾಜಿ ಗೌಡಿಕೆ ಸೋಮಪ್ಪ, ಯಜಮಾನರಾದ ರಂಗಯ್ಯ, ಚನ್ನಯ್ಯ, ನಿಂಗಯ್ಯ ಮಲ್ಲಿಕಾರ್ಜನ, ಪಾರ್ವತಿ, ಬಿಲ್ಲಯ್ಯ, ಗ್ರಾಮ ಪಂಚಾಯಿತಿ, ಸದಸ್ಯರಾದ ಪುಟ್ಟು, ಕರಿಸ್ವಾಮಿ, ಸೋಮಶೇಖರ್, ಕಾಂಗ್ರೆಸ್ ಪಕ್ಷದ ಮುಖಂಡರಾದ ಗುರುಸ್ವಾಮಿ, ಸೌಮ್ಯ ಮಂಜುನಾಯ್ಕ, ಶಶಿಪಾಟೀಲ್, ಉಮೇಶ್ ವನಸಿರಿ, ಕೃಷ್ಣಪ್ಪ, ಚಿನ್ನಪ್ಪ, ದೇವರಾಜು, ದಯಾನಂದ, ಮಹದೇವಸ್ವಾಮಿ ಮಾಧು, ಸೋಮು, ಈಶ್ವರ್, ಆದಿಕರ್ನಾಟಕ ಮಹಾಸಭಾದ ಖಜಾಂಚಿ ಶ್ರೀನಿವಾಸ್, ಸಹಕಾರ ಸಂಘದ ಉಪಾಧ್ಯಕ್ಷ ಮಹೇಶ್, ವೆಂಕಟಸ್ವಾಮಿ, ಉಮೇಶ್, ಪಿ.ನಂದೀಶ್, ಗ್ರಾಮಸ್ಥರು, ಉಪಸ್ಥಿತರಿದ್ದರು.

ಕಳಲೆ ಗ್ರಾಪಂ ಕಟ್ಟಡ ತಾಲೂಕಿಗೆ ಮಾದರಿ ಕಟ್ಟಡ



ಕಳಲೆ ಗ್ರಾಮ ಪಂಚಾಯಿತಿ ಕಟ್ಟಡವನ್ನು ಶಾಸಕ ದರ್ಶನ್ ಧ್ರುವನಾರಾಯಣ ಉದ್ಘಾಟಿಸಿದರು.

ನಂಜನಗೂಡು: ತಾಲೂಕಿನ ಕಳಲೆ ಗ್ರಾಮದಲ್ಲಿ 75 ಲಕ್ಷ ವೆಚ್ಚದಲ್ಲಿ ನೂತನವಾಗಿ ನಿರ್ಮಾಣವಾಗಿರುವ ಗ್ರಾಮ ಪಂಚಾಯಿತಿ ಕಟ್ಟಡ ತಾಲೂಕಿಗೆ ಮಾದರಿ ಕಟ್ಟಡವಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ಹೇಳಿದರು.

ಅವರು ಕಳಲೆ ಗ್ರಾಮದಲ್ಲಿ ಶನಿವಾರ 75 ಲಕ್ಷ ವೆಚ್ಚದಲ್ಲಿ ನೂತನವಾಗಿ ನಿರ್ಮಾಣವಾಗಿರುವ ಗ್ರಾಮ ಪಂಚಾಯಿತಿ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದರು.

ಗ್ರಾಮ ಪಂಚಾಯಿತಿ ಕಟ್ಟಡ ಹಳೆಯದಾಗಿದ್ದ ಕಾರಣ, ಅಧಿಕಾರಿಗಳು ಸಾರ್ವಜನಿಕರಿಗೆ ಸೇವೆ ಒದಗಿಸಲು ಕಷ್ಟವಾಗಿತ್ತು ಆದ್ದರಿಂದ ಕಳೆದ ಆರು ತಿಂಗಳ ಹಿಂದೆ 75 ಲಕ್ಷ ವೆಚ್ಚದಲ್ಲಿ ಗ್ರಾಮ ಪಂಚಾಯಿತಿ ಕಟ್ಟಡ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಲಾಗಿತ್ತು, ಬರೀ ಆರು ತಿಂಗಳ ಅವಧಿಯಲ್ಲಿ ಕಾಮಗಾರಿ ಮುಕ್ತಾಯಗೊಂಡು ಇಂದು ಲೋಕಾರ್ಪಣೆ ಗೊಳಿಸಲಾಗಿದೆ, ಈ ಕಟ್ಟಡದಿಂದಾಗಿ ಸಾರ್ವಜನಿಕರಿಗೆ ಉತ್ತಮ ಸೇವೆ ನೀಡಲು ಸಾಧ್ಯವಾಗಲಿದೆ ಎಂದರು.

ಕಳಲೆ ಗ್ರಾಮ ಇತಿಹಾಸವುಳ್ಳ ಅತ್ಯಂತ ದೊಡ್ಡ ಗ್ರಾಮವಾಗಿರುವ ಕಾರಣ, ಈ ಗ್ರಾಮದ ಸಂಪೂರ್ಣ ಅಭಿವೃದ್ಧಿಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯರವರು ಎರಡು ಕೋಟಿ ಅನುದಾನವನ್ನು ಒಮ್ಮೆಲೆ ಬಿಡುಗಡೆಗೊಳಿಸಿದ್ದರು, ಇದರಿಂದ ಗ್ರಾಮದಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ ಮುಕ್ತಾಯಗೊಂಡು ಜನರಿಗೆ ಅನುಕೂಲವಾಗಿದೆ, ಗರಡಿ ಮನೆ ನಿರ್ಮಾಣ, ಮತ್ತು ಗ್ರಾಮದ ಕೆಲವು ಬೀದಿಗಳಲ್ಲಿ ರಸ್ತೆ ಕಾಮಗಾರಿ, ರಥ ಬೀದಿಯ ಅಭಿವೃದ್ಧಿ ಕಾಮಗಾರಿ ನಡೆಯಬೇಕಿದ್ದು, ಈ ಬಾರಿ ಮುಖ್ಯಮಂತ್ರಿ ಸಿದ್ದರಾಮಯ್ಯರವರು 50 ಕೋಟಿ ವಿಶೇಷ ಅನುದಾನ ನೀಡಲಿದ್ದು, ಗ್ರಾಮಕ್ಕೆ ಹೆಚ್ಚಿನ ಅನುದಾನ ನಿಯೋಜಿಸಿ ಸಮಗ್ರವಾಗಿ ಅಭಿವೃದ್ಧಿಪಡಿಸಲಾಗುವುದು ಎಂದು ಭರವಸೆ ನೀಡಿದರು.

ಗ್ರಾಪಂ ಸದಸ್ಯ ಕಳಲೆಮಹೇಶ್ ಮಾತನಾಡಿದರು. ಸಮಾರಂಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರದೀಪ್ ಕುಮಾರ್, ಗ್ರಾಪಂ ಅಧ್ಯಕ್ಷೆ ಲತಾಮಹೇಶ್, ಉಪಾಧ್ಯಕ್ಷ ಹರೀಶ್, ಗ್ರಾಪಂ ಸದಸ್ಯರಾದ ಮಹೇಶ್, ರಾಜಮ್ಮ ಶಿವಕುಮಾರಿ, ವಿಶಾಲಕ್ಷಮ್ಮ ಶಿವಕುಮಾರ್, ಜಿ.ಪಂ. ಮಾಜಿ ಸದಸ್ಯ ಮಹದೇವು, ಮುಖಂಡರಾದ ಕಳಲೆರಾಜೇಶ್, ದೊರೆಸ್ವಾಮಿನಾಯಕ, ಬೈರನಾಯಕ, ಕೆ.ಡಿ.ಮಂಜು, ರಾಚನಾಯಕ, ತಗಡೂರುನಾಯಕ, ಸೂರಹಳ್ಳಿ ಲಕ್ಷ್ಮಣ, ಹಣಕಾರನಾಯಕ, ನಾಗರಾಜು, ಮಾದಪ್ಪ ತಾಪಂ ಇಒ ಜೆರಾಲ್ಡ್ ರಾಜೇಶ್, ಪಿಡಿಒ ಹುಜ್ಮನಜೀಬ್, ನಿರ್ಮಿತಿ ಕೇಂದ್ರದ ಎಇಇ ಮಂಜುನಾಥ್, ಎಇ ಯಶವಂತ್, ಇತರ ಪ್ರಮುಖರು ಉಪಸ್ಥಿತರಿದ್ದರು.

ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ



ಮಾಡ್ರಹಳ್ಳಿ ಗ್ರಾಮದಲ್ಲಿ ಅಂಬೇಡ್ಕರ್ ಪರಿನಿರ್ವಾಣ ದಿನದ ಅಂಗವಾಗಿ ಅಂಬೇಡ್ಕರ್ ಅವರ ಪುತ್ಥಳಿಗೆ ಗ್ರಾಮದ ಮುಖಂಡರು, ಹಾಗೂ ಸಂಘದ ಪದಾಧಿಕಾರಿಗಳು, ಗ್ರಾಮಸ್ಥರು ಮಾಲಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿದರು.

ಸೂಳೆ ಕೋಟೆಯಲ್ಲಿ ಹನುಮ ಜಯಂತಿ ಆಚರಣೆ

ಬೆಟ್ಟದಪುರ: ಸಮೀಪದ ಸೂಳೆಕೋಟೆಯಲ್ಲಿ ಆಂಜನೇಯ ದೇವಾಲಯದಲ್ಲಿ ಮಂಗಳವಾರ ಹನುಮ ಜಯಂತಿ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯಿತು.

ಮಂಗಳವಾರ ಮುಂಜಾನೆಯಿಂದಲೇ ತೀರ್ಥ ಸಂಗ್ರಹಣೆ ಪಂಚಾಮೃತ ಅಭಿಷೇಕ, ಲೋಕಕಲ್ಯಾಣಾರ್ಥ ಶ್ರೀ ರಾಮ ತಾರಕ ಹೋಮ, ಮಹಾಮಂಗಳಾರತಿ ಸೇರಿದಂತೆ ವಿಶೇಷ ಪೂಜಾ ಕೈಂಕರ್ಯಗಳು ಜರುಗಿದವು. ಎಸ್.ಎಸ್.ಶಂಕರಪ್ಪ, ಶಿವರಾಜು, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಸುರೇಶ್, ಶಿವರಾಜು, ಕಾಂತರಾಜು, ಚಂದ್ರಹಾಸ್, ಶಿವಣ್ಣ, ಜಯಸ್ವಾಮಿನಾಯಕ, ರಾಜಶೇಖರ್, ಬಸವರಾಜು, ಸುಬ್ರಹ್ಮಣ್ಯ, ನಿಂಗರಾಜು, ಸುಮಿತ್, ಶಿವರಾಂ, ಮೊಹಮ್ಮದ್ ಪಾಷಾ, ಮಲ್ಲಿಕಾರ್ಜುನ್, ಇದ್ದರು.

ಪ್ರೀತಮ್ ಗೌಡರಿಗೆ ಅಭಿನಂದನೆ

ಮೈಸೂರು ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದ ನಂಜನಗೂಡಿನ ವಿನಯ್ ಕುಮಾರ್ ಅವರು ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಪ್ರೀತಮ್ ಗೌಡ ಹಾಸನದ ಅವರ ನಿವಾಸದಲ್ಲಿ ಭೇಟಿ ಮಾಡಿ ಅಭಿನಂದನೆ ಸಲ್ಲಿಸಿದರು. ಇದೇ ಸಂದರ್ಭದಲ್ಲಿ ಪರೀಕ್ಷಿತ್ ರಾಜ್ ಅರಸ್, ಬನ್ನೂರು ರಾಮಚಂದ್ರಸಾರತಿಲಕ್ ಉಪಸ್ಥಿತರಿದ್ದರು.



ಸಾಮಾಜಿಕ ಕ್ರಾಂತಿ ಹುಟ್ಟುಹಾಕಿದ ದೇಶದ ಪಿತಾಮಹ



ತಿ.ನರಸೀಪುರ ಪಟ್ಟಣದ ತಾಲೂಕು ಎದುರಿನ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯ(ಭೀಮವಾದ)ಸಂಘಟನೆ ಸದಸ್ಯರು ಮಹಾಪರಿನಿರ್ವಾಣ ದಿನ ಆಚರಿಸಿದರು.

ತಿ.ನರಸೀಪುರ, ಡಿ.7– ಆಧುನಿಕ ಭಾರತದ ಪಿತಾಮಹ ಭಾರತದಲ್ಲಿ ಸಾಮಾಜಿಕ ಕ್ರಾಂತಿಯನ್ನು ಹುಟ್ಟುಹಾಕಿ ದಲಿತ ಸಮುದಾಯದ ಏಳಿಗೆಗಾಗಿ, ಸಾಮಾನತೆಗಾಗಿ ಡಾ.ಬಿ.ಆರ್. ಅಂಬೇಡ್ಕರ್ ಅವರು ನಡೆಸಿದ ಚಿಂತನೆಗಳು, ಹೋರಾಟಗಳು ಚಿರಸ್ಮರಣೀಯ ಎಂದು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯ(ಭೀಮವಾದ)ಸಂಘಟನೆ ಜಿಲ್ಲಾ ಸಂಘಟನಾ ಸಂಚಾಲಕ ಕೆಂಪಯ್ಯನಹುಂಡಿ ಆರ್.ರಾಜು ಹೇಳಿದರು.

ಭಾರತ ರತ್ನ ಬಿ.ಆರ್.ಅಂಬೇಡ್ಕರ್ ಅವರ ಮಹಾಪರಿನಿರ್ವಾಣ ದಿನದ ಅಂಗವಾಗಿ ಸಮಿತಿಯ ಸದಸ್ಯರೊಡಗೂಡಿ ಪಟ್ಟಣದ ತಾಲೂಕು ಕಚೇರಿ ಎದುರಿನ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಗೌರವ ಸಲ್ಲಿಸಿ ಅವರು ಮಾತನಾಡಿದರು.

ಅಂಬೇಡ್ಕರ್ ಅವರು ನಡೆದು ಬಂದ ಕಷ್ಟದ ದಾರಿಯಲ್ಲಿ ಇಡೀ ಭಾರತವೇ ಗುರುತಿಸುವಂತಹ ವ್ಯಕ್ತಿಯಾಗಿ ಸಮಾಜದ ಹಿಂದುಳಿದವರ ದೀನ ದಲಿತರ ಸಮಗ್ರ ಅಭಿವೃದ್ಧಿಗೆ ಅವರು ಹಾಕಿ ಕೊಟ್ಟಿರುವ ಭದ್ರ ಬುನಾದಿಯ ಪರಿಣಾಮ ಇಂದು ದಲಿತರು ಸಮಾಜದಲ್ಲಿ ಉತ್ತಮ ಜೀವನ ನಡೆಸಲು ಸಾಧ್ಯವಾಗಿದೆ.ವಿಶ್ವದ ಬಹಳ ವಿಸ್ತಾರವಾದ ಅತಿ ದೊಡ್ಡ ಸಂವಿಧಾನ ರಚಿಸಿದ ಮಹಾನ್ ಚೇತನ ಅಂಬೇಡ್ಕರ್ ಎಂದರು.

ತಾಲೂಕು ಸಂಚಾಲಕ ಮನೋಜ್ ಕುಮಾರ್ ಮಾತನಾಡಿ ಭಾರತರತ್ನ ಡಾ.ಭೀಮ್ ರಾವ್ ಅಂಬೇಡ್ಕರ್ ಅವರು ಭಾರತದ ಸಂವಿಧಾನಶಿಲ್ಪಿ ಮಾತ್ರವಲ್ಲದೇ, ನ್ಯಾಯ ಶಾಸ್ತ್ರಜ್ಞರಾಗಿ, ಅರ್ಥಶಾಸ್ತ್ರಜ್ಞರಾಗಿ, ಸಮಾಜ ಸುಧಾರಕರಾಗಿ, ಮಹಿಳೆಯರು, ದಲಿತರು, ಅಲ್ಪಸಂಖ್ಯಾತರು ಸೇರಿದಂತೆ, ಅಸ್ಪೃಶ್ಯತೆ, ಅಸಮಾನತೆಯ ವಿರುದ್ಧ ದಿಟ್ಟತನದಿಂದ ಹೋರಾಡಿ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ಸಿಗುವಂತೆ ಮಾಡಿದ ಮಹಾನ್ ಮಾನವತಾವಾದಿಯಾಗಿದ್ದರು ಎಂದು ಬಣ್ಣಿಸಿದರು.

ಜಿಲ್ಲಾ ಸಮಿತಿ ಸದಸ್ಯ ಮರಿಸ್ವಾಮಿ, ತಾಲೂಕು ಸಮಿತಿ ಸದಸ್ಯ ಕುಮಾರ್, ಪರಶುರಾಮ್, ಶಿವು ಪ್ರಭಾಕರ್, ಅರ್ಜುನ್ ಮತ್ತಿತರರಿದ್ದರು.

ಜ.1ರಿಂದ ಚುಂಚನಕಟ್ಟೆ ಜಾನುವಾರು ಜಾತ್ರೆ ಆರಂಭ

ಜ.16ಕ್ಕೆ ಶ್ರೀರಾಮ ರಥೋತ್ಸವ, ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಶಾಸಕ ಡಿ.ರವಿಶಂಕರ್



ಅಧಿಕಾರಿಗಳ ಸಭೆಯಲ್ಲಿ ಮಾತನಾಡುತ್ತಿರುವ ಶಾಸಕ ಡಿ.ರವಿಶಂಕರ್.

ಚುಂಚನಕಟ್ಟೆ, ಡಿ.7– 2026ರ ಜ.1 ರಿಂದ ಇತಿಹಾಸ ಪ್ರಸಿದ್ಧ ಚುಂಚನಕಟ್ಟೆ ಜಾನುವಾರು ಜಾತ್ರೆ ಆರಂಭವಾಗಲಿದೆ. ಅದೇ ರೀತಿ ಜ.16 ರಂದು ಶ್ರೀರಾಮ ರಥೋತ್ಸವ ನಡೆಯಲಿದ್ದು, ಯಶಸ್ವಿಗೆ ಅಧಿಕಾರಿಗಳು ಸಾರ್ವಜನಿಕರ ಸಹಕಾರದೊಂದಿಗೆ ಅದ್ದೂರಿಯಿಂದ ಆಚರಿಸುವಂತೆ ಶಾಸಕ ಡಿ.ರವಿಶಂಕರ್ ತಾಲೂಕು ಆಡಳಿತಕ್ಕೆ ಸೂಚನೆ ನೀಡಿದರು.

ಶನಿವಾರ ಚುಂಚನಕಟ್ಟೆ ಶ್ರೀರಾಮ ದೇವಾಲಯದ ಅವರಣದಲ್ಲಿ ನಡೆದ ಜಾನುವಾರು ಜಾತ್ರೆ ಮತ್ತು ಶ್ರೀರಾಮ ರಥೋತ್ಸವದ ಪೂರ್ವ ಭಾವಿಯ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು

ಜಾತ್ರೆ ಆರಂಭಕ್ಕೆ ಮುನ್ನವೇ ಗ್ರಾಮದಲ್ಲಿ ಪೂರ್ಣ ಪ್ರಮಾಣದಲ್ಲಿ ಸ್ವಚ್ಚತೆಗೆ ಆದ್ಯತೆ ನೀಡಬೇಕು. ಜತಗೆ ಜಾತ್ರಾ ಮಾಳದಲ್ಲಿ ಸಾರ್ವಜನಿಕರಿಗೆ ಶುದ್ದ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು. ಕೆ.ಅರ್.ನಗರದಿಂದ ಹೊಸೂರು ತನಕ ರಸ್ತೆಗಳನ್ನು ಅಭಿವೃದ್ದಿ ಪಡಿಸುವಂತೆ ಲೋಕೋಪಯೋಗಿ ಇಲಾಖೆಯವರಿಗೆ ತಾಕೀತು ಮಾಡಿದರು

ಜಾತ್ರಾ ಮಾಳಕ್ಕೆ ಬರುವ ರಾಸುಗಳಿಗೆ ಮತ್ತು ಸಾರ್ವಜನಿರಿಗೆ ಯಾವುದೇ ರೋಗ ರುಜಿನಗಳು ಹರಡದಂತೆ ಪಶು ಜತಗೆ ತಾತ್ಕಾಲಿಕ ಸಾರ್ವಜನಿಕ ಚಿಕಿತ್ಸಾ ಕೇಂದ್ರವನ್ನು ತೆರೆದು ಚಿಕಿತ್ಸೆಗೆ ಬೇಕಾಗುವ ಔಷಧಗಳು ಪರಿಕರಗಳು ದಾಸ್ತಾನು ಮಾಡಿ ತುರ್ತುವಾಹನವನ್ನು ಸುಸ್ಥಿತಿಯಲ್ಲಿ ಇಡಬೇಕೆಂದು ಪಶು ಮತ್ತು ಆರೋಗ್ಯ ಇಲಾಖೆಯವರಿಗೆ ಸೂಚಿಸಿದರು.

ಜಾತ್ರೆಗೆ ಹೆಚ್ಚಿನ ಸಂಖ್ಯೆಯಲ್ಲಿ ರಾಜ್ಯ, ಹೊರ ರಾಜ್ಯದಿಂದ ಜನರು ಆಗಮಿಸುವುದರಿಂದ ಹೆಚ್ಚಿನ ಸಂಖ್ಯೆಯ ಬಸ್ ಸೌಲಭ್ಯ ಕಲ್ಪಿಸುವುದರ ಜತಗೆ ಜಾತ್ರಾ ಮಾಳಕ್ಕೆ ವಿದ್ಯುತ್ ಅಲಂಕಾರದ ಜತಗೆ ಬೀದಿ ದೀಪಗಳ ಅಳವಡಿಕೆ ಕ್ರಮ ಕೈಗೊಳ್ಳಬೇಕೆಂದು ಚೆಸ್ಕಾಂ ಮತ್ತು ಸಾರಿಗೆ ಇಲಾಖೆಗೆ ಆದೇಶಿಸಿದ ಅವರು ಡಿಸೆಂಬರ್ 31 ರಿಂದಲೇ ಜಾತ್ರೆಗೆ ಭದ್ರತೆ ಒದಗಿಸಬೇಕೆಂದು ಪೊಲೀಸ್ ಇಲಾಖೆಗೆ ಸೂಚನೆ ನೀಡಿದರು

ಎಪಿಎಂಸಿ ಮಾಜಿ ಅಧ್ಯಕ್ಷ ಕೆಡಗ ನಟರಾಜು, ಮುಖಂಡರಾದ ಸಾಲಿಗ್ರಾಮ ಬಲರಾಮ್, ಮಹಾಲಿಂಗಣ್ಣ, ಮೀನ್ ಮಧು, ಸಿ.ಎಸ್.ಗಿರೀಶ್, ಗ್ರಾ.ಪಂ ಮಾಜಿ ಅಧ್ಯಕ್ಷೆ ಗೌರಮ್ಮ ಜಾತ್ರೆಯ ಕುರಿತು ಸಲಹೆ ಸೂಚನೆ ನೀಡಿ ಮಾತನಾಡಿದರು.


ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಉದಯಶಂಕರ್, ಎಂ.ಎಸ್. ಮಹದೇವು, ವಕ್ತಾರ ಸಯ್ಯದ್ ಜಾಬೀರ್, ಕುಪ್ಪೆ ಗ್ರಾ.ಪಂ.ಅಧ್ಯಕ್ಷೆ ಶಾರದಮ್ಮ, ಸದಸ್ಯೆ ಗೌರಮ್ಮ ಸಾಲಿಗ್ರಾಮ ತಹಸೀಲ್ದಾರ್ ರುಕೀಯಾ ಬೇಗಂ, ತಾಪಂ ಇಓ ರವಿಕುಮಾರ್, ಬಿಇಓ ರೇವಣ್ಣ, ಪಲ ಎಇಇಗಳಾದ ಅರ್ಕೇಶ್ ಮೂರ್ತಿ, ಪಶು ಇಲಾಖೆಯ ಡಾ.ರಾಮು, ಉಪತಹಸೀಲ್ದಾರ್ ಮಹೇಶ್, ವಿ.ಎ.ಓ ಮೌನೇಶ್, ಪಾರುಪತ್ತೆದಾರ್ ಯತೀರಾಜ್ ಪಿಡಿಓ ಯೋಗನಂದ್, ಕಾಂಗ್ರೆಸ್ ಮುಖಂಡರಾದ ಮಿರ್ಲೆ ನಂದೀಶ್, ಡೈರಿ ಮಾದು, ಬಡ್ಡೆಮಂಜಣ್ಣ, ಚಿಕ್ಕಕೊಪ್ಪಲು ನವೀನ್, ಕೋಳಿಮನುಗೌಡ, ಕಾಡು ವಿಜಿ, ನಾಡಪ್ಪನಹಳ್ಳಿ ಅಶ್ವತ್, ನೂತನ್ ಗೌಡ, ಸಚಿನ್, ಸೇರಿದಂತೆ ಮತ್ತಿತರರು ಹಾಜರಿದ್ದರು.

> ಜನವರಿ 16ರಂದು ಚುಂಚನಕಟ್ಟೆ ರಥೋತ್ಸವದ ದಿನ ಯಾವುದೇ ಅಹಿತಕರ ಘಟನೆ ನಡೆಯದಂತೆ ಚುಂಚನಕಟ್ಟೆ ಮತ್ತು ಸುತ್ತ ಮುತ್ತಲಿನ ಗ್ರಾಮದ ಮದ್ಯದ ಅಂಗಡಿಗಳನ್ನು ಮುಚ್ಚಿಸುವಂತೆ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಜತಗೆ ಜನವರಿ 1 ರಿಂದ ರೈತರು ರಾಸುಗಳೊಂದಿಗೆ ಆಗಮಿಸಬೇಕು. ಅದಕ್ಕಿಂತ ಮುಂಚೆ ಬಂದವರಿಗೆ ಜಾತ್ರೆ ಮಾಳಕ್ಕೆ ಅವಕಾಶ ಇರುವುದಿಲ್ಲ.
> – ಡಿ.ರವಿಶಂಕರ್, ಶಾಸಕ

ಮೈಸೂರಲ್ಲಿ ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ



ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ(ಟಿಇಟಿ) ಬರೆಯಲು ಬಂದ ಅಭ್ಯರ್ಥಿಗಳನ್ನು ತಪಾಸಣೆಗೊಳಪಡಿಸುತ್ತಿರುವುದು.



ಪರೀಕ್ಷಾ ಕೇಂದ್ರಕ್ಕೆ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್, ಡಿಡಿಪಿಐ ಉದಯ್‌ಕುಮಾರ್ ತೆರಳಿ ಪರಿಶೀಲಿಸಿದರು.

ಮೈಸೂರು,ಡಿ.7(ಎಂಟಿವೈ)– ಮೈಸೂರಿನ ವಿವಿಧೆಡೆ ಪರೀಕ್ಷಾ ಕೇಂದ್ರಗಳಲ್ಲಿ ಭಾನುವಾರ ನಡೆದ ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ –2025 (ಟಿಇಟಿ)ಯ ಮೊದಲ ಪತ್ರಿಕೆಯ ಪರೀಕ್ಷೆಯಲ್ಲಿ 3,412 ಅಭ್ಯರ್ಥಿಗಳು ಹಾಗೂ ಮಧ್ಯಾಹ್ನ ನಡೆದ ಎರಡನೇ ಪತ್ರಿಕೆಯ ಪರೀಕ್ಷೆಗೆ 11,477 ಅಭ್ಯರ್ಥಿಗಳು ಹಾಜರಾಗಿ ಟಿಇಟಿ ಪರೀಕ್ಷೆ ಬರೆದರು.

ಮೊದಲ ಪತ್ರಿಕೆ ಪರೀಕ್ಷೆ ಬರೆಯಲು 3685 ಅಭ್ಯರ್ಥಿಗಳು ಹೆಸರು ನೋಂದಾಯಿಸಿದ್ದರು. ಎರಡನೇ ಪತ್ರಿಕೆ ಪರೀಕ್ಷೆ ಬರೆಯಲು 12,144 ಅಭ್ಯರ್ಥಿಗಳು ಹೆಸರು ನೋಂದಾಯಿಸಿದ್ದರು. ಈ ಹಿನ್ನೆಲೆಯಲ್ಲಿ ಜಿಲ್ಲಾಡಳಿತ, ಶಾಲಾ ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆ ಸಹಕಾರದಿಂದ ಮೈಸೂರಿನ 47 ಪರೀಕ್ಷಾ ಕೇಂದ್ರಗಳಲ್ಲಿ ಟಿಇಟಿ ಪರೀಕ್ಷೆ ಬರೆಯಲು ವ್ಯವಸ್ಥೆ ಕಲ್ಪಿಸಿತ್ತು. ಪರೀಕ್ಷೆಯಲ್ಲಿ ಅಕ್ರಮ ತಡೆಗಟ್ಟಲು ಪರೀಕ್ಷಾ ಕೇಂದ್ರದಲ್ಲಿ ಸಿಸಿ ಕ್ಯಾಮರಾ ಅಳವಡಿಸಿ, ಬಿಗಿ ಭದ್ರತೆಯಲ್ಲಿ ಟಿಇಟಿ ಪರೀಕ್ಷೆ ನಡೆಸಲಾಯಿತು.

ಕಟ್ಟುನಿಟ್ಟಿನ ಕ್ರಮ: ಪರೀಕ್ಷಾ ಕೇಂದ್ರ ಪ್ರವೇಶಕ್ಕೂ ಮುನ್ನ ಪ್ರತಿಯೊಬ್ಬ ಅಭ್ಯರ್ಥಿಗಳನ್ನು ಪ್ರವೇಶ ಪತ್ರದಲ್ಲಿರುವ ಭಾವಚಿತ್ರ ಹಾಗೂ ಅಭ್ಯರ್ಥಿಗಳ ಮುಖಚಹರೆಯನ್ನು ಪರಿಶೀಲಿಸಲಾಯಿತು. ಎಲ್ಲಾ ಅಭ್ಯರ್ಥಿಗಳ ಮುಖಚಹರೆಯನ್ನು ಕ್ಯಾಮರಾದಲ್ಲಿ ಚಿತ್ರೀಕರಿಸಿ ಪರಿಶೀಲಿಸಲಾಯಿತು. ನಂತರ ಎಲ್ಲಾ ಅಭ್ಯರ್ಥಿಗಳನ್ನು ಭದ್ರತಾ ಸಿಬ್ಬಂದಿ ಪರಿಶೀಲಿಸಿದರು. ಲೋಹ ಶೋಧಕದಿಂದ ತಪಾಸಣೆ ಮಾಡಿದರು. ಕಾಪಿ ಹೊಡೆಯಲು ಚೀಟಿ ತಂದಿರಬಹುದೆಂಬ ಶಂಕೆಯಿಂದ ಎಲ್ಲರನ್ನು ತಪಾಸಣೆಗೆ ಒಳಪಡಿಸಿದ ನಂತರ ಪರೀಕ್ಷಾ ಕೊಠಡಿ ಪ್ರವೇಶಿಸಲು ಅವಕಾಶ ನೀಡಲಾಯಿತು.

ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್ ನೇತೃತ್ವದಲ್ಲಿ ಡಿಡಿಪಿಐ ಉದಯ್‌ಕುಮಾರ್ ಮೇಲ್ವಿಚಾರಣೆಯಲ್ಲಿ ಪರೀಕ್ಷೆ ನೆರವೇರಿತು. ಪರೀಕ್ಷಾ ಕೇಂದ್ರಕ್ಕೆ ಈ ಇಬ್ಬರು ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು. ಪರೀಕ್ಷಾ ಅಕ್ರಮ ತಡೆಗೆ 47 ಮಂದಿ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು, 47 ಮಂದಿ ಜಾಗೃತ ದಳದ ಸದಸ್ಯರು, 16 ಮಂದಿ ಮಾರ್ಗಾಧಿಕಾರಿಗಳು ಪರೀಕ್ಷಾ ಕರ್ತವ್ಯ ನಿರ್ವಹಿಸಿದರು.

ಪೊಲೀಸ್ ಬಂದೋಬಸ್ತ್: ಎಲ್ಲಾ ಪರೀಕ್ಷಾ ಕೇಂದ್ರಗಳ ಬಳಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಪ್ರವೇಶ ಪತ್ರ ಉಳ್ಳವರನ್ನು ಮಾತ್ರ ಪೊಲೀಸರು ಪರೀಕ್ಷಾ ಕೇಂದ್ರದ ತಪಾಸಣಾ ಕೊಠಡಿಯತ್ತ ಬಿಡುತ್ತಿದ್ದರು. ಅಲ್ಲದೆ, ಅಭ್ಯರ್ಥಿಗಳೊಂದಿಗೆ ಬಂದಿದ್ದ ಪೋಷಕರು ಸೇರಿದಂತೆ ಅಪರಿಚಿತರು ಪರೀಕ್ಷಾ ಕೇಂದ್ರದತ್ತ ಬರದಂತೆ ಕಟ್ಟೆಚ್ಚರ ವಹಿಸಿದ್ದರು. ಪರೀಕ್ಷಾ ಕೇಂದ್ರದ ಬಳಿ ಜೆರಾಕ್ಸ್ ಕೇಂದ್ರವನ್ನು ಮುಚ್ಚಿಸಿದ್ದರು.

ಶಿಕ್ಷಕರ ಅರ್ಹತಾ ಪರೀಕ್ಷೆ ಸುಸೂತ್ರವಾಗಿ ನೆರವೇರಿದೆ


ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ ಸುಸೂತ್ರವಾಗಿ, ಯಾವುದೇ ಗೊಂದಲವಿಲ್ಲದೆ ನೆರವೇರಿದೆ. ಪರೀಕ್ಷೆ ಯಶಸ್ವಿಗಾಗಿ ಜಿಲ್ಲಾಡಳಿತ ಶಾಲಾ ಶಿಕ್ಷಣ ಇಲಾಖೆ ಸಹಕಾರದಲ್ಲಿ ಅಗತ್ಯ ಕ್ರಮ ಕೈಗೊಂಡಿತ್ತು. ಮೊದಲ ಪತ್ರಿಕೆ ಪರೀಕ್ಷೆಯಲ್ಲಿ 3,412 ಅಭ್ಯರ್ಥಿಗಳು, ಎರಡನೇ ಪತ್ರಿಕೆಯ ಪರೀಕ್ಷೆಯಲ್ಲಿ 11,477 ಅಭ್ಯರ್ಥಿಗಳು ಹಾಜರಾಗಿದ್ದಾರೆ. ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿತ್ತು. ಅಲ್ಲದೆ, ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದೇವೆ.

-ಡಾ.ಪಿ.ಶಿವರಾಜ್, ಅಪರ ಜಿಲ್ಲಾಧಿಕಾರಿ, ಮೈಸೂರು

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಆಂಧ್ರ ಕಿಂಗ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಐ ಆ್ಯಮ್ ಗಾಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಧುರಂದರ್ (ಹಿ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಮಸ್ತಿ ಪೊಲೀಸ್ (ತ)	4 ಪ್ರದರ್ಶನಗಳು
ಗಾಯಿತ್ರಿ	
---	---
ರಾಜಕಮಲ್	
ತೇರೇ ಇಷ್ಕ್ ಮೇ (ತ)	4 ಪ್ರದರ್ಶನಗಳು
ಸಂಗಂ	
ಧುರಂದರ್ (ಹಿ)	3 ಪ್ರದರ್ಶನಗಳು
ಲಿಡೋ	
ಮಾಸ್ ಯಾತ್ರಾ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಧರ್ಮಂ (ಕ)	4 ಪ್ರದರ್ಶನಗಳು

ಸಂಗೀತಗಾರರ ಕುರಿತ ರಾಗಮಾಲಾ ಕೃತಿ ಬಿಡುಗಡೆ



ಲೇಖಕರಾದ ಡಾ.ಶೈಲಜಾ ಮತ್ತು ಡಾ.ಟಿ.ಎಸ್. ವೇಣುಗೋಪಾಲ್ ಸಂಪಾದಕತ್ವ ಹಾಗೂ ಅನುವಾದಿತ 'ರಾಗಮಾಲ' ಕೃತಿ ಶುಕ್ರವಾರ ಬಿಡುಗಡೆಗೊಂಡಿತು.

ಮೈಸೂರು, ಡಿ.7(ಎಸ್‌ಪಿಎನ್)– ಲೇಖಕರಾದ ಡಾ.ಶೈಲಜಾ ಮತ್ತು ಡಾ.ಟಿ.ಎಸ್. ವೇಣುಗೋಪಾಲ್ ಸಂಪಾದಕತ್ವ ಹಾಗೂ ಅನುವಾದಿತ 'ರಾಗಮಾಲ' ಕೃತಿ ಶುಕ್ರವಾರ ಬಿಡುಗಡೆಗೊಂಡಿತು.

ಮೈಸೂರು ಕುವೆಂಪುನಗರದಲ್ಲಿರುವ ಸುರುಚಿ ರಂಗಮನೆಯಲ್ಲಿ ರಾಗಾಮಾಲಾ, ಚಾರು ಪ್ರತಿಷ್ಠಾನ ಹಾಗೂ ಕಲಾ ಸುರುಚಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸಂಗೀತ, ಸಂಗೀತಗಾರರನ್ನು ಕುರಿತ 10 ಪುಸ್ತಕಗಳ ರಾಗಾಮಾಲಾ ಕೃತಿಯನ್ನು ಪಂಡಿತ ರಾಜೀವ್ ತಾರಾನಾಥ್ ಅವರ ಸ್ಮರಣಾರ್ಥ ಸರೋದ್ ಮತ್ತು ವೀಣಾವಾದನ ಕಾರ್ಯಕ್ರಮದಲ್ಲಿ ಬಿಡುಗಡೆಗೊಳಿಸಲಾಯಿತು.

ಸರೋದ್ ವಾದಕ ಪಂಡಿತ್ ಸಚಿನ್ ಹಂಪಿ ಮಾತನಾಡಿ, ಸಂಗೀತ ಕ್ಷೇತ್ರದಲ್ಲಿ ದಿಗ್ಗಜರ ಕುರಿತು ಸಂಗೀತ ಜೀವನ ಚರಿತ್ರೆಗಳನ್ನೊಳಗೊಂಡ ಪುಸ್ತಕವನ್ನು ಹೊರತಂದಿರುವುದು ಸಾರ್ಥಕದ ಕ್ಷಣ. ಖ್ಯಾತ ಸರೋದ್ ವಾದಕ ಪಂಡಿತ್ ರಾಜೀವ್ ತಾರಾನಾಥ್ ಅವರ ಬದುಕು ಇಂದಿನ ಯುವ ಸಂಗೀತಗಾರರಿಗೆ ಮಾದರಿ ಎಂದರು.

ಲೇಖಕಿ ಡಾ.ಶೈಲಜಾ ಪ್ರಾಸ್ತಾವಿಕ ನುಡಿಗಳನ್ನಾಡಿ, ಪಂಡಿತ್ ರವಿಶಂಕರ್ ತೀರಿ ಹೋದಾಗ ಈ ಪುಸ್ತಕವನ್ನು ತರುವ ಆಲೋಚನೆ ಮೊಳಕೆ ಹೊಡೆಯಿತು. ಈ ಪುಸ್ತಕವನ್ನು ರಚಿಸುವಂತೆ ಪ್ರೇರೇಪಿಸಿದವರು ಪಂಡಿತ್ ತಾರಾನಾಥ್, ರವಿಶಂಕರ್ ಅವರ ಆತ್ಮಕಥೆಯಾದ 'ರಾಗಾಮಾಲ' ಹೆಸರೇ ಪ್ರಕಾಶನದ ಶೀರ್ಷಿಕೆಯಾಗಿದ್ದು, ಮತ್ತೊಂದು ವಿಶೇಷ ಎಂದರು.

ಈ ಪುಸ್ತಕದಲ್ಲಿ ಪಂಡಿತ್ ರಾಜೀವ್ ತಾರಾನಾಥ್, ಪಂಡಿತ್ ರವಿಶಂಕರ್ ಸೇರಿದಂತೆ 10ಕ್ಕೂ ಹೆಚ್ಚು ಸಂಗೀತಗಾರರ ಸಂಗೀತದ ವಿವಿಧ ಮಜಲುಗಳಲ್ಲಿ ಸಾಧನೆ ಮಾಡಿದವರ ಜೀವನ ಚರಿತ್ರೆ, ಅವರು ಸಂಯೋಜಿಸಿರುವ ರಾಗಗಳ ಸಂಪಾದಕತ್ವ, ಇನ್ನು ಕೆಲವು ಲೇಖನಗಳನ್ನು ಬೇರೆ ಬೇರೆ ಭಾಷೆಗಳಲ್ಲಿ ಪ್ರಕಟವಾಗಿರುವುದನ್ನು ಕನ್ನಡಕ್ಕೆ ತರ್ಜುಮೆ ಮಾಡಲಾಗಿದೆ ಎಂದರು.

ವೇದಿಕೆ ಕಾರ್ಯಕ್ರಮದ ಬಳಿಕ ಪಂಡಿತ್ ಸಚಿನ್ ಹಂಪಿ ಅವರಿಂದ ಸರೋದ್ ವಾದನ ಪ್ರದರ್ಶಿಸಿದರು. ಇವರೊಂದಿಗೆ ಪಂಡಿತ್ ಭೀಮಾಶಂಕರ್ ತಬಲಾ ವಾದನ ಮಾಡಿ ಎಲ್ಲರನ್ನು ಆಕರ್ಷಿಸಿದ್ದಾರೆ. ಬಳಿಕ ವಿದುಷಿ ಎಸ್.ವಿ.ಸಹನಾ ಅವರ ವೀಣಾವಾದನ ಎಲ್ಲರ ಗಮನ ಸೆಳೆಯಿತು. ಇವರಿಗೆ ವಿದ್ವಾನ್ ಜಿ.ಎಸ್.ರಾಮಾನುಜಂ ಮೃದಂಗವಾದನ ನಡೆಸಿಕೊಟ್ಟರು.

ಚಿನ್ನಸ್ವಾಮಿ ಸ್ಟೇಡಿಯಂನಿಂದ ಐಪಿಎಲ್ ಪಂದ್ಯಗಳು ಸ್ಥಳಾಂತರವಾಗಲು ಬಿಡಲ್ಲ

ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್



ಬೆಂಗಳೂರು, ಡಿ.7– ಚಿನ್ನಸ್ವಾಮಿ ಸ್ಟೇಡಿಯಂನಿಂದ ಐಪಿಎಲ್ ಪಂದ್ಯಗಳು ಸ್ಥಳಾಂತರವಾಗಲು ಬಿಡಲ್ಲ. ಪಂದ್ಯಗಳು ಇಲ್ಲೇ ನಡೆಸುವಂತೆ ಮಾಡುತ್ತೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.


ಕೆಎಸ್‌ಸಿಎ ಚುನಾವಣೆಯಲ್ಲಿ ಮತದಾನ ಮಾಡಿದ ಬಳಿಕ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಶಿವಕುಮಾರ್ ಅವರು ಭಾನುವಾರ ಪ್ರತಿಕ್ರಿಯೆ ನೀಡಿದರು.

ಆರ್‌ಸಿಬಿ ಸಂಭ್ರಮಾಚರಣೆ ವೇಳೆ ನಡೆದ ದುರ್ಘಟನೆ ಬಳಿಕ ಐಪಿಎಲ್ ಸೇರಿದಂತೆ ಪ್ರಮುಖ ಪಂದ್ಯಗಳು ಈ ಕ್ರೀಡಾಂಗಣದಿಂದ ಸ್ಥಳಾಂತರವಾಗಿರುವ ಬಗ್ಗೆ ಕೇಳಿದಾಗ, ಇದು ಕರ್ನಾಟಕ ರಾಜ್ಯ ಹಾಗೂ ಬೆಂಗಳೂರಿನ ಗೌರವದ ವಿಚಾರ. ಮುಂದಿನ ಐಪಿಎಲ್ ಪಂದ್ಯಗಳನ್ನು ಇಲ್ಲೇ ನಡೆಸುವಂತೆ ಕ್ರಮ ಕೈಗೊಳ್ಳುತ್ತೇವೆ ಎಂದು ತಿಳಿಸಿದರು.

ಎಲ್ಲಾ ಪಂದ್ಯಕ್ಕೂ ಅವಕಾಶ: ಮಹಿಳಾ ಟಿ 20 ವಿಶ್ವಕಪ್ ಪಂದ್ಯಗಳ ಬಗ್ಗೆ ಕೇಳಿದಾಗ, ಮುಂದಿನ ದಿನಗಳಲ್ಲಿ ಯಾವೆಲ್ಲಾ ಪಂದ್ಯಗಳಿವೆಯೋ ಅವುಗಳಿಗೆ ಅವಕಾಶ ನೀಡುತ್ತೇವೆ ಎಂದು ತಿಳಿಸಿದರು. ಕೆಎಸ್‌ಸಿಎ ಚುನಾವಣೆಯಲ್ಲಿ ಮತದಾನ ಮಾಡಿರುವ ಬಗ್ಗೆ ಕೇಳಿದಾಗ, ನಾನು ಕೆಎಸ್‌ಸಿಎ ಸದಸ್ಯ ನಾನು ಚಿಕ್ಕ ವಯಸ್ಸಿನಲ್ಲಿದ್ದಾಗಲೇ ನಾಗರಾಜ್ ಅವರು ನನಗೆ ಸದಸ್ಯತ್ವ ನೀಡಿದ್ದರು. ಅವರ ಮಗ ನನ್ನ ಸಹಪಾಠಿ. ನನಗೆ ಬ್ರಿಜೇಶ್ ಪಟೇಲ್ ಅವರಿಂದ ಅನಿಲ್ ಕುಂಬ್ಳೆ, ಪ್ರಸನ್ನ ಸೇರಿದಂತೆ ಅನೇಕರು ಬಹಳ ಪರಿಚಯ. ನನಗೆ ಬೇಕಾದವರಿಗೆ ನಾನು ಮತ ಹಾಕಿದ್ದೇನೆ ಎಂದರು.

ಅನಾಹುತ ಮರುಕಳಿಸದಂತೆ ಕ್ರಮ: ನಾನು ಕ್ರಿಕೆಟ್ ಅಭಿಮಾನಿ. ಇತ್ತೀಚಿಗೆ ಆಗಿರುವ ಅನಾಹುತ ಮುಂದೆ ಮರುಕಳಿಸದಂತೆ ಎಚ್ಚರಿಕೆ ವಹಿಸಿ ಕ್ರೀಡಾಂಗಣದ ಗೌರವ ಉಳಿಯುವಂತೆ ಮಾಡುತ್ತೇವೆ. ಕಾನೂನು ಚೌಕಟ್ಟಿನಲ್ಲಿ ಜನದಟ್ಟಣೆ ನಿಭಾಯಿಸಿಕೊಂಡು ಕ್ರೀಡಾಂಗಣ ಬಳಸಲಾಗುವುದು. ಇದರ ಜೊತೆಗೆ ಪರ್ಯಾಯವಾಗಿ ದೊಡ್ಡ ಕ್ರೀಡಾಂಗಣವನ್ನು ನಿರ್ಮಾಣ ಮಾಡುತ್ತೇವೆ ಎಂದು ತಿಳಿಸಿದರು.

ಕುಕ್ಕರಹಳ್ಳಿಯಲ್ಲಿ ಡಾ.ಅಂಬೇಡ್ಕರ್ ಅವರ ಮಹಾ ಪರಿನಿಬ್ಬಾಣ ದಿನಾಚರಣೆ



ಕುಕ್ಕರಳ್ಳಿಯಲ್ಲಿ ಡಾ.ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಮೊಂಬತ್ತಿ ಬೆಳಗಿಸಿ ಡಾ.ಬಿ.ಆರ್.ಅಂಬೇಡ್ಕರ್ ಮಹಾ ಪರಿನಿಬ್ಬಾಣ ದಿನ ಆಚರಿಸಲಾಯಿತು.

ಮೈಸೂರು,ಡಿ.7(ಪಿಎಂ)– ಕುಕ್ಕರಳ್ಳಿಯ ಜೈ ಭೀಮ್ ಕ್ಷೇಮಾಭಿವೃದ್ಧಿ ಸಂಘ ಮತ್ತು 'ಭೀಮ ಬಲ ಬಳಗ'ದ ಜಂಟಿ ಆಶ್ರಯದಲ್ಲಿ ಕುಕ್ಕರಳ್ಳಿಯಲ್ಲಿರುವ ಡಾ.ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ, 69 ಮೊಂಬತ್ತಿಗಳನ್ನು ಬೆಳಗಿಸುವ ಮೂಲಕ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ 69ನೇ ಮಹಾ ಪರಿನಿಬ್ಬಾಣ ದಿನವನ್ನು ಆಚರಿಸಲಾಯಿತು.

ಡಾ.ಬಿ.ಆರ್.ಅಂಬೇಡ್ಕರ್ ಅವರ ಜೀವನ, ಸಾಧನೆ ಹಾಗೂ ರಾಷ್ಟ್ರಕ್ಕೆ ಅವರು ನೀಡಿದ ಕೊಡುಗೆಗಳನ್ನು ಇದೇ ವೇಳೆ ಸ್ಮರಿಸಲಾಯಿತು. ಬಳಿಕ ಕುಕ್ಕರಳ್ಳಿಯ ಪ್ರಮುಖ ಬೀದಿಗಳಲ್ಲಿ ಸಂಘಟನೆಗಳ ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ಕುಕ್ಕರಳ್ಳಿಯ ಜನತೆ ಮತ್ತು ಮಕ್ಕಳು ಮೊಂಬತ್ತಿ ಹಿಡಿದು ಮೌನ ಮೆರವಣಿಗೆ ನಡೆಸಿ ಅಂಬೇಡ್ಕರ್ ಅವರಿಗೆ ಗೌರವ ನಮನ ಸಲ್ಲಿಸಿದರು.

ಜೈ ಭೀಮ್ ಕ್ಷೇಮಾಭಿವೃದ್ಧಿ ಸಂಘದ ಗೌರವಾಧ್ಯಕ್ಷ ಪುರುಷೋತ್ತಮ್, ನಿವೃತ್ತ ಬಿಇಓ ಅನ್ನದಾನಿ, ಭೀಮ ಬಲ ಬಳಗದ ಸಂಚಾಲಕ ಎಂ.ಎಸ್.ಪರಮಾನಂದ, ನಗರಪಾಲಿಕೆ ಮಾಜಿ ಸದಸ್ಯೆ ವೇದಾವತಿ, ಮುಖಂಡರಾದ ಗಿರೀಶ್, ಸರ್ವೇಶ್, ನವೀನ್ ಮೌರ್ಯ, ಪ್ರತಾಪ, ಡಾ.ಕಿರಣ್, ಆನಂದ ರಾಜು, ಶುಭ, ಜೈಪಾಲ, ಮಹದೇವಪ್ಪ, ನಾಗರಾಜ್, ಸುನೀಲ್, ಯೋಗಾನಂದ ಮತ್ತಿತರರು ಪಾಲ್ಗೊಂಡಿದ್ದರು.

ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ



ಬಸವ ಸಮಿತಿ ವತಿಯಿಂದ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರನ್ನು ಸನ್ಮಾನಿಸಲಾಯಿತು.

ಮೈಸೂರು, ಡಿ.7– ಮೈಸೂರಿನ ವಿಜಯನಗರ 1ನೇ ಹಂತದ ಬಸವ ಭವನದಲ್ಲಿ ಬಸವ ಸಮಿತಿ ವತಿಯಿಂದ ಶರಣ ಸಂಗಮ–312 ಹಾಗೂ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನಾ ಸಮಾರಂಭ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಡಿ.ನಾಗೇಂದ್ರ (ಸಾಹಿತ್ಯ), ಕೆರೆಹಳ್ಳಿ ದೊರೆಸ್ವಾಮಿ (ರಂಗಭೂಮಿ), ನಗರ್ಲೆ ಶಿವಕುಮಾರ್ (ಸಾಹಿತ್ಯ), ಎಸ್.ಆರ್. ಶಿವಕುಮಾರ್ (ಮಾಧ್ಯಮ), ಪಿ.ಮುರುಡೇಶ ಮೂರ್ತಿ (ಸಾಹಿತ್ಯ ಮತ್ತು ಸಂಘಟನೆ), ಭಾನು ಮೋಹನ್ (ಪರಿಸರ) ಇವರನ್ನು ಸಮಿತಿ ವತಿಯಿಂದ ಗೌರವಿಸಲಾಯಿತು.

ಈ ವೇಳೆ ಮಾತನಾಡಿದ ಸಮಿತಿ ಅಧ್ಯಕ್ಷ ಹೆಚ್.ವಿ.ಹಿನಕಲ್ ಬಸವರಾಜು, ವಿವಿಧ ಕ್ಷೇತ್ರಗಳಲ್ಲಿ ಸಮಾಜಮುಖಿ ಕೆಲಸಗಳನ್ನು ಮಾಡುವ ಮೂಲಕ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪಡೆದ ನಮ್ಮ ಸಮಾಜದ ಶರಣು ಬಂಧುಗಳನ್ನು ಸನ್ಮಾನಿಸಲಾಗಿದೆ. ಇವರಿಂದ ಮತ್ತಷ್ಟು ಜನರು ಪ್ರೇರೇಪಿತರಾಗಿ, ಜನಪರ ಕೆಲಸಗಳನ್ನು ಮಾಡುವಂತಾಗಲಿ ಎಂಬ ಆಶಯದಿಂದ ಅಭಿನಂದನಾ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಉಪಾಧ್ಯಕ್ಷರಾದ ಶುಭಾಮಣಿ, ಕಾರ್ಯದರ್ಶಿ ನಂದೀಶ್, ನಿರ್ದೇಶಕ ಲೋಕೇಶ್, ಚೆನ್ನಬಸಪ್ಪ, ಶಿವಕುಮಾರ್, ಸರಸ್ವತಿ ರಾಮಣ್ಣ, ಇಂದ್ರಮ್ಮ ನಾಗರಾಜ್, ಮಹದೇವಪ್ಪ ಉಪಸ್ಥಿತರಿದ್ದರು.


ಹೋಟೆಲ್ ಕೊಠಡಿಯಲ್ಲಿ ಚಿನ್ನಾಭರಣವಿದ್ದ ಬ್ಯಾಗ್ ಕಳವು

ಮೈಸೂರು, ಡಿ.7– ಹೋಟೆಲ್ ಕೊಠಡಿಯಲ್ಲಿ ಚಿನ್ನಾಭರಣವಿದ್ದ ಬ್ಯಾಗ್ ಕಳುವಾಗಿದೆ ಎಂದು ಬೆಂಗಳೂರಿನ ಮಹಿಳೆಯೊಬ್ಬರು ಮೈಸೂರಿನ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಬೆಂಗಳೂರಿನ ಟಿ.ದಾಸರಹಳ್ಳಿ ನಿವಾಸಿ ಪಲ್ಲವಿ ಅವರು ಸಹೋದರಿ ವಿವಾಹ ಸಮಾರಂಭಕ್ಕಾಗಿ ಕುಟುಂಬ ಸಮೇತ ನ.29ರಂದು ಮೈಸೂರಿಗೆ ಆಗಮಿಸಿ, ನಜರ್‌ಬಾದ್ ಥಿಯೋಬಾಲ್ಡ್ ರಸ್ತೆಯ ಹೋಟೆಲ್‌ವೊಂದರ ಮೂರು ಕೊಠಡಿಗಳಲ್ಲಿ ತಂಗಿದ್ದರು. ನ.30ರಂದು ಹೆಬ್ಬಾಳದ ಲಕ್ಷ್ಮೀಕಾಂತ ದೇವಸ್ಥಾನದಲ್ಲಿ ನಡೆದ ವಿವಾಹದಲ್ಲಿ ಭಾಗವಹಿಸಿ, ಹೋಟೆಲ್‌ಗೆ ವಾಪಸ್ ಬಂದಿದ್ದರು.

ಅಂದು ಮಧ್ಯಾಹ್ನ ಬೇರೊಂದು ಹೋಟೆಲ್ ಸಭಾಂಗಣದಲ್ಲಿ ಆಯೋಜಿಸಿದ್ದ ರಿಸೆಪ್ಷನ್‌ಗೆ ತೆರಳುವ ಮುನ್ನ ಎರಡು ಕೊಠಡಿಗಳನ್ನು ಖಾಲಿ ಮಾಡಿ, ಅಲ್ಲಿದ್ದ ಲಗೇಜ್ ಅನ್ನು ಒಂದು ರೂಂನಲ್ಲಿಟ್ಟು ಸಿದ್ಧವಾಗಲು ಮುಂದಾದಾಗ ಸುಮಾರು 2 ಲಕ್ಷ ಮೌಲ್ಯದ ಚಿನ್ನಾಭರಗಳಿದ್ದ ಬ್ಯಾಗ್ ಕಾಣಿಸಲಿಲ್ಲ. ಖಾಲಿ ಮಾಡಿದ ಕೊಠಡಿಗಳಲ್ಲಿ ಬಿಟ್ಟು ಬಂದಿರಬಹುದೆಂದು ಹುಡುಕಾಡಿದರೂ ಅಲ್ಲಿಯೂ ಸಿಗಲಿಲ್ಲ. ಈ ಬಗ್ಗೆ ಹೋಟೆಲ್ ವ್ಯವಸ್ಥಾಪಕರ ಗಮನಕ್ಕೆ ತಂದು ನಿನ್ನೆ ನಜರ್‌ಬಾದ್ ಠಾಣೆಗೆ ದೂರು ನೀಡಿದ್ದಾರೆ.

ಡಾ. ಅಂಬೇಡ್ಕರ್ ಭಾಷಣ, ಬರಹ



ಮೈಸೂರು ವಿಶ್ವವಿದ್ಯಾನಿಲಯ ಸ್ನಾತಕೊತ್ತರ ಹಾಗೂ ಸಂಶೋಧನಾ ವಿದ್ಯಾರ್ಥಿಗಳಿಂದ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಪರಿನಿಬ್ಬಾಣ ಪ್ರಯುಕ್ತ ಆಯೋಜಿಸಲಾಗಿದ್ದ ಡಾ.ಬಿ.ಆರ್.ಅಂಬೇಡ್ಕರ್ ಸಮಗ್ರ ಬರಹಗಳು ಮತ್ತು ಭಾಷಣಗಳು– ಓದು ಮತ್ತು ಅರಿವಿನ ಶಿಬಿರ ಕಾರ್ಯಕ್ರಮವನ್ನು ಮೈಸೂರು ವಿವಿ ಅತಿಥಿ ಉಪನ್ಯಾಸಕರ ಸಂಘದ ಅಧ್ಯಕ್ಷ ಡಾ. ಕೆ.ಪಿ.ರಮೇಶ ಉದ್ಘಾಟಿಸಿದರು. ಡೀನ್ ಶೇಖರ್, ಹೋರಾಟಗಾರ ಡಾ.ಚೆನ್ನಕೇಶವ ಮೂರ್ತಿ, ವಕೀಲ ಬಾರಕೋಲು ರಂಗಸ್ವಾಮಿ ಉಪಸ್ಥಿತರಿದ್ದರು.

ಇ–ಖಾತೆ ಸಿಗದೆ ಬಂಡಿಪಾಳ್ಯ ಎಪಿಎಂಸಿ ಮಾರುಕಟ್ಟೆ ವರ್ತಕರು ಹೈರಾಣ

ಮೈಸೂರು, ಡಿ.7– ಬಂಡಿಪಾಳ್ಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ(ಎಪಿಎಂಸಿ) ವರ್ತಕರಿಗೆ ಇ–ಖಾತಾ ಸಿಗದೆ ಹೈರಾಣಾಗಿದ್ದು, ಈ ಮೂಲಕ ವಹಿವಾಟಿಗೂ ತೀವ್ರಅಡ್ಡಿಯಾಗಿದೆ.

ರಾಜ್ಯ ಸರ್ಕಾರ ಎಲ್ಲಾ ಬಗೆಯ ಆಸ್ತಿಗಳ ನೋಂದಣಿಗೆ ಇ–ಖಾತಾ ಕಡ್ಡಾಯಗೊಳಿಸಿದ ನಂತರ ಸ್ಥಳೀಯ ಪ್ರಾಧಿಕಾರವಾಗಿರುವ ಎಪಿಎಂಸಿಗೂ ಬಿಸಿ ತಟ್ಟಿದೆ. ಇ–ಖಾತೆಗೆ ಸಂಬಂಧಿಸಿದಂತೆ ಕೆಐಎಡಿಬಿ ಹಾಗೂ ಗೃಹ ಮಂಡಳಿ ಮಾದರಿಯಲ್ಲಿ ಎಪಿಎಂಸಿಗೆ ವಿನಾಯ್ತಿ ನೀಡುವವರೆಗೂ ಸಮಸ್ಯೆ ಪರಿಹಾರವಾಗುವುದಿಲ್ಲ ಎಂದು ನೊಂದ ವರ್ತಕರು ಅಲವತ್ತುಕೊಂಡಿದ್ದಾರೆ.

ಮೈಸೂರಿನ ಬಂಡೀಪಾಳ್ಯ ಎಪಿಎಂಸಿ ಮಾರುಕಟ್ಟೆ ಪ್ರಾಂಗಣದಲ್ಲಿ 2 ಸಾವಿರಕ್ಕೂ ಹೆಚ್ಚು ವರ್ತಕರಿಗೆ ನಿವೇಶನ ಹಾಗೂ ಕಟ್ಟಡಗಳನ್ನು ಹಂಚಿಕೆ ಮಾಡಲಾಗಿದ್ದು, ಇಲ್ಲಿ ಮೈಸೂರು ಹಾಗೂ ಅಕ್ಕ–ಪಕ್ಕದ ಜಿಲ್ಲೆಗಳ ರೈತರು ಬೆಳೆದ ಕೃಷಿ ಉತ್ಪನ್ನಗಳ ಮಾರಾಟ ಹಾಗೂ ಖರೀದಿ ನಡೆಯುತ್ತಿದೆ. ಮಾರುಕಟ್ಟೆ ಸಮಿತಿಯ ನಿಧಿಯಿಂದ ರೈತರು ಮತ್ತು ವರ್ತಕರಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ ಅಲ್ಲದೆ ಈ ಹಿಂದೆ ನಿವೇಶನ ಹಾಗೂ ಕಟ್ಟಡ ಸಂಬಂಧಿತ ಅನುಮೋದನೆ ಅಧಿಕಾರವೂ ಸಮಿತಿಗಿತ್ತು. ಆದರೆ ಪ್ರಸ್ತುತ ಇದಕ್ಕೆ ಬ್ರೇಕ್ ಬಿದ್ದಿರುವುದರಿಂದ ವರ್ತಕರಿಗೆ ತೀವ್ರ ತೊಂದರೆಯಾಗಿದೆ.

ಮಾರುಕಟ್ಟೆ ಸಮಿತಿಯು ಸ್ಥಳೀಯ ಪ್ರಾಧಿಕಾರವಾಗಿದ್ದರೂ ಪರಿಗಣಿಸುತ್ತಿಲ್ಲ. ಎಪಿಎಂಸಿ ಪ್ರಾಂಗಣ ನಗರಾಭಿವೃದ್ಧಿ ಯೋಜನಾ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುವುದರಿಂದ ಯೋಜನಾ ಪ್ರಾಧಿಕಾರದ ನಕ್ಷೆ ಅನುಮೋದನೆ ಪಡೆದುಕೊಳ್ಳಬೇಕೆಂಬ ನಿಯಮ ಹೇರಲಾಗಿದೆ. ಇದರಿಂದ ಸಾಕಷ್ಟು ಸಮಸ್ಯೆಗಳು ಸೃಷ್ಟಿಯಾಗಿವೆ. ಎಪಿಎಂಸಿ ಪ್ರಾಂಗಣವು ಚಾಮುಂಡಿ ಬೆಟ್ಟ ಗ್ರಾಮ ಪಂಚಾಯ್ತಿ ಹಾಗೂ ಕಡಕೊಳ ಪಟ್ಟಣ ಪಂಚಾಯ್ತಿ ವ್ಯಾಪ್ತಿಗೆ ಸೇರಿದ್ದು, ಹೊಸ ನಿಯಮದಿಂದಾಗಿ ಈ ಎರಡೂ ಸ್ಥಳೀಯ ಸಂಸ್ಥೆಗಳಲ್ಲಿ ಇ–ಖಾತಾ ಪ್ರಕ್ರಿಯೆ ನಡೆಸುತ್ತಿಲ್ಲ ಎಂದು ಕೆಲ ವರ್ತಕರು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ.

ಮಾರುಕಟ್ಟೆ ಸಮಿತಿಯ ನಿವೇಶನ ಹಾಗೂ ಕಟ್ಟಡಗಳಿಗೆ ಇ–ಖಾತೆ ಮಾಡಿಕೊಡದಿರುವುದರಿಂದ ವರ್ತಕರಿಗಷ್ಟೇ ಅಲ್ಲದೆ ರೈತರ ಉತ್ಪನ್ನಗಳ ಮಾರಾಟ ಮತ್ತು ಖರೀದಿ ಮೇಲೂ ತೀವ್ರ ಪರಿಣಾಮ ಉಂಟಾಗುತ್ತಿದೆ. ಬ್ಯಾಂಕ್ ಸಾಲ ಸೌಲಭ್ಯಕ್ಕೂ ಇ–ಖಾತೆ ಕಡ್ಡಾಯಗೊಳಿಸಿರುವುದರಿಂದ ವರ್ತಕರಿಗೆ ಹಂಚಿಕೆಯಾದ ನಿವೇಶನಗಳಲ್ಲಿ ಕಟ್ಟಡ ನಿರ್ಮಿಸಲು ಸಾಧ್ಯವಾಗುತ್ತಿಲ್ಲ. ಹೊಸದಾಗಿ ಹಂಚಿಕೆ ಪಡೆದ ನಿವೇಶನಗಳ ಲೀಸ್ ಕಂ ಸೇಲ್ ಕರಾರು ಪತ್ರ ನೋಂದಣಿ ಮಾಡಿಸುವುದೂ ಸಾಧ್ಯವಾಗುತ್ತಿಲ್ಲ.

ಈ ಸಮಸ್ಯೆ ಹೀಗೆಯೇ ಮುಂದುವರೆದರೆ ಮಾರುಕಟ್ಟೆ ವ್ಯವಸ್ಥೆ ಮೇಲೆ ಭಾರೀ ಪರಿಣಾಮ ಬೀರುತ್ತದೆ. ಕೃಷಿ ಉತ್ಪನ್ನಗಳಿಗೆ ಸ್ಪರ್ಧಾತ್ಮಕ ಬೆಲೆ ದೊರೆಯದೆ ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕುವುದರ ಜೊತೆಗೆ ಮಾರುಕಟ್ಟೆಯೂ ಧಾರುಣ ಸ್ಥಿತಿಗೆ ತಲುಪುವ ಆತಂಕ ನಿರ್ಮಾಣವಾಗಿದೆ. ಈ ಗಂಭೀರ ಸಮಸ್ಯೆ ಬಗ್ಗೆ ಸರ್ಕಾರ ಗಮನಹರಿಸಿ, ಎಪಿಎಂಸಿ ಪ್ರಾಂಗಣದ ವರ್ತಕರಿಗೆ ನಿಗದಿತ ಅವಧಿಯಲ್ಲಿ ಇ–ಖಾತೆ ಲಭ್ಯವಾಗುವಂತೆ ಕ್ರಮ ಕೈಗೊಳ್ಳದಿದ್ದರೆ ಮಾರುಕಟ್ಟೆ ಚಟುವಟಿಕೆಗಳನ್ನು ಅನಿವಾರ್ಯವಾಗಿ ಸ್ಥಗಿತಗೊಳಿಸಬೇಕಾಗುತ್ತದೆ ಎಂದು ನೊಂದ ವರ್ತಕರು ಅಳಲು ತೋಡಿಕೊಂಡಿದ್ದಾರೆ.

ಬ್ಯಾಂಕ್ ಸಾಲ ಸೌಲಭ್ಯ, ನೋಂದಣಿಗೆ ಪರದಾಟ



ಆಸ್ತಿ ಭದ್ರತೆ ದೃಷ್ಟಿಯಿಂದ ಇ–ಖಾತೆ ವ್ಯವಸ್ಥೆಯು ಅನುಕೂಲಕರವಾಗಿದೆ. ಆದರೆ ಎಪಿಎಂಸಿ ಸ್ಥಳೀಯ ಸಂಸ್ಥೆಯಾಗಿರುವುದರಿಂದ ವಿಶೇಷ ಪ್ರಕರಣವಾಗಿ ಪರಿಗಣಿಸಬೇಕಿದೆ. ಕೆಐಎಡಿಬಿ ಹಾಗೂ ಗೃಹ ಮಂಡಳಿ ಮಾದರಿಯಲ್ಲಿ ಎಪಿಎಂಸಿಗೂ ವಿನಾಯ್ತಿ ನೀಡಿದರೆ ಸಮಸ್ಯೆ ಪರಿಹಾರವಾಗುತ್ತದೆ. ಹಿಂದಿನಂತೆ ಲೇಔಟ್ ಅನುಮೋದನೆ ಸೇರಿದಂತೆ ಎಲ್ಲಾ ಪ್ರಕ್ರಿಯೆಗಳು ಸುಗಮಗೊಂಡರೆ ಮಾರಾಟ ಹಾಗೂ ಖರೀದಿಗೆ ಯಾವುದೇ ಅಡ್ಡಿಯುಂಟಾಗುವುದಿಲ್ಲ.

- ಸಿ.ಎನ್.ಮಂಜೇಗೌಡ, ವಿಧಾನಪರಿಷತ್ ಸದಸ್ಯ

ಮಹನೀಯರಿಗೆ ಭಾವಪೂರ್ಣ ನುಡಿ ನಮನ



ಮೈಸೂರು, ಡಿ. 7– ಇತ್ತೀಚೆಗಷ್ಟೇ ನಂಜನಗೂಡಿನ ಮಲ್ಲನಮೂಲೆಯ ಶ್ರೀ ಚನ್ನಬಸವ ಮಹಾಸ್ವಾಮೀಜಿ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಸಾಲುಮರದ ತಿಮ್ಮಕ್ಕ ಹಾಗೂ ಐಎಎಸ್ ಅಧಿಕಾರಿ ಮಹಾಂತೇಶ್ ಬೀಳಗಿ, ನಿವೃತ್ತ ಪೊಲೀಸ್ ಅಧಿಕಾರಿ ಪಡಗೂರು ಮಹದೇವು ಅವರಿಗೆ ಸರ್ದಾರ್ ವಲ್ಲಭಭಾಯಿ ಪಟೇಲ್ ನಗರದ ಬಸವ ಬಳಗ ಪೂರ್ವ ವಲಯ ಟ್ರಸ್ಟ್ ವತಿಯಿಂದ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಇದೇ ಸಂದರ್ಭದಲ್ಲಿ ಮಹನೀಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮುಖಾಂತರ ಮೌನ ಆಚರಣೆ ಮಾಡಲಾಯಿತು. ಟ್ರಸ್ಟಿನ ಗೌರವಾಧ್ಯಕ್ಷರು ಹಾಗೂ ಆಲನಹಳ್ಳಿಯ ಕುದೇರು ಶಾಖಾ ಮಠದ ಶ್ರೀ ಗುರುಶಾಂತ ಮಹಾಸ್ವಾಮೀಜಿ, ಟ್ರಸ್ಟ್ ಅಧ್ಯಕ್ಷ ಎಸ್ ಶಿವಸ್ವಾಮಿ, ಸಾಹಿತಿ ಮುಡುಗುಂಡ ಪುಟ್ಟಪ್ಪ, ಪೊಲೀಸ್ ಆರಕ್ಷಕ ನಿರೀಕ್ಷಕ ನಾಗೇಶ್, ಗಂಗಾಧರ್, ಪ್ರಧಾನ ಕಾರ್ಯದರ್ಶಿ ಡಿ ಲೋಹಿತ್, ಉಪಾಧ್ಯಕ್ಷ ಶ್ರೀಕಂಠಮೂರ್ತಿ, ಸಂಘಟನಾ ಕಾರ್ಯದರ್ಶಿ ಮಹೇಶ್ ಮತ್ತು ಜಯಶಂಕರ್, ನಿರ್ದೇಶಕರಾದ ಮಹದೇವ ಪ್ರಸಾದ್, ಪ್ರಭುಸ್ವಾಮಿ, ದೇವಪ್ಪಜಿ, ಮಹೇಶ್, ನಾಗೇಂದ್ರ, ಡಿಜಿ ಪೂಜೆ ಮಾದಪ್ಪಸ್ವಾಮಿ, ಆನಂದಮೂರ್ತಿ, ನಂದೀಶ್, ಶ್ರೀಶೈಲ ಕುಂಬಾರ್, ಮಧು ಮಹದೇವಪ್ಪ, ಚೇತನ್, ವಿಶ್ವನಾಥ್, ಪುಟ್ಟಬುದ್ಧಿ ಮತ್ತಿತರರು ಉಪಸ್ಥಿತರಿದ್ದರು.

ಚಾಲಕನ ನಿಯಂತ್ರಣ ತಪ್ಪಿ ಉರುಳಿದ ಬಸ್

25ಕ್ಕೂ ಹೆಚ್ಚು ಮಂದಿಗೆ ಗಾಯ

ಮದ್ದೂರು ಬಳಿ ನಡೆದ ದುರಂತ




ಅಗರಲಿಂಗನದೊಡ್ಡಿ ಹೈವೇನಲ್ಲಿ ಸಂಭವಿಸಿದ ಅಪಘಾತದಲ್ಲಿ ಉರುಳಿ ಬಿದ್ದಿರುವ ಬಸ್. ಮತ್ತೊಂದು ಚಿತ್ರದಲ್ಲಿ ಮಂಡ್ಯದ ಮಿಮ್ಸ್‌ನಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ್ ಗಾಯಾಳುಗಳ ಆರೋಗ್ಯ ವಿಚಾರಿಸಿದರು.

ಮದ್ದೂರು, ಡಿ.7– ಚಾಲಕನ ನಿಯಂತ್ರಣ ತಪ್ಪಿದ ಖಾಸಗಿ ಬಸ್ ಮೈಸೂರು–ಬೆಂಗಳೂರು ಹೆದ್ದಾರಿಯ ಸಿಮೆಂಟ್ ತಡೆಗೋಡೆಗೆ ರಭಸವಾಗಿ ಡಿಕ್ಕಿ ಹೊಡೆದ ಪರಿಣಾಮ ಹಿಂಬದಿಯ ಆಕ್ಸೆಲ್ ತುಂಡಾಗಿ ರಸ್ತೆ ಬದಿಗೆ ಪಲ್ಟಿಯಾಗಿ 25ಕ್ಕೂ ಹೆಚ್ಚು ಮಂದಿ ಗಾಯಗೊಂಡಿರುವ ಘಟನೆ ತಾಲೂಕಿನ ಅಗರಲಿಂಗನದೊಡ್ಡಿ ಗ್ರಾಮದ ಬಳಿ ಭಾನುವಾರ ನಡೆದಿದೆ.

ಘಟನೆಯಲ್ಲಿ ತೀವ್ರವಾಗಿ ಗಾಯಗೊಂಡವರನ್ನು ಲೋಕೇಶ್, ಭಾರತಿ, ಮಹಾದೇವಮ್ಮ, ಅಂಬುಜ, ಮಹದೇವೇಶ್ವರಿ, ಕೌಶಲ್ಯ, ಕಿಶಾನ್, ಲೋಕೇಶ್, ದೇವಿ, ಕಲಾ ಎಂದು ಗುರುತಿಸಲಾಗಿದೆ. ಬೆಂಗಳೂರಿನ ಮಾಗಡಿ ರಸ್ತೆಯ ಅಕ್ಕಪಕ್ಕದ ಬಡಾವಣೆಯವರು ಭಾನುವಾರ ಮಳವಳ್ಳಿ ತಾಲೂಕಿನ ಶಿಂಷಾ ಮಾರಮ್ಮನ ದೇವಾಲಯದಲ್ಲಿ ಪೂಜೆ ಇಟ್ಟುಕೊಂಡಿದ್ದರು. ಇಂದು ಪೂಜೆ ಮುಗಿಸಿಕೊಂಡು, ಊಟದ ನಂತರ ವಾಪಸ್ ಬೆಂಗಳೂರಿಗೆ ಅಮ್ಮ ಟೂರ್ಸ್ ಅಂಡ್ ಟ್ರಾವೆಲ್ಸ್ ಮಾಲೀಕತ್ವದ (ಕೆಎ.51, ಇಸಿ.1665) ಖಾಸಗಿ ಬಸ್‌ನಲ್ಲಿ ತೆರಳುತ್ತಿದ್ದ ವೇಳೆ ತಾಲೂಕಿನ ಅಗರಲಿಂಗನದೊಡ್ಡಿ ಬಳಿ ಮೈಸೂರು–ಬೆಂಗಳೂರು ಹೆದ್ದಾರಿಯ ಸರ್ವಿಸ್ ರಸ್ತೆಯಲ್ಲಿ ಚಾಲಕನ ನಿಯಂತ್ರಣ ತಪ್ಪಿದ ಬಸ್ ಸಿಮೆಂಟ್ ತಡೆಗೋಡೆಗೆ ರಭಸವಾಗಿ ಡಿಕ್ಕಿ ಹೊಡೆದು ಪಲ್ಟಿಯಾಗಿದೆ. ಈ ವೇಳೆ ಬಸ್‌ನಲ್ಲಿದ್ದವರ ಪೈಕಿ 25ಕ್ಕೂ ಹೆಚ್ಚು ಮಂದಿ ತೀವ್ರ ಗಾಯಗೊಂಡಿದ್ದು, ಅವರನ್ನು ಆಂಬುಲೆನ್ಸ್‌ನಲ್ಲಿ ಮದ್ದೂರು ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ ಪ್ರಥಮ ಚಿಕಿತ್ಸೆ ಕೊಡಿಸಿ, ವೈದ್ಯರ ಸಲಹೆ ಮೇರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯದ ಮಿಮ್ಸ್ ಆಸ್ಪತ್ರೆಗೆ ರವಾನಿಸಲಾಯಿತು. ಇನ್ನು ಘಟನೆಯಲ್ಲಿ ಸಣ್ಣ ಪುಟ್ಟ ಗಾಯಗೊಂಡವರಿಗೆ ಮದ್ದೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಯಿತು.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸಿಪಿಐ ನವೀನ್ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿ, ಗಾಯಾಳುಗಳನ್ನು ಆಸ್ಪತ್ರೆಗೆ ರವಾನಿಸಲು ನೆರವಾದರು. ಈ ಸಂಬಂಧ ಮದ್ದೂರು ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೇಂದ್ರ ಸಚಿವ ಹೆಚ್‌ಡಿಕೆ ಟ್ವೀಟ್

ಮಂಡ್ಯ ಜಿಲ್ಲೆ ಮದ್ದೂರು ತಾಲೂಕಿನ ಬೆಂಗಳೂರು–ಮೈಸೂರು ಹೆದ್ದಾರಿಯ ಅಗರಲಿಂಗನದೊಡ್ಡಿ ಗ್ರಾಮದ ಬಳಿ ಸಂಭವಿಸಿದ ಖಾಸಗಿ ಬಸ್ ಅಪಘಾತದಲ್ಲಿ 21ಕ್ಕೂ ಹೆಚ್ಚು ಜನರು ಗಾಯಗೊಂಡಿರುವ ಸುದ್ದಿ ತಿಳಿದು ತೀವ್ರ ಆಘಾತವಾಯಿತು. ವಿಷಯ ತಿಳಿದ ಕೂಡಲೇ ಜಿಲ್ಲಾಧಿಕಾರಿಗಳನ್ನು ದೂರವಾಣಿ ಮೂಲಕ ಸಂಪರ್ಕಿಸಿ ಗಾಯಾಳುಗಳಿಗೆ ಸೂಕ್ತ ಚಿಕಿತ್ಸಾ ಸೌಲಭ್ಯ ಕಲ್ಪಿಸುವಂತೆ ಸೂಚಿಸಿದ್ದೇನೆ. ಗಾಯಾಳುಗಳೆಲ್ಲರೂ ಶೀಘ್ರವೇ ಚೇತರಿಸಿಕೊಳ್ಳಲಿ. ಯಾರ ಪ್ರಾಣಕ್ಕೂ ಹಾನಿ ಆಗದೇ ಎಲ್ಲರೂ ಗುಣಮುಖರಾಗಿ ಮನೆಗಳಿಗೆ ಮರಳಲಿ ಎಂದು ಹಾರೈಸುತ್ತೇನೆ.

- ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ.

ಸಂಚಾರ ಅಸ್ತವ್ಯಸ್ಥ: ಬಸ್ ಪಲ್ಟಿಯಾದ ಪರಿಣಾಮ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ರಸ್ತೆ ಸಂಚಾರ ಅರ್ಧಗಂಟೆ ಅಸ್ತವ್ಯಸ್ತಗೊಂಡು ವಾಹನ ಸವಾರರು ಪರದಾಡುವಂತಾಗಿತ್ತು. ಸ್ಥಳಕ್ಕಾಗಮಿಸಿದ ಪೊಲೀಸರು ಪರಿಶೀಲಿಸಿ ವಾಹನ ಸಂಚಾರ ಸುಗಮಗೊಳಿಸಿದರು.

ಮಿಮ್ಸ್‌ಗೆ ಡಿಸಿ ಭೇಟಿ ಆರೋಗ್ಯ ವಿಚಾರಣೆ: ನಗರದ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿದ ಡಾ.ಕುಮಾರ್ ಅವರು ರಸ್ತೆ ಅಪಘಾತದಲ್ಲಿ ಗಾಯಗೊಂಡು ಚಿಕಿತ್ಸೆಗಾಗಿ ದಾಖಲಾಗಿರುವ ಗಾಯಾಳುಗಳ ಆರೋಗ್ಯದ ಸ್ಥಿತಿಗತಿಗಳ ಬಗ್ಗೆ ವಿಚಾರಿಸಿದರು. ಹಾಗೂ ಸೂಕ್ತ ಹಾಗೂ ಉತ್ತಮ ಮಟ್ಟದ ಔಷಧೋಪಚಾರಗಳನ್ನು ತುರ್ತಾಗಿ ಕೈಗೊಳ್ಳುವಂತೆ ವೈದ್ಯಾಧಿಕಾರಿಗಳಿಗೆ ತಿಳಿಸಿದರು.

ಇಂಡಿಗೋದಿಂದ ಪ್ರಯಾಣಿಕರಿಗೆ 610 ಕೋಟಿ ರೂ. ವಾಪಸ್

ನವದೆಹಲಿ, ಡಿ.7– ದೇಶಾದ್ಯಂತ ಸುಮಾರು ಒಂದು ವಾರ ವಿಮಾನ ಅಡಚಣೆಗಳ ನಂತರ ಇಂಡಿಗೋ ಕಾರ್ಯಾಚರಣೆಯನ್ನು ಚುರುಕುಗೊಳಿಸಿದೆ. ಒಟ್ಟು 610 ಕೋಟಿ ರೂ. ರೀಫಂಡ್ ಮಾಡಲಾಗುತ್ತಿದೆ. ಪ್ರಯಾಣಿಕರಿಗೆ 3,000 ಲಗ್ಗೇಜು ವಸ್ತುಗಳನ್ನು ತಲುಪಿಸಿದೆ ಎಂದು ನಾಗರಿಕ ವಿಮಾನಯಾನ ಸಚಿವಾಲಯ ಭಾನುವಾರ ತಿಳಿಸಿದೆ.

ಸಾಮಾನ್ಯವಾಗಿ ಪ್ರತಿದಿನ ಸುಮಾರು 2,300 ವಿಮಾನಗಳನ್ನು ನಿರ್ವಹಿಸುವ ವಿಮಾನಯಾನ ಸಂಸ್ಥೆಯು ಶನಿವಾರ 1,500 ಕ್ಕೂ ಹೆಚ್ಚು ವಿಮಾನಗಳನ್ನು ಓಡಿಸಿದೆ. ಭಾನುವಾರ ಸುಮಾರು 1,650 ವಿಮಾನಗಳು ನಿರ್ವಹಿಸುತ್ತಿದ್ದು, ಅದರ 138 ಸ್ಥಳಗಳ ಪೈಕಿ 135 ಸ್ಥಳಗಳನ್ನು ಮರುಸಂಪರ್ಕಿಸಿದೆ.

ಸಾಲ ನೀಡಿದ ಸ್ನೇಹಿತನ ಮನೆ ಮುಂದೆ ಸೆಲ್ಫಿ ವೀಡಿಯೊ ಮಾಡಿ ಆತ್ಮಹತ್ಯೆಗೆ ಯತ್ನಿಸಿದ ಆಟೋ ಚಾಲಕ

ನಂಜನಗೂಡು, ಡಿ.7– ಕೇವಲ 5, ಸಾವಿರ ಸಾಲಕ್ಕಾಗಿ ಪೀಡಿಸಿ ಮಾನಸಿಕವಾಗಿ ಕಿರುಕುಳ ನೀಡಿದ ಸ್ನೇಹಿತನ ಮನೆಯ ಮುಂದೆ ಸೆಲ್ಫಿ ವೀಡಿಯೊ ಮಾಡಿ ಆಟೋಚಾಲಕ ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ತಾಲೂಕಿನ ಹೆಡಿಯಾಲ ಸಮೀಪದ ಮಹದೇವನಗರ ಗ್ರಾಮದಲ್ಲಿ ಜರುಗಿದೆ. ಈ ವೀಡಿಯೊ ಸಾಮಾಜಿಕ ಜಾಲ ತಾಣದಲ್ಲಿ ವೈರಲ್ ಆಗಿದೆ.

ಮಹದೇವನಗರ ಗ್ರಾಮದ ನಿವಾಸಿ ಆತ್ಮಹತ್ಯೆಗೆ ಯತ್ನಿಸಿದವರು. ಮಹದೇವನಗರ ಗ್ರಾಮದ ವ್ಯಕ್ತಿಗಳಿಬ್ಬರು ಪರಸ್ಪರ ಸ್ನೇಹಿತರಾಗಿದ್ದರು. ಒಬ್ಬ ಸ್ನೇಹಿತ ಮತ್ತೊಬ್ಬ ಸ್ನೇಹಿತನಿಗೆ 5 ಸಾವಿರ ಸಾಲ ನೀಡಿದ್ದರು. ಸಾಲ ಕೊಟ್ಟವರು ಹಣ ಹಿಂತಿರುಗಿಸುವಂತೆ ಸಾಲ ತೆಗೆದುಕೊಂಡವರಿಗೆ ಪೀಡಿಸುತ್ತಿದ್ದರೆನ್ನಲಾಗಿದೆ. ಸಾಲಗಾರ ಸ್ನೇಹಿತ ಹಣ ಹಿಂತಿರುಗಿಸಲು ಸ್ವಲ್ಪ ಕಾಲಾವಕಾಶ ನೀಡುವಂತೆ ಕೋರಿಕೊಂಡಿದ್ದನೆನ್ನಲಾಗಿದೆ,

ಭಾನುವಾರ ಸಾಲ ಪಡೆದಿದ್ದ ವ್ಯಕ್ತಿ ತನ್ನ ಸ್ನೇಹಿತನ ಬೈಕ್ ತೆಗೆದುಕೊಂಡು ಹೆಡಿಯಾಲ ಗ್ರಾಮಕ್ಕೆ ತೆರಳಿದ್ದು, ಹೆಡಿಯಾಲ ಬಸ್ ನಿಲ್ದಾಣದ ಬಳಿ ನಿಂತಿದ್ದ ವೇಳೆ ಸಾಲ ಕೊಟ್ಟ ಸ್ನೇಹಿತ ಬಲವಂತವಾಗಿ ಬೈಕ್ ಕಿತ್ತುಕೊಂಡು ಸಾಲ ಹಿಂತಿರುಗಿಸುವಂತೆ ಹಲ್ಲೆ ನಡೆಸಿ ಪರಾರಿಯಾದರು ಎಂದು ತಿಳಿದು ಬಂದಿದೆ.

ಇದರಿಂದ ಮನನೊಂದ ಸಾಲಗಾರ ಜಮೀನಿಗೆ ಸಿಂಪಡಿಸುವ ಔಷಧಿಯನ್ನು ಖರೀದಿಸಿ, ಸಾಲ ನೀಡಿದ ಸ್ನೇಹಿತನ ಮನೆ ಮುಂದೆ ಬಂದು ತನ್ನ ಸಾವಿಗೆ ಇವರೇ ಕಾರಣ ಎಂದು ಸೆಲ್ಫಿ ವೀಡಿಯೊ ಮಾಡಿ ವಿಷ ಸೇವಿಸಿದ್ದಾನೆ, ವಿಷ ಸೇವಿಸಿ ಅಸ್ವಸ್ಥರಾದ ಈ ಸಾಲಗಾರರನ್ನು ಸರಗೂರು ತಾಲೂಕಿನ ಖಾಸಗಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿದೆ. ಈ ಸಂಬಂಧ ಯಾವುದೇ ದೂರು ದಾಖಲಾಗಿಲ್ಲ. ಆದರೆ ವಿಚಾರ ಪೊಲೀಸರ ಗಮನಕ್ಕೆ ಬಂದಿದೆ.

ಈತ ಆತ್ಮಹತ್ಯೆಗೆ ಯತ್ನಿಸಿದ ವೀಡಿಯೊ ಸಾಮಾಜಿಕ ಜಾಲ ತಾಣಗಳಲ್ಲಿ ಭಾರೀ ವೈರಲ್ ಆಗಿದ್ದು, ನಂಜನಗೂಡು ತಾಲೂಕು ಸೇರಿದಂತೆ ಎಲ್ಲೆಡೆ ಚರ್ಚೆಗೆ ಗ್ರಾಸವಾಗಿದೆ.

ಗ್ರಂಥಾಲಯ ಮೂಲಸೌಕರ್ಯಕ್ಕೆ ಆಗ್ರಹಿಸಿ ಎಐಡಿವೈಓ ಪ್ರತಿಭಟನೆ



ಮೈಸೂರಿನ ಸರಸ್ವತಿಪುರಂನಲ್ಲಿರುವ ಸಾರ್ವಜನಿಕ ಗ್ರಂಥಾಲಯದ ಎದುರು ಶುಕ್ರವಾರ ಎಐಡಿವೈಓ ಸಂಘಟನೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಡಿ.7(ಎಂಕೆ)– ಮೈಸೂರಿನ ಸರಸ್ವತಿಪುರಂನಲ್ಲಿರುವ ಸಾರ್ವಜನಿಕ ಗ್ರಂಥಾಲಯಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸುವಂತೆ ಆಗ್ರಹಿಸಿ ಗ್ರಂಥಾಲಯದ ಎದುರು ಎಐಡಿವೈಓ ಸಂಘಟನೆ ವತಿಯಿಂದ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಸಾರ್ವಜನಿಕ ಗ್ರಂಥಾಲಯಕ್ಕೆ ಪ್ರತಿದಿನ ನೂರಾರು ವಿದ್ಯಾರ್ಥಿಗಳು ಮತ್ತು ಹಿರಿಯ ನಾಗರಿಕರು ಬರುತ್ತಾರೆ. ಆದರೆ, ಇಲ್ಲಿ ಕನಿಷ್ಠ ಮೂಲ ಸೌಕರ್ಯಗಳಿಲ್ಲದೇ ತುಂಬಾ ಸಮಸ್ಯೆ ಅನುಭವಿಸುವಂತಾಗಿದೆ. ಕುಡಿಯಲು ನೀರಿನ ವ್ಯವಸ್ಥೆ ಇಲ್ಲ. ಶೌಚಾಲಯ ಇಲ್ಲ. ಕಟ್ಟಡ ಕೂಡ ಹಳೆಯದಾಗಿದ್ದು, ಮೇಲ್ಛಾವಣಿ ಕುಸಿಯುತ್ತಿದೆ. ಚೇರ್‌ಗಳು ಹಾಳಾಗಿವೆ ಎಂದು ಬೇಸರ ವ್ಯಕ್ತಪಡಿಸಿದರಲ್ಲದೆ ಕೂಡಲೇ ಗ್ರಂಥಾಲಯದಲ್ಲಿರುವ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ಒತ್ತಾಯಿಸಿದರು.

ಎಐಡಿವೈಓ ಜಿಲ್ಲಾಧ್ಯಕ್ಷೆ ಸುಮಾ ಮಾತನಾಡಿ, ಓದಲು ಬರುವ ಯಾರಾದರೊಬ್ಬರು ಏನಾದರೂ ಕೇಳಿದರೆ ಇಲ್ಲಿನ ಸಿಬ್ಬಂದಿ ಸರಿಯಾಗಿ ಪ್ರತಿಕ್ರಿಯಿಸುವುದಿಲ್ಲ. ತಾವೇನೋ ಪರೋಪಕಾರ ಮಾಡುತ್ತಿರುವಂತೆ ಮಾತನಾಡುತ್ತಾರೆ. ಗ್ರಂಥಾಲಯದ ಅಭಿವೃದ್ಧಿಗಾಗಿ ನಗರಪಾಲಿಕೆ ನೀಡುವ ಅನುದಾನ ಎಲ್ಲಿಗೆ ಹೋಯಿತು? ಎಂದು ಪ್ರಶ್ನಿಸಿದರಲ್ಲದೆ ಗ್ರಂಥಾಲಯದಲ್ಲಿ ಮೂಲ ಸೌಕರ್ಯಗಳಿಲ್ಲದೆ ಗ್ರಂಥಾಲಯಕ್ಕೆ ಬರುವವರ ಸಂಖ್ಯೆ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಹೀಗಾದರೆ ಓದುವ ಸಂಸ್ಕೃತಿಯೇ ನಾಶವಾಗುತ್ತದೆ. ಆದ್ದರಿಂದ ಕೂಡಲೇ ಸಾರ್ವಜನಿಕ ಗ್ರಂಥಾಲಯ ಇಲಾಖೆ ಅಧಿಕಾರಿಗಳು ಎಚ್ಚೆತ್ತು ಗ್ರಂಥಾಲಯದಲ್ಲಿ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ಆಗ್ರಹಿಸಿದರು. ಎಐಡಿವೈಓ ಸಂಘಟನೆಯ ನೀತುಶ್ರೀ, ಪೂರ್ಣಿಮಾ, ರಸಿಕ್, ಅಶ್ವಿನಿ ಮತ್ತಿತರರಿದ್ದರು.

ರಾಷ್ಟ್ರೀಯ ಟೆನಿಸ್ ಸಿಂಗಲ್ಸ್‌ನಲ್ಲಿ ಪದ್ಮಪ್ರಿಯಾ ರಮೇಶ್‌ಗೆ ಪ್ರಶಸ್ತಿ



ಮೈಸೂರು,ಡಿ.7(ಎಂಟಿವೈ)– ತೆಲಂಗಾಣದ ಶಮಿರ್ ಪೇಟೆಯಲ್ಲಿರುವ ಆಶ್ ಟೆನಿಸ್ ಅಕಾಡೆಮಿ ಯಲ್ಲಿ ಡಿ.1ರಿಂದ 6ರವರೆಗೆ ನಡೆದ 16 ವರ್ಷದೊಳಗಿನವರ ಬಾಲಕಿಯರ ರಾಷ್ಟ್ರೀಯ ಟೆನಿಸ್ ಸಿಂಗಲ್ಸ್ ಎಐಟಿಎ (ರಾಷ್ಟ್ರೀಯ ಸರಣಿ) ಟೂರ್ನಮೆಂಟ್‌ನಲ್ಲಿ ಮೈಸೂರಿನ ಟೆನಿಸ್ ಆಟಗಾರ್ತಿ ಪದ್ಮಪ್ರಿಯಾ ರಮೇಶ್ ಕುಮಾರ್ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದ್ದಾರೆ.

ಆಲ್ ಇಂಡಿಯಾ ಟೆನಿಸ್ ಅಸೋಸಿಯೇಷನ್ ವತಿಯಿಂದ ಜರುಗಿದ 16 ವರ್ಷದೊಳಗಿನ ಬಾಲಕಿಯರ ರಾಷ್ಟ್ರೀಯ ರಾಷ್ಟ್ರಮಟ್ಟದ ಟೆನಿಸ್ ಪಂದ್ಯಾವಳಿಯಲ್ಲಿ ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ ಮೈಸೂರಿನ ಉದಯೋನ್ಮುಖ ಟೆನಿಸ್ ಪಟು ಪದ್ಮಪ್ರಿಯಾ ರಮೇಶ್‌ಕುಮಾರ್ ಅವರು ಎದುರಾಳಿ ಅನಿಹಾ ಗವಿನೋಲ್ಲಾ ಅವರನ್ನು 6–3, 6–3 ಸೆಟ್‌ಗಳಿಂದ ಸೋಲಿಸಿ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದ್ದಾರೆ.

ಇದಕ್ಕೂ ಮುನ್ನ ಸೆಮಿಫೈನಲ್‌ನಲ್ಲಿ ಪದ್ಮಪ್ರಿಯಾ ಅವರು ಎದುರಾಳಿ ಅಂಜಲ್ಲೆ ಮೇಕಾ ಅವರನ್ನು 6–1, 6–1 ಅಂತರದಲ್ಲಿ ಸೋಲಿಸಿ, ಫೈನಲ್ ಪ್ರವೇಶಿಸಿದ್ದರು. ಕ್ವಾರ್ಟರ್ ಫೈನಲ್ಸ್‌ನಲ್ಲಿ ಪದ್ಮಪ್ರಿಯಾ ಎದುರಾಳಿ ಭೃತಿ ವೆಲ್ಲಾಡಿಂಡಿ ಅವರನ್ನು 6–7(5), 6–2, 6–0 ಅಂತರದಿಂದ ಸೋಲಿಸಿದ್ದರು.

ಬಾಲಕಿಯರ ಡಬಲ್ಸ್ ರನ್ನರ್ ಅಪ್: ಇದೇ ಪಂದ್ಯಾವಳಿಯ ಡಬಲ್ಸ್ ವಿಭಾಗದಲ್ಲೂ ಮೈಸೂರಿನ ಪದ್ಮಪ್ರಿಯಾ ರಮೇಶ್ ಕುಮಾರ್ ಉತ್ತಮ ಪ್ರದರ್ಶನ ನೀಡಿದ್ದಾರೆ. ತನ್ನ ಜೊತೆ ಆಟಗಾರ್ತಿ ಶಾಜ್ಞಾ ಅವರೊಂದಿಗೆ ಉತ್ತಮ ಆಟ ಪ್ರದರ್ಶಿಸಿ ಡಬಲ್ಸ್ ಫೈನಲ್ ಪಂದ್ಯದಲ್ಲಿ ರನ್ನರ್ಸ್–ಅಪ್ ಪ್ರಶಸ್ತಿ ಗೆದ್ದಿದ್ದಾರೆ. ಈ ಜೋಡಿ ಫೈನಲ್ ಪಂದ್ಯದಲ್ಲಿ ಮೇಕಾ ಅಂಜಲ್ಲೆ ಹಾಗೂ ಸಾನಿಧ್ಯ ಕಾರುತೋಶ್ ಜೋಡಿಯ ವಿರುದ್ಧ 6–4: 2–6: 9–11 ಅಂತರದಿಂದ ಸೋಲನುಭವಿಸಿ ರನ್ನರ್ ಅಪ್ ಪ್ರಶಸ್ತಿ ಪಡೆದುಕೊಂಡಿದೆ.

ಅಗ್ರ ಶ್ರೇಯಾಂಕ: ಅರಣ್ಯ ಇಲಾಖೆಯ ಹುಲಿ ಯೋಜನೆ ನಿರ್ದೇಶಕ ಡಾ.ಪಿ. ರಮೇಶ್‌ಕುಮಾರ್, ಮೈಸೂರು ಕಾರ್ಯಯೋಜನೆಯ ಸಿಎಫ್ ಡಾ.ಮಾಲತಿ ಪ್ರಿಯಾ ದಂಪತಿ ಪುತ್ರಿಯಾಗಿರುವ ಪದ್ಮಪ್ರಿಯಾ 14 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ (ಆಲ್ ಇಂಡಿಯಾ ಟೆನಿಸ್ ಅಸೋಸಿಯೇಷನ್– ಎಐಟಿಎ ಶ್ರೇಯಾಂಕ) ಭಾರತದ ನಂ.1 ಆಟಗಾರ್ತಿ ಹಾಗೂ ಏಷ್ಯಾ ನಂ.6 (ಏಷ್ಯಾ ಟೆನಿಸ್ ಫೆಡರೇಶನ್– ಎಟಿಎಫ್ ಶ್ರೇಯಾಂಕ) ಆಟಗಾರ್ತಿ ಎನಿಸಿದ್ದಾರೆ. ಮೈಸೂರಿನ ಎಕ್ಸೆಲ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿಯಾಗಿರುವ ಈಕೆ ರಘುವೀರ್ ಪೊನ್ನುಸ್ವಾಮಿ, ಸಾಗರ್ ಅವರಿಂದ ತರಬೇತಿ ಪಡೆಯುತ್ತಿದ್ದಾರೆ. ಪದ್ಮಪ್ರಿಯಾ ಅವರ ಸಾಧನೆಗೆ ಎಕ್ಸೆಲ್ ಪಬ್ಲಿಕ್ ಶಾಲೆಯ ಪ್ರಾಂಶುಪಾಲರಾದ ಕೆ. ಜೆ. ಮ್ಯಾಥ್ಯೂಸ್ ಸೇರಿದಂತೆ ಶಾಲೆಯ ಶಿಕ್ಷಕ ವರ್ಗ ಪ್ರಶಂಸೆ ವ್ಯಕ್ತಪಡಿಸಿದೆ.